
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

10 ಏಪ್ರಿಲ್, 2013 ಪುಟ 20 ರೂ. 14/-


ಶಿವಮೊಗ್ಗ ಟಿಕೆಟ್ ಮರ್ಮ

ಬಿಜೆಪಿ ಕಾಮಾಯಣ






ಥೂ.. ಹಲ್ಕಾಗಳಾ



ಬಿರುಕು ಕಿರಿಕ್ಕು



ಚುನಾವಣೆ ಸಮೀಕ್ಷೆ

ಗಳೂರು-ಉತ್ತರ ಕನ್ನಡ-ಮಂಡ್ಯ-ದಾವಣಗೆರೆ














ಗೀತಾ ಶಿವರಾಜ್‌ಕುಮಾರ್

ಕಣಕ್ಕೆ?



•ಪಾರ್ವತೀಶ ಬಿಡಿ ಚಿತ್ರಗಳು

bparvateesha@gmail.com

ಬಂದಿದ್ದರು. ಅದೇ ರೀತಿ 20 ಕೋಟಿ ರೂ. ತನಕದ ಆಸ್ತಿವಂತರ ಪೈಕಿ 35.5% ಜನ ಗೆದ್ದರೆ ಅದಕ್ಕೂ ಹೆಚ್ಚಿನ ಹಣವಂತ ಅಭ್ಯರ್ಥಿಗಳಾಗಿ ಸ್ಪರ್ಧಿಸಿದ್ದ ಪ್ರತಿ ಇಬ್ಬರಲ್ಲಿ ಒಬ್ಬ ಗೆದ್ದೇ ಗೆದ್ದಿದ್ದಾನೆ. ಅಂದರೆ ಅಭ್ಯರ್ಥಿಯೊಬ್ಬ ಶ್ರೀಮಂತನಾಗಿದ್ದರೆ ಗೆಲ್ಲುವ ಸಾಧ್ಯತೆ ಶೇ. 50ರಷ್ಟು ಖಚಿತ ಎಂದಾಯಿತು.


ಇದು ಎಲ್ಲಾ ಪಕ್ಷಗಳಿಗೂ ಅನ್ವಯಿಸುವ ಮಾತು.

ಹೀಗೆ ಒಂದು ಸಾರಿ ದುಡ್ಡಿನಿಂದಲೇ ಎಲೆಕ್ಷನ್, ಎಲೆಕ್ಷನ್‌ಗಾಗಿ ದುಡ್ಡು ಎನ್ನುವ ವಿಷ ಚಕ್ರ ತಿರುಗಲು ಶುರುವಾಗಿ ಬಿಟ್ಟರೆ ಅದು ತಕ್ಷಣವೇ ಅಧಿಕಾರ ಹಿಡಿಯಲು ದುಡ್ಡೆಂತಲೂ, ದುಡ್ಡು ಮಾಡಲು ಅಧಿಕಾರವೆಂಬ ಇನ್ನೊಂದು ಹಂತಕ್ಕೆ ಸಾಗುತ್ತದೆ.

ನಮ್ಮ ಮುಂದಿರುವ ಎಲ್ಲಾ ರಾಜಕೀ[ಯ] ಪಕ್ಷಗಳೂ ಈಗ ಮುಳ್ಳಿನ ಪೊದೆಯ [ರೀತಿ] ಬೆಳೆದುಕೊಂಡಿವೆ. ಒಂದು ಚುನಾವಣೆಯ[ಲ್ಲಿ] ಗೆಲ್ಲುವ ಪಾರ್ಟಿಯು ಸೋತವರಿಂದ ಇ[ದೇ] ಬಟ್ಟೆ ಕಿತ್ತು ತಾನು ಧರಿಸುವಾಗ ಹರಿಯತೊ[ಡಗಿ] ಈಗ ಚಿಂದಿ ಬಟ್ಟೆಯ ಸ್ಥಿತಿ ತಲುಪಿದೆ.

ಮುಳ್ಳಿನ ಮೇಲಿನ ಚಿಂದಿಬಟ್ಟೆಯಾಗಿರುವ ಡೆಮಾಕ್ರಸಿ

ಮುಂದಿನ ನಲವತ್ತು ದಿನಗಳಲ್ಲಿ ನಮ್ಮ ತಾಯ್ನಾಡಿನ ಹೊಸ ಮಾಲೀಕರು ಯಾರಾಗಬೇಕೆಂಬುದು ನಿರ್ಧಾರವಾಗಲಿದೆ.



ಶಾಮಣ್ಣ

ನಾನಿಲ್ಲಿ ಬೇಕಂತಲೇ ಶಾಸಕರು, ಜನಪ್ರತಿನಿಧಿಗಳು ಅಥವಾ ಹೊಸ ಸರ್ಕಾರ ಎನ್ನುವ ಬದಲಿಗೆ ಹೊಸ ಮಾಲೀಕರು ಎಂದು ಕಾಣಿಸುತ್ತಿದ್ದೇನೆ. ಏಕೆಂದರೆ ಈ ಹಿಂದೆಯಾಗಲಿ ಅಥವಾ ಮುಂದಿನ ದಿನಗಳಲ್ಲಾಗಲಿ ನೀವು ಆರಿಸಿ ವಿಧಾನಸೌಧಕ್ಕೆ ಕಳಿಸುವ ಜನರು ಜನಪ್ರತಿನಿಧಿಗಳಂತಿರದೆ ಈ ನಾಡಿನ ಮಾಲೀಕರಂತೆಯೂ, ಈ ರಾಜ್ಯವನ್ನು ತಮ್ಮ ಖಾಸಗಿ ಆಸ್ತಿಯಂತೆಯೂ ಭಾವಿಸಿ ಲೂಟಿ ಮಾಡುವುದು ಖಚಿತ ಎಂಬ ಕಾರಣಕ್ಕೆ.

ಈಗಾಗಲೇ ಕಾಂಗ್ರೆಸ್ ಪಾರ್ಟಿ ಅರ್ಧ ಚುನಾವಣೆ ಗೆದ್ದೇ ಬಿಟ್ಟೆವೆಂಬ ಹುಮ್ಮಸ್ಸಿನಲ್ಲಿದೆ. ಟಿಕೆಟ್ ಹಂಚುವ ನಿರ್ಣಾಯಕ ನಿರ್ಧಾರ ಮಾಡಬಲ್ಲ ನಾಯಕರು ಯಾರ ಕೈಗೂ ಸಿಗದಂತೆ ಭೂಗತರಾಗಿದ್ದಾರೆ. ನಾಳೆ ಎಲೆಕ್ಷನ್ ಮುಗಿದ ನಂತರ ಅಧಿಕಾರಕ್ಕೆ ಬಂದ ಮೇಲೂ ಈ ನಾಯಕರು ಜನರ ಕೈಗೆ ಸಿಗುವುದಿಲ್ಲ, ಇವರಿಂದ ಟಿಕೆಟ್ ಪಡೆದು ಗೆದ್ದು ಶಾಸಕರಾಗುವವರೂ ಜನರ ಕೈಗೆ ಸಿಗುವುದಿಲ್ಲ, ಇದು ಖಚಿತ.

ಇವರ ಗದ್ದಲದಲ್ಲೇ ನಮ್ಮ ಸಂಸದೀಯ ಪ್ರಜಾಪ್ರಭುತ್ವವೆಂಬ ವ್ಯವಸ್ಥೆಯ ಗುಣಮಟ್ಟ ಕಳೆದ 60 ವರ್ಷಗಳಲ್ಲಿ ಉತ್ತಮಗೊಂಡಿದೆಯಾ ಇಲ್ಲ ಪಾತಾಳ ತಲುಪಿದೆಯಾ ಎಂದು ನೋಡಿದರೆ ದಿಗಿಲಾಗುವಂತಿದೆ.

ನಾವೆಲ್ಲಾ ಸಂಸದೀಯ ಪ್ರಜಾಪ್ರಭುತ್ವವೆಂಬ ಹೊಸ ಬಟ್ಟೆಯನ್ನು ರೆಡಿ ಮಾಡಿ ಕರ್ನಾಟಕಕ್ಕೆ ತೊಡಿಸಿದ ಮೇಲೆ ಅದು ಚುನಾವಣೆಗಳ ಮೂಲಕ ರಾಜಕೀಯ ಪಕ್ಷಗಳ ಮೈಯನ್ನು ಅಲಂಕರಿಸುತ್ತದೆ. ನಮ್ಮ ಮುಂದಿರುವ ಎಲ್ಲಾ ರಾಜಕೀಯ ಪಕ್ಷಗಳೂ ಈಗ ಮುಳ್ಳಿನ ಪೊದೆಯ ರೀತಿ ಬೆಳೆದುಕೊಂಡಿವೆ. ಒಂದು ಚುನಾವಣೆಯಲ್ಲಿ ಗೆಲ್ಲುವ ಪಾರ್ಟಿಯು ಸೋತವರಿಂದ ಇದೇ ಬಟ್ಟೆ ಕಿತ್ತು ತಾನು ಧರಿಸುವಾಗ ಹರಿಯತೊಡಗಿ ಈಗ ಚಿಂದಿ ಬಟ್ಟೆಯ ಸ್ಥಿತಿ ತಲುಪಿದೆ. ಎಷ್ಟೆಂದರೂ ರಾಜಕೀಯ ಅಧಿಕಾರವೆಂಬ ಸಂಸದೀಯ ಪ್ರಜಾಸತ್ತೆಯ ಉಡುಗೆಯನ್ನು ಒಂದು ರಾಜಕೀಯ ಪಕ್ಷವೆಂಬ ಮುಳ್ಳಿನ ಗಿಡದಿಂದ ಬದಲಿಸಿ ಇನ್ನೊಂದು ಮುಳ್ಳಿನ ಗಿಡದ ಮೇಲೆ ಹರಡುವ ಪ್ರಕ್ರಿಯೆಯಷ್ಟೇ ಆಗಿಹೋಗಿದೆ ತಾನೆ.

ಇಲ್ಲಿ ಅಸ್ತಿತ್ವವೇ ಇರದಂತೆ ಮಾಯವಾಗಿರುವುದು ನೈಜ ಪ್ರಜಾತಂತ್ರದ ಸ್ಫೂರ್ತಿ ಮತ್ತು ಮೌಲ್ಯಗಳು.

ಉದಾಹರಣೆಗೆ ಕಾಂಗ್ರೆಸ್ ಪಕ್ಷದ ನಡವಳಿಕೆಯನ್ನೇ ಗಮನಿಸಿ.

ಜಗದೀಶ್ ಶೆಟ್ಟರ್ ಸರ್ಕಾರಕ್ಕೆ ನಿಜವಾದ ಬಹುಮತ ಇದೆಯಾ ಇಲ್ಲವಾ ಎಂಬುದೇ ಕಳೆದೆರಡು ತಿಂಗಳಿಂದ ಯಾರೂ ಪ್ರಶ್ನಿಸಲಿಲ್ಲ, ಬಿಜೆಪಿಯಲ್ಲಿದ್ದ ಅನೇಕ ಶಾಸಕರು, ಸಚಿವರು ರಾಜೀನಾಮೆ ನೀಡಿ ಹೊರಬಂದಾಗಲೂ ಕಾಂಗ್ರೆ-ಜೆಡಿಎಸ್ ಯಾರೂ ಸದನದಲ್ಲಿ ಅವಿಶ್ವಾಸ ನಿರ್ಣಯ ಮಂಡಿಸಲಿಲ್ಲ, ಹೇಗೂ ಶೆಟ್ಟರ್ ಅಧಿಕಾರದಲ್ಲಿ ಇರುವುದು ಒಂದೆರಡು ತಿಂಗಳು ತಾನೆ, ಇದ್ದುಕೊಂಡು ಹಾಳಾಗಲಿ, ತಾವೇಕೆ ಸುಮ್ಮನೆ ಅವಿಶ್ವಾಸ ನಿರ್ಣಯ ಮಂಡಿಸಿ ಬಿಜೆಪಿ ಸರ್ಕಾರ ಬೀಳಿಸಿದೆವೆಂಬ ಕಳಂಕ ಹೊರಬೇಕೆಂಬ ಕುತಂತ್ರ ಬುದ್ಧಿಯನ್ನು ಕಾಂಗ್ರೆಸ್ ಪ್ರದರ್ಶಿಸಿತು. ಹಾಗೆ ನರಿ ಬುದ್ಧಿ ತೋರಿಸಿ ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ಕೊಡಲಿ ಏಟು ಹಾಕಿತು. ಶೆಟ್ಟರ್ ಈ ಅವಕಾಶ ಬಳಸಿಕೊಂಡರು. ಬಹುಮತ ಇಲ್ಲದಿದ್ದಾಗಲೂ ಮುಖ್ಯಮಂತ್ರಿಯಾಗಿ ಸರ್ಕಾರ ನಡೆಸುತ್ತಾ ಈಗಲೂ ಉಸ್ತುವಾರಿ ಸರ್ಕಾರದ ಮುಖ್ಯಸ್ಥರಾಗಿದ್ದಾರೆ. "ಬಿಜೆಪಿ ಹೇಗೂ ಸತ್ತ ಹಾವಿನಂತಿದೆ. ಅದನ್ನು ಮತ್ತೇಕೆ ಬಡಿದು ಅದಕ್ಕೆ 'ಹುತಾತ್ಮ ಪಟ್ಟ' ನೀಡಿ ಜನರ ಸಿಂಪಥಿ ಪಡೆಯುವ ಅವಕಾಶ ಕಲ್ಪಿಸಿಕೊಡಬೇಕು" ಎಂಬ ಕಾಂಗ್ರೆಸ್‌ನ ತರ್ಕ ಬಿಜೆಪಿಗೆ ಅನುಕೂಲಕರ ನಿಜ.

ಆದರೆ ಪ್ರಜಾಪ್ರಭುತ್ವದ ಗತಿ?

ಇವತ್ತು ಚುನಾವಣೆ ಎಂಬುದು ನಮ್ಮ ರಾಜಕೀಯ ಪಕ್ಷಗಳು ಪ್ರಜಾಪ್ರಭುತ್ವದ ಮೌಲ್ಯಗಳ ವಿರುದ್ಧ ನಡೆಸುವ ಯುದ್ಧದಂತಾಗಿದೆ. ಅಲ್ಲಿ ಯಾವನೇ ಗೆದ್ದರೂ ಸೋಲುವುದು ಮಾತ್ರ ಪ್ರಜಾಪ್ರಭುತ್ವವೆ.

2008ರಲ್ಲಿ ಕರ್ನಾಟಕ ವಿಧಾನಸಭಾ ಚುನಾವಣೆಗಳಾದಾಗ **'Karnataka Election watch'** ಎಂಬ ಒಂದು ಗುಂಪು ಚುನಾವಣೆಗೆ ಸ್ಪರ್ಧಿಸಿದ್ದ ನಂತರ ಗೆದ್ದವರ ಹಿನ್ನೆಲೆ, ಆಸ್ತಿ, ಹಣ, ಕ್ರಿಮಿನಲ್ ಹಿನ್ನೆಲೆಗಳ ಬಗ್ಗೆ ಒಂದು ಅಧ್ಯಯನ ವರದಿ ಪ್ರಕಟಿಸಿತ್ತು, ಕಾಂಗ್ರೆಸ್-ಜೆಡಿಎಸ್ ಹಾಗೂ ಬಿಜೆಪಿಗೆ ಸೇರಿದ್ದ ಈ ರಾಜಕಾರಣಿಗಳು ಅದೆಷ್ಟು ವೇಗದಲ್ಲಿ ಅಕ್ರಮ ಆಸ್ತಿ ಗಳಿಸಿ ಕೋಟ್ಯಾಧೀಶರಾದರೆಂಬ ವಿವರ ನೋಡಿದರೆ ತಲೆ ಸುತ್ತು ಬಂದಂತಾಗುತ್ತದೆ. ಅಭ್ಯರ್ಥಿಯೊಬ್ಬನ ಶ್ರೀಮಂತಿಕೆಗೂ ಅಂತವರು ಎಲೆಕ್ಷನ್‌ನಲ್ಲಿ ಗೆದ್ದೇ ಗೆಲ್ಲುವ ಸಾಧ್ಯತೆಗಳಿಗೂ ಇರುವ ಒಳಸಂಬಂಧವನ್ನು ಈ ಅಧ್ಯಯನ ಬಹಿರಂಗಗೊಳಿಸಿದೆ.

ಉದಾಹರಣೆಗೆ 50 ಲಕ್ಷ ರೂಪಾಯಿಗಳ ಸಣ್ಣ ಆಸ್ತಿವಂತರಾಗಿ ಸ್ಪರ್ಧಿಸಿದ್ದವರ ಪೈಕಿ ಗೆದ್ದವರು ಶೇಕಡ 6.5 ಮಾತ್ರ. ಆದರೆ ಮೂರು ಕೋಟಿ ರೂಪಾಯಿಗಳಷ್ಟು ಆಸ್ತಿ-ಹಣ ಹೊಂದಿದ್ದವರ ಪೈಕಿ 26.4% ರಷ್ಟು ಅಭ್ಯರ್ಥಿಗಳು ಗೆದ್ದು

ಈ ಪ್ರಕ್ರಿಯೆಯಲ್ಲಿ ಕಣ್ಮರೆಯಾಗುವುದು ಪ್ರಜಾಪ್ರಭುತ್ವವಲ್ಲವೆ?

ಈಗಿನ ಚುನಾವಣೆಯನ್ನೇ ಗಮನಿಸಿ. ಕಾಟಾಚಾರಕ್ಕೆಂಬಂತೆ ಎಲ್ಲಾ ಪಕ್ಷಗಳೂ ತಮ್ಮದೆಂಬ ಒಂದು ಪ್ರಣಾಳಿಕೆ ಬಿಡುಗಡೆ ಮಾಡುತ್ತವಾದರೂ ಅದರೊಳಗೆ ಠೊಳ್ಳು ಕುಟ್ಟುವ ಮಾತೇ ತುಂಬಿರುತ್ತದೆ.


ಕರ್ನಾಟಕದ ಜನಜೀವನ, ಕೃಷಿ, ಕೈಗಾರಿಕೆ, ನೀರಾವರಿ, ಅರಣ್ಯ, ಶಿಕ್ಷಣ, ಸ್ಥಳೀಯ ತಂತ್ರಜ್ಞಾನ ಬೆಳೆಸುವ ಒಟ್ಟಾರೆಯಾಗಿ ಒಂದು ಸ್ವಾವಲಂಬಿ ನಾಡು ಕಟ್ಟುವ ಖಚಿತ ಧೋರಣೆಗಳೇ ಇರುವುದಿಲ್ಲ, ಅದರ ಬದಲಾಗಿ ಏನಾದರೂ ನಾಟಕ ಮಾಡಿ ಎಲೆಕ್ಷನ್ ಎನ್ನುವ ಪರೀಕ್ಷೆ ಪಾಸು ಮಾಡಿಕೊಂಡು ಬಿಟ್ಟರೆ ಆಮೇಲೆ ಯಾವನ ಹಂಗೂ ಯಾರಿಗೂ ಇರುವುದಿಲ್ಲವೆಂಬ ಧೋರಣೆ ಮಾತ್ರ ಕಾಣುತ್ತದೆ. ಹೀಗೆ ತಂತ್ರ ಮಾಡಿ ಗೆದ್ದವರೆಲ್ಲ ಅರ್ಜೆಂಟಾಗಿ ದುಡ್ಡು ಮಾಡಲು ಹೊರಡುತ್ತಾರೆ. ಕಳೆದ ಬಾರಿಯ ಎಲೆಕ್ಷನ್‌ನ ಅಂಕಿಅಂಶವನ್ನೇ ನೋಡುವುದಾದರೆ ಬಿಜೆಪಿಯ 40 ಮಂದಿ ಶಾಸಕರ ಆಸ್ತಿಯು ಶೇ. 152ರಷ್ಟು ಹೆಚ್ಚಾಗಿತ್ತು, ಕಾಂಗ್ರೆಸ 35 ಶಾಸಕರ ಆಸ್ತಿಯು ಶೇ. 202 ರಷ್ಟು ಬೆಳೆದಿತ್ತು, ಹಾಗೂ ಜೆಡಿಎಸ್‌ನ 16 ಶಾಸಕರ ಗಳಿಕೆ ಶೇ. 113 ರಷ್ಟು ಬೆಳೆದಿತ್ತು. ಇಲ್ಲಿ ಇನ್ನು ಒಂದು ಅಂಕಿಅಂಶವಿದೆ.

ಪಕ್ಷ	ಶಾಸಕರ ಸಂಖ್ಯೆ	2004ರ ಆಸ್ತಿ	2008ರಲ್ಲಿ	ಏರಿಕೆ
1. ಬಿಜೆಪಿ	66	65 ಕೋಟಿ	258	193.3
2. ಕಾಂಗ್ರೆಸ್	85	116.8 ಕೋಟಿ	775.3	658.5
3. ಜೆಡಿಎಸ್	51	35.6 ಕೋಟಿ	191.1	155.5
4. ಇತರರು	22	10.4 ಕೋಟಿ	46.5	36.1
ಒಟ್ಟು	224	227.8 ಕೋಟಿ	1271.5	1043.6

ಇವರ ಪೈಕಿ ಕೆಲವು ಶಾಸಕ-ಮಂತ್ರಿಗಳ ವೈಯಕ್ತಿಕ ವಿವರಗಳನ್ನಿಟ್ಟುಕೊಂಡೇ ನೋಡೋಣವಾ.

- ಇವೆಲ್ಲಾ ಕೇವಲ ಸ್ಯಾಂಪಲ್‌ಗಳು ಮಾತ್ರ.


ಇಂತವರೆಲ್ಲ ಒಮ್ಮೆ ಎಲೆಕ್ಷನ್ ಗೆದ್ದು ಶಾಸಕರಾದರೆ ಸಾಕು ಅ[ವರ] ಶ್ರೀಮಂತಿಕೆಯ ಗ್ರಾಫು ರಾಕೆಟ್ ಸ್ಪೀಡಿನಲ್ಲಿ ಏರಲು ಶುರು. ಹಾಗೆ ಹೇಳಬೇಕೆ[ಂದರೆ] ಕರ್ನಾಟಕದಂತಹ ದುರ್ದೈವದ ರಾಜ್ಯವೂ ಸೇರಿದಂತೆ ಮೂರನೇ ಜ[ಗತ್ತಿನ] ದೇಶಗಳಲ್ಲೂ ಕೂಡಾ ಆಯಾ ರಾಜಕಾರಣಿಗಳ- ಉನ್ನತ ಅಧಿಕಾರಿಗಳ ಆ[ಸ್ತಿ] ಬೆಳೆಯುತ್ತಿವೆಯೇ ವಿನಃ ಆಯಾ ನಾಡಿನ ಕೃಷಿ-ಕೈಗಾರಿಕೆ-ಶಿಕ್ಷಣ-ಆರೋ[ಗ್ಯ] ಗ್ರಾಫುಗಳು ಎಂದೆಂದೂ ಏರಿಕೆಯಾಗುವುದೇ ಇಲ್ಲ, ಇನ್ನು ದುಗ[...] ಚುನಾವಣೆಗಳಲ್ಲೂ ಇವೆಲ್ಲ ಚರ್ಚೆಯ ಅಜೆಂಡಾ ಆಗ[...] ಓಟು ಹಾಕುವಾಗ ಒಂದು ಅರ್ಹತೆ-ಅನರ್ಹ[ತೆಯ] ಮಾನದಂಡವೂ ಆಗುತ್ತಿಲ್ಲ.



ನಜೀರ್ ಸಾಬ್

ಕೆಲ ದಶಕಗಳ ಹಿಂದಿನ ವಾತಾವರಣ ನಿಜಕ್ಕೂ [...] ಪ್ರಮಾಣದಲ್ಲಿ ಕೆಟ್ಟಿರಲಿಲ್ಲ. 1983ರ ಚುನಾವಣೆ[...] ಕೈಲಿ ಹಣವೇ ಇರದಿದ್ದ ನಜೀರ್ ಸಾಬ್, ಎ[...] ಪ್ರಕಾಶ್, ವೈಜನಾಥ್ ಪಾಟೀಲ್ ತರದ ಅನೇಕರು [...] ಶಾಸಕ-ಮಂತ್ರಿಗಳಾಗಿದ್ದರು. ಬೆಂಗಳೂರಿನಲ್ಲಿ ಟಿ.[...] ಶಾಮಣ್ಣ ತರದ ಜನನಾಯಕರಿದ್ದರು. ಹ[...] ಪೀಳಿಗೆಯವರಿಗೆ ಕೇಳಿಯೂ ಗೊತ್ತಿರದ ಇ[...] ರಾಜಕಾರಣಿಗಳು ನೆನಪಿಸಿಕೊಳ್ಳಲು ಇಷ್ಟಪಡದ ಹೆ[ಸರು] ಶಾಮಣ್ಣನವರದ್ದು. ಕೆಲ ದಶಕಗಳ ಹಿಂದೆ ಬೆಂಗಳೂರು ನಗರ ಸಭಾಸದಸ್ಯ[...] ನಂತರ ಮೂರು ಬಾರಿ ಬಸವನಗುಡಿಯಿಂದ ಶಾಸಕರಾಗಿ ಗೆದ್ದು ಬ[...] ಶಾಮಣ್ಣ ಮೊದಲು ಸೈಕಲ್‌ನಲ್ಲಿ ಓಡಾಡುತ್ತಿದ್ದರು. ನಂತರ ಒಂದು ಆಟೋ[...] ಮಾತ್ರ ಇಟ್ಟುಕೊಂಡಿದ್ದರು. 1980ರಲ್ಲಿ ಇಂದಿರಾಗಾಂಧಿಯ ಪ್ರ[...] ಅಲೆಯಿದ್ದಾಗಲೂ ಇಡೀ ದಕ್ಷಿಣ ಭಾರತದಿಂದ ಜನತಾ ಪಕ್ಷದಿಂದ ಗ[ೆದ್ದು] ಸಂಸತ್‌ಗೆ ಹೋದ ಏಕೈಕ ವ್ಯಕ್ತಿ ಈ ಶಾಮಣ್ಣ, ಆಗಲೂ ಶಾಮ[ಣ್ಣ] ಆಟೋರಿಕ್ಷಾನೇ ವಾಹನ. ಅವರು ಬದುಕಿದ್ದಷ್ಟು ದಿನ ಕಾಂಗ್ರೆಸ್‌ನ ಎಂ[...] ಘಟಾನುಘಟಿಗಳು ಎದುರಿಗೆ ನಿಂತರೂ ಸಾಕು, ಶರ್ಮ ಟ್ರಾನ್ಸ್‌ಪೋರ್ಟ್ [...] ಕೋಟ್ಯಾಧಿಪತಿ ಮಾಲೀಕನೆ ಸ್ಪರ್ಧಿಸಿದ್ದರೂ ಜನರ ಮಿತ್ರನಂತಿದ್ದ ಶಾಮಣ್ಣನ[ವರನ್ನು] ಸೋಲಿಸಲು ಆಗಲೇ ಇಲ್ಲ, ಇದರರ್ಥ ಇಷ್ಟೆ, ಶಾಸಕರಾಗಬಯಸುವವ[...] ಜನಾನುರಾಗಿಯಾಗಿದ್ದರೆ ಸಾಕಷ್ಟು ಚುನಾವಣೆ ಗೆಲ್ಲಲು ಕೋಟ್ಯಂತರ ರೂಪಾ[ಯಿ] ಬೇಕೇಬೇಕು ಎಂಬಷ್ಟು ವಾತಾವರಣ ಆಗ ಇರಲಿಲ್ಲ.

ಗೆದ್ದ ಶಾಸಕರ ಹೆಸರು	ಸ್ಪರ್ಧಿಸಿದ್ದ ಪಕ್ಷ	ಕ್ಷೇತ್ರ	ಆಸ್ತಿ 2004ರಲ್ಲಿ(ಕೋಟಿ ರೂ.ಗಳಲ್ಲಿ)	2008ರಲ್ಲಿ
1. ಎಂ. ಶ್ರೀನಿವಾಸ್	ಬಿಜೆಪಿ	ರಾಜರಾಜೇಶ್ವರಿ ನಗರ	5.50	52.94
2. ಪಿ.ಸಿ. ಮೋಹನ್	ಬಿಜೆಪಿ	ಗಾಂಧಿನಗರ	3.50	14.94
3. ಅನಿಲ್ ಲಾಡ್	ಕಾಂಗ್ರೆಸ್	ಬಳ್ಳಾರಿ	7.07	172.72
4. ಆರ್.ವಿ. ದೇಶಪಾಂಡೆ	ಕಾಂಗ್ರೆಸ್	ಹಳಿಯಾಳ	5.31	116.39
5. ಡಿ.ಸಿ. ತಮ್ಮಣ್ಣ	ಕಾಂಗ್ರೆಸ್	ಮದ್ದೂರು	5.71	59.39
6. ಸಾ.ರಾ. ಮಹೇಶ್	ಜೆಡಿಎಸ್	ಕೃಷ್ಣರಾಜನಗರ	1.60	21.64
7. ಮಧು ಬಂಗಾರಪ್ಪ	ಜೆಡಿಎಸ್	ಸೊರಬ	0.94	15.38



ನಾಳಿನ ಚುನಾವಣೆಯಲ್ಲಿ ಒಂದು ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಪಕ್ಷಗಳ ಅಭ್ಯರ್ಥಿಗಳ ಒಟ್ಟಾರೆ ಖರ್ಚು ಸರಾಸರಿ ಹತ್ತು ಕೋಟಿ ರೂಪಾಯಿಗಳಷ್ಟಾಗುತ್ತದೆ ಎಂದಿಟ್ಟುಕೊಂಡರೆ ಅದರ ಒಟ್ಟು ಮೊತ್ತ ಎರಡೂವರೆ ಸಾವಿರ ಕೋಟಿ ರೂಪಾಯಿ ಆಗುತ್ತದೆ. ಇಷ್ಟು ಹಣವನ್ನು ಬಂಡವಾಳವಾಗಿ ತೊಡಗಿಸುವ ಪುಢಾರಿಗಳು ನಮ್ಮ ನಾಡಿನ ಅಧಿಕಾರದ ಚುಕ್ಕಾಣಿ ಹಿಡಿದರೆ ಮಾಡಿರುವ ಖರ್ಚಿನ ಹತ್ತು ಪಟ್ಟು ಕಿತ್ತು ತಿನ್ನಲು ರೆಡಿಯಾಗುತ್ತಾರೆ. ಇವರು ಸರ್ಕಾರಿ ತಿಜೋರಿಗೆ ನೇರವಾಗಿ ಕೈ ಹಾಕುತ್ತಾರೆ. ಎಲೆಕ್ಷನ್ ಉಮೇದಿನಲ್ಲಿ ಭ್ರಷ್ಟ ಹಣದಲ್ಲಿ ಪಾಲು ಪಡೆಯುವ ಸಾಮಾನ್ಯ ಜನರು 'ಹರ್ಷದ ಕೂಳಿಗೆ ಆಸೆ ಪಟ್ಟು ವರ್ಷದ ಕೂಳು ಕಳೆದುಕೊಳ್ಳುವಂತೆ' ಖಾಯಂ ಬಡವರಾಗಿಯೇ ಉಳಿಯುತ್ತಾರೆ.

ಈ ಗದ್ದಲದಲ್ಲಿ ಹಳೆಯ ಮುಳ್ಳಿನ ಗಿಡದ ಮೇಲಿರುವ ದೆಮಾಕ್ರಸಿಯೆಂಬ ಬಟ್ಟೆಯನ್ನು ತೆಗೆದು ಹೊಸ ಮುಳ್ಳಿನ ಮೇಲೆ ಹೊದಿಸುವ ಕೆಲಸ ಆಗುತ್ತಿದೆ. ○

ಸಿನಿಮಾ ನಟರು ದೇಶಕ್ಕಿಂತಾ ದೊಡ್ಡವರಲ್ಲ




• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಸುಪ್ರೀಂಕೋರ್ಟ್ ಕಳೆದ ವಾರ ಬಾಲಿವುಡ್ ನಟ ...ಯ್ ದತ್‌ಗೆ ಐದು ವರ್ಷ ಜೈಲು ಶಿಕ್ಷೆ ನೀಡಿರುವುದರ ...ಹಲವಷ್ಟು ಮಂದಿ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ...ಲ್ಲೂ ಭ್ರಷ್ಟಾಚಾರ, ಕೋಮುವಾದ, ಮೌಢ್ಯದ ವಿರುದ್ಧ ...ದಿಟ್ಟ ಅಭಿಪ್ರಾಯಗಳನ್ನು ವ್ಯಕ್ತಪಡಿಸಿ ಜನಸಾಮಾನ್ಯರ ...ವನ್ನು ಗಳಿಸಿರುವ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ...ಕ್ಷ ನಿವೃತ್ತ ನ್ಯಾಯಾಧೀಶರಾದ ಮಾರ್ಕಂಡೇಯ ... ಸಹ ಸಂಜಯನಿಗೆ ಶಿಕ್ಷೆಯಿಂದ ಮಾಫಿ ...ಬೇಕೆಂದು ಹೇಳಿರುವುದು ಅಚ್ಚರಿಯನ್ನು ಮಾತ್ರವಲ್ಲ ...ಮೆಯನ್ನೇ ಮೂಡಿಸಿದೆ.

...ವೆಲ್ಲ ಅಭಿಪ್ರಾಯಗಳ ನಡುವೆ ಸಂಜಯನಿಗೆ ಯಾವ ...ಕ್ಕೆ ಸುಪ್ರೀಂ ಕೋರ್ಟ್ ಶಿಕ್ಷೆ ನೀಡಿದೆ ಎಂಬುದೇ ...ಗಮನದಿಂದ ದೂರ ಸರಿದಿದೆ. ಅದರ ಬದಲಾಗಿ ... ಜನಪ್ರಿಯ ನಟನಿಗೆ ಇಂತಹ ಪಾಡು



...ಬಾರದಿತ್ತೆಂಬ, ಆತನನ್ನು ಮಾಫಿ ಮಾಡಬೇಕೆಂಬ ...ಪ್ರಾಯವೇ ಹೆಚ್ಚಿನ ಜನರಲ್ಲಿ ಮನೆ ಮಾಡಿರುವಂತಿದೆ. ...ಕ್ಕೆ ಹೋಗುವ ಮುನ್ನ ಇಲ್ಲಿ ಒಂದು ಮುಖ್ಯ ...ವನ್ನು ಎಲ್ಲರೂ ಗಮನಿಸಬೇಕಿದೆ.

...ತ್ತೀಚೆಗೆ ಅಫ್ಜಲ್ ಗುರುವನ್ನು ಗಲ್ಲಿಗೇರಿಸಿದಾಗ ನಮ್ಮ ... ಅದೆಷ್ಟೋ ಜನರು ಸಂಭ್ರಮಿಸಿದ್ದರು. ಹೀಗೆ ...ಮಿಸಿದವರೆಲ್ಲರೂ ಇದೇ ಸುಪ್ರೀಂ ಕೋರ್ಟ್ "ಸಂಸತ್ತಿನ ... ದಾಳಿ ಮಾಡಿದ ಉಗ್ರಗಾಮಿ ಗುಂಪಿಗೂ ಅಫ್ಜಲ್ ...ಗೂ ಸಂಬಂಧ ಇರುವುದು ಸಾಬೀತಾಗಿಲ್ಲ, ಆದರೂ ...ಜದ ಸಮಷ್ಟಿಪ್ರಜ್ಞೆ'ಯನ್ನು ತಣಿಸಲು ಆತನಿಗೆ ಗಲ್ಲು ...ೇ ಸರಿ" ಎಂದು ತೀರ್ಪು ನೀಡಿದ್ದು ಗೊತ್ತಿರಲಿಲ್ಲ. ...ರೆ ಅಫ್ಜಲ್ ವಿರುದ್ಧ ಖಚಿತ ಸಾಕ್ಷ್ಯಾಧಾರಗಳು ...ದ್ದರೂ ಆತನನ್ನು ಗಲ್ಲಿಗೇರಿಸಲಾಯಿತು. ಆದರೀಗ ...ರು ಖಚಿತ ಸಾಕ್ಷ್ಯಾಧಾರಗಳನ್ನು ಆಧರಿಸಿಯೇ ...ಯನಿಗೆ ಸುಪ್ರೀಂಕೋರ್ಟ್ ಶಿಕ್ಷೆ ನೀಡಿದ್ದರೂ ಆತನಿಗೆ ... ಮಾಡಬೇಕೆಂದು ಜನ ವಾದಿಸುತ್ತಿದ್ದಾರೆ. ಇದೆಲ್ಲದರ ... ಏನು? ನಮ್ಮ ದೇಶದಲ್ಲಿ ನ್ಯಾಯ ಮತ್ತು ಶಿಕ್ಷೆ ...ಯಲ್ಲಿ ಸಾಕ್ಷಿಗಳು ಗೌಣವಾಗಿ ಜನಾಭಿಪ್ರಾಯವೇ ...ಮುಖ್ಯವಾಗಬೇಕೆ? ಸಂಜಯ್ ದತ್ ತರಹದ ನಟರಿಗೆ ... ನ್ಯಾಯ, ಅಫ್ಜಲ್ ಗುರು ತರಹದ ಸಾಮಾನ್ಯ ...ಷ್ಯರಿಗೆ ಇನ್ನೊಂದು ತರಹದ ನ್ಯಾಯವೇ? ...ಕಾರರಿಗೊಂದು ನೀತಿ, ಬಡವರಿಗೊಂದು ನೀತಿ ... ದೇಶದಲ್ಲಿ ಇರಬೇಕೆ?

...ಜ್ಜು ಕಾಟ್ಜು ಅವರು "ನಾನು ರಾಷ್ಟ್ರಪತಿ ಮತ್ತು ...ಪಾಲರಿಗೆ ಪತ್ರ ಬರೆದು ಸಂಜಯ್ ದತ್‌ನನ್ನು ಕ್ಷಮಿಸಿ ... ಶಿಕ್ಷೆಯಿಂದ ಆತನಿಗೆ ಮಾಫಿ ಮಾಡಬೇಕೆಂದು ...ತ್ತೇನೆ. ಯಾಕೆಂದರೆ ಆತ ಓರ್ವ ಭಯೋತ್ಪಾದಕನಲ್ಲ ...ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಹೊಂದಿದ್ದನಷ್ಟೇ ಎಂದು ...ಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಈ ... ಆತ 18 ತಿಂಗಳುಗಳನ್ನು ಜೈಲಿನಲ್ಲಿ ಕಳೆದಿದ್ದಾರೆ. ...ಇಷ್ಟು ವರ್ಷಗಳ ಕಾಲ ಬಹಳಷ್ಟು ನೋವನ್ನು ...ಭವಿಸಿದ್ದಾನೆ, ಅದೂ ಒಂದು ರೀತಿಯಲ್ಲಿ ಶಿಕ್ಷೆಯೇ" ... ತಮ್ಮ ನಿಲುವನ್ನು ಸಮರ್ಥಿಸಿಕೊಂಡಿದ್ದಾರೆ.

...ಅಕಸ್ಮಾತ್ ಬೇರೆ ಯಾರಾದರೂ ಕಾನೂನುಬಾಹಿರವಾಗಿ ...ಗಳನ್ನು ಹೊಂದಿದ್ದು ಸಿಕ್ಕಿಬಿದ್ದಿದ್ದರೆ ಅವರ ಬಗ್ಗೆಯೂ ...ಟ್ಜು ಅವರು ಇದೇ ನಿಲುವನ್ನು ತೆಗೆದುಕೊಳ್ಳುತ್ತಿದ್ದರೆ?

ನ್ಯಾಯಾಲಯ ತನ್ನ ತೀರ್ಪು ಕೊಡುವವರೆಗೂ ನಮ್ಮ ದೇಶದಲ್ಲಿ ಲಕ್ಷಾಂತರ ಜನ ಕಾಯಬೇಕಾಗಿದೆ. ಹಾಗೆ ಕಾದಿದ್ದೇ ಶಿಕ್ಷೆ ಎಂದು ಪರಿಭಾವಿಸಿ ಅವರಿಗೆಲ್ಲ ನ್ಯಾಯಾಲಯದ ತೀರ್ಪಿನಿಂದ ಮಾಫಿ ಮಾಡಲಾಗುತ್ತದೆಯೇ?

ಈಗ ಸಂಜಯನಿಗೆ ಸುಪ್ರೀಂಕೋರ್ಟ್ ಯಾಕೆ ಐದು ವರ್ಷ ಜೈಲು ಶಿಕ್ಷೆ ವಿಧಿಸಿದೆ ಎಂಬುದರತ್ತ ನೋಡೋಣ.

1992ರಲ್ಲಿ ಸಂಘಪರಿವಾರ ಅಯೋಧ್ಯೆಯಲ್ಲಿದ್ದ ಬಾಬ್ರಿ ಮಸೀದಿಯನ್ನು ಕೆಡವಿದ ನಂತರ ಮುಂಬೈಯಲ್ಲಿ ಡಿಸೆಂಬರ್ ಮತ್ತು ಜನವರಿ ತಿಂಗಳಲ್ಲಿ ಭಾರಿ ಕೋಮುಗಲಭೆಗಳು ನಡೆದು ಸುಮಾರು ಒಂದು ಸಾವಿರ ಜನ ಸಾವನ್ನಪ್ಪಿದರು. ಅವರಲ್ಲಿ ಹೆಚ್ಚಿನವರು ಅಲ್ಪಸಂಖ್ಯಾತ ಮುಸಲ್ಮಾನ ಸಮುದಾಯದವರಾಗಿದ್ದರು.

ಇದಕ್ಕೆ ಪ್ರತೀಕಾರವಾಗಿ 1993ರ ಮಾರ್ಚ್ ತಿಂಗಳಲ್ಲಿ ಭೂಗತಲೋಕದ ದೊರೆ ದಾವೂದ್ ಇಬ್ರಾಹಿಂ ನೇತೃತ್ವದಲ್ಲಿ ಮುಂಬೈಯಲ್ಲಿ ಸರಣಿ ಬಾಂಬ್‌ಗಳು ಸ್ಫೋಟಗೊಂಡು 257 ಜನ ಮರಣ ಹೊಂದಿದ್ದರು. ಪೊಲೀಸರು ಈ ಸರಣಿ ಸ್ಫೋಟಗಳನ್ನು ತನಿಖೆ ಮಾಡಿದಾಗ ಸಿಕ್ಕಿಬಿದ್ದವರಲ್ಲಿ ಒಬ್ಬ ಇದೇ ಸಂಜಯ್ ದತ್.

ಏನಾಗಿತ್ತೆಂದರೆ ಸರಣಿ ಬಾಂಬ್‌ಗಳನ್ನು ಸ್ಫೋಟಿಸುವ ಮುನ್ನ ಭೂಗತ ಲೋಕದ ಜನ ಮುಂಬೈಗೆ ಆರ್‌ಡಿಎಕ್ಸ್, ಕೈಬಾಂಬು ಮತ್ತು ಎಕೆ-47 ತರಹದ ಮೆಶೀನ್‌ಗನ್‌ಗಳನ್ನು ತಂದಿದ್ದರು. ಅವರ ಉದ್ದೇಶ ಸರಣಿ ಬಾಂಬ್ ಸ್ಫೋಟದ ನಂತರ ಸಂಭವಿಸಬಹುದಾದ ಕೋಮು ಗಲಭೆಯಲ್ಲಿ ಕೈ ಬಾಂಬ್ ಮತ್ತು ಮೆಶೀನ್‌ಗನ್‌ಗಳು ಮುಸಲ್ಮಾನರ ರಕ್ಷಣೆಗೆ ಬಳಕೆ ಆಗಲಿ ಎಂಬುದಾಗಿತ್ತು.

ಪಾಕಿಸ್ತಾನದಿಂದ ಗುಜರಾತ್ ಮತ್ತು ಮಹಾರಾಷ್ಟ್ರದ ರಾಯಗಡ್ ಜಿಲ್ಲೆಗೆ ಬಂದುಬಿದ್ದ ಈ ಬಾಂಬ್ ಸಲಕರಣೆಗಳು ಮತ್ತು ಶಸ್ತ್ರಾಸ್ತ್ರಗಳನ್ನು ಮುಂಬೈಗೆ ಸಾಗಿಸಿ ವಿತರಿಸುವ ಯೋಜನೆ ಭಯೋತ್ಪಾದಕರದ್ದಾಗಿತ್ತು. ಕುಖ್ಯಾತ ಭೂಗತಲೋಕದ ಅಬು ಸಲೇಂ ಒಂದು ವಾಹನದಲ್ಲಿ ಇವುಗಳನ್ನು ಬಚ್ಚಿಟ್ಟುಕೊಂಡು ಗುಜರಾತಿನಿಂದ ಮುಂಬೈಗೆ ಸಾಗಿಸಿದ. ಆದರೆ ಅವುಗಳನ್ನು ಯಾರ ಕಣ್ಣಿಗೂ ಕಾಣದಂತಹ ಸುರಕ್ಷಿತ ಸ್ಥಳದಲ್ಲಿ ತೆರೆಯಬೇಕಿತ್ತು.

ಮೊದಲಿನಿಂದಲೂ ಮುಂಬೈನ ಭೂಗತ ಲೋಕಕ್ಕೂ ಬಾಲಿವುಡ್ ಜನರಿಗೂ ನಂಟು ಇದ್ದೇ ಇದೆ. ಅದರಲ್ಲೂ ಕೊಕೇನ್ ತರಹದ ದುಬಾರಿ ಮಾದಕ ವಸ್ತುವಿನ ದಾಸನಾಗಿದ್ದ ಸಂಜಯ್‌ಗೆ ಅದನ್ನು ಸರಬರಾಜು ಮಾಡುತ್ತಿದ್ದ ಕ್ರಿಮಿನಲ್‌ಗಳೊಂದಿಗೆ ಸಂಪರ್ಕ ಇತ್ತು. ಆ ಕಾರಣಕ್ಕೇ ದಾವೂದ್ ಸಹಚರರು ಸೂಕ್ತ ಜಾಗಕ್ಕೆ ಹುಡುಕುತ್ತಿದ್ದಾಗ ಅವರಿಗೆ ನೆನಪಾಗಿದ್ದು ಇದೇ ಸಂಜಯ್. ಆಗ ಸಂಜಯ್



ಮತ್ತು ಆತನ ತಂದೆ ಸುನೀಲ್ ದತ್ ಅವರ ರಕ್ಷಣೆಗೆಂದು ಮುಂಬೈ ಪೊಲೀಸರು ಸಿಬ್ಬಂದಿಯನ್ನು ಒದಗಿಸಿದ್ದರು. ಇದು ಕೂಡ ಭಯೋತ್ಪಾದಕರ ಕೆಲಸಕ್ಕೆ ಸಲೀಸಾಯಿತು. ಪೊಲೀಸರು ಇರುವ ಜಾಗದಲ್ಲೇ ತಮ್ಮ ಕೆಲಸ ಸಾಗಿದರೆ ಯಾರಿಗೂ ಅನುಮಾನ ಬರುವುದಿಲ್ಲ ಎಂಬುದು ಅವರ ಲೆಕ್ಕಾಚಾರವಾಗಿತ್ತು.

ತನ್ನ ಮನೆಯ ಗ್ಯಾರೇಜನ್ನು ಈ ಕೆಲಸಕ್ಕೆ ಬಳಸಲು ಸಮ್ಮತಿಸಿದ ಸಂಜಯ್ ಭಯೋತ್ಪಾದಕರು ತಂದಿದ್ದ ವಸ್ತುಗಳಲ್ಲಿ ನಾಲ್ಕೈದು ಕೈಬಾಂಬುಗಳನ್ನು ಮತ್ತು ಒಂದು ಎಕೆ-57 ಮೆಶೀನ್‌ಗನ್‌ಅನ್ನು ತನ್ನ ಬಳಿ ಇಟ್ಟುಕೊಂಡ.

ಅಷ್ಟೇ ಅಲ್ಲ ಉಳಿದ ವಸ್ತುಗಳನ್ನು ಸಾಗಿಸಲು ಬ್ಯಾಗುಗಳನ್ನೂ ಕೊಟ್ಟ.

ಆದರೆ ಕೆಲದಿನಗಳ ನಂತರ ಆತನಿಗೆ ಅದೇನೆನ್ನಿಸಿತೋ, ದಾವೂದ್ ಇಬ್ರಾಹಿಂನ ಸಹೋದರ ಅನೀಸನಿಗೆ ಫೋನ್ ಮಾಡಿ ಕೈಬಾಂಬುಗಳು ತನ್ನ ಮನೆಯಲ್ಲಿ ಇರುವುದರ ಬಗ್ಗೆ ಕಸಿವಿಸಿಯನ್ನು ವ್ಯಕ್ತಪಡಿಸಿದ. ಆಗ ಅಬು ಸಲೇಮನ ಸಹಚರ ಮನಸೂರ್ ಅಹಮದ್ ಎಂಬಾತ ಸಂಜಯನ್ ಮನೆಗೆ ಬಂದು ಆ ಕೈಬಾಂಬುಗಳನ್ನು ತೆಗೆದುಕೊಂಡು ಹೋದ. ಆದರೆ ಎಕೆ-57 ಒಂದು ಅಕ್ರಮವಾಗಿ ಸಂಜಯ್ ಬಳಿಯೇ ಇತ್ತು.

ಸರಣಿ ಬಾಂಬ್ ಸ್ಫೋಟಗಳ ತನಿಖೆಯನ್ನು ನಡೆಸುತ್ತಿದ್ದ ಪೊಲೀಸರಿಗೆ ಸಂಜಯ್ ಭಯೋತ್ಪಾದಕರಿಗೆ ನೀಡಿದ್ದ ನೆರವಿನ ಬಗ್ಗೆ ಸುಳಿವು ಸಿಕ್ಕಿತು. ಅದು ಮಾಧ್ಯಮದ ಒಬ್ಬರ ಕಿವಿಗೆ ಬಿದ್ದು ಆತ ತನ್ನ ಪತ್ರಿಕೆಯಲ್ಲಿ ವರದಿ ಮಾಡಿದ. ಆಗ ಸಂಜಯ್‌ಗೆ ನಡುಕ ಹುಟ್ಟಿತು. ಆಗ ಮಾರೀಷಿಯಸ್‌ನಲ್ಲಿ ಚಿತ್ರೀಕರಣದಲ್ಲಿದ್ದ ಸಂಜಯ್ ಕೂಡಲೇ ಯೂಸಫ್ ನುಲ್ಲವಾಲ ಎಂಬ ತನ್ನ ಸ್ನೇಹಿತನಿಗೆ ಫೋನ್ ಮಾಡಿ ತನ್ನ ಮನೆಯಲ್ಲಿರುವ ಎಕೆ-56 ಮತ್ತು ಇತರೆ ಬಂದೂಕುಗಳನ್ನು ತೆಗೆದುಕೊಂಡು ಹೋಗಲು ಕೋರಿದ. ಹಾಗೆಯೇ ಮಾಡಿದ ಯೂಸಫ್ ಆ ಬಂದೂಕುಗಳನ್ನು ಬೆಂಕಿಯಲ್ಲಿ ಕರಗಿಸಿ ನಾಶ ಮಾಡಲು ಪ್ರಯತ್ನಿಸಿದ. ಆದರೆ ಎಕೆ-56 ಬಂದೂಕಿನ ಬ್ಯಾರೆಲ್ ಕರಗದಿದ್ದರಿಂದ ಆತ ಅದನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡಿದ್ದ. ಪೊಲೀಸರು ಯೂಸಫ್‌ನನ್ನು ಬಂಧಿಸಿದಾಗ ಆ ಬ್ಯಾರೆಲ್‌ಅನ್ನು ಮತ್ತು ಸಂಜಯ್‌ನನ್ನು ಬಂಧಿಸಿದಾಗ ಆತನ ಬಳಿ ಇದ್ದ ಅಕ್ರಮ ಶಸ್ತ್ರಾಸ್ತ್ರಗಳನ್ನೂ ವಶಪಡಿಸಿಕೊಂಡರು.

ಈ ಬಂದೂಕುಗಳನ್ನು ಮತ್ತು ಅನೀಸ್ ಇಬ್ರಾಹಿಂನೊಂದಿಗೆ ಸಂಜಯ್ ನಡೆಸಿದ್ದ ಫೋನ್ ಸಂಭಾಷಣೆಯ ಕಾಲ್ ರೆಕಾರ್ಡ್‌ಗಳನ್ನೂ ಪೊಲೀಸರು ನ್ಯಾಯಾಲಯಕ್ಕೆ ಒಪ್ಪಿಸಿದ್ದರು. ಸಂಜಯ್ ಕೂಡ ಆ ಸಂದರ್ಭದಲ್ಲಿ ತನಗೆ ಮತ್ತು ತನ್ನ ಕುಟುಂಬದವರಿಗೆ ಹಿಂದೂ ಉಗ್ರಗಾಮಿಗಳಿಂದ ಪ್ರಾಣ ಬೆದರಿಕೆ ಇತ್ತಾದ್ದರಿಂದ ತಾನು ಈ ಶಸ್ತ್ರಾಸ್ತ್ರಗಳನ್ನು ಪಡೆದಿದ್ದೆ ಎಂದು ಹೇಳಿದ್ದ.

ಈ ಎರಡು ವಿಚಾರಗಳಲ್ಲದೆ ಭಯೋತ್ಪಾದಕ ದಾವೂದ್ ಇಬ್ರಾಹಿಂಗೆ ನೆರವಾಗಿದ್ದಕ್ಕೆ ನ್ಯಾಯಾಲಯ ಆತನಿಗೆ ಈಗ ಐದು ವರ್ಷಗಳ ಜೈಲು ಸಜೆಯನ್ನು ವಿಧಿಸಿದೆ.

ಸಂಜಯ್ ಓರ್ವ ಉತ್ತಮ ನಟ ಎಂಬುದು ನಿಜ. ಆತನ ಹಲವಾರು ಸಿನಿಮಾಗಳನ್ನು ನಾನು ನೋಡಿ ಆನಂದಿಸಿದ್ದೇನೆ. ಆದರೆ ಆತ 'ಲಗೆ ರಹೋ ಮುನ್ನಾಬಾಯಿ' ಎಂಬ ಸಿನಿಮಾದಲ್ಲಿ ಗಾಂಧಿ ತತ್ವವಾದ ಸತ್ಯವನ್ನು ಹೇಳಬೇಕು, ಅಹಿಂಸಾವಾದವೇ ಸರಿ ಎಂಬ ನಿಲುವನ್ನು ಸಾರಿದ್ದರಿಂದ ಸಂಜಯ್ ನಿಜವಾಗಲೂ ಗಾಂಧಿವಾದಿ ಆಗಿದ್ದಾನೆ ಎಂದು ನಂಬುವುದು ಮೂರ್ಖತನವಾಗುತ್ತದೆ. (ಓರ್ವ ನಟಿ ವೇಶ್ಯೆ ಪಾತ್ರದಲ್ಲಿ ನಟಿಸಿದ್ದಕ್ಕೆ ಆಕೆ ಹೇಗೆ ಅದೇ ಆಗುವುದಿಲ್ಲವೋ ಹಾಗೆ.)

ಸಂಜಯ್ ದತ್ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಪಡೆದಾಗ ಆತನ ವಯಸ್ಸು 34 ವರ್ಷ. ಅಂದರೆ ಆಗ ಆತ ಏನೂ ತಿಳಿಯದ ಹುಡುಗನಾಗಲಿ, ಬಿಸಿ ರಕ್ತದ ಯುವಕನಾಗಲಿ ಆಗಿರಲಿಲ್ಲ, ಬದಲಾಗಿ ತಾನು ಮಾಡುತ್ತಿರುವುದು ಕಾನೂನು ಬಾಹಿರ ಎಂಬುದನ್ನು ಅರಿಯುವಷ್ಟು ವಯಸ್ಸಾಗಿತ್ತು.

ಈಗ ಆತನ ಅಪರಾಧಕ್ಕೆ ಶಿಕ್ಷೆ ಆಗಿದೆ. ಅದನ್ನು ಆತ ಅನುಭವಿಸುವುದು ಎಲ್ಲ ರೀತಿಯಲ್ಲೂ ಸೂಕ್ತ. ಅದರ ಹೊರತಾಗಿ ಆತನಿಗೆ ಕ್ಷಮೆ ನೀಡಿ ಪಕ್ಷಪಾತ ತೋರಿದರೆ ಅದು ನಮ್ಮ ಇಡೀ ಪ್ರಜಾಪ್ರಭುತ್ವ ವ್ಯವಸ್ಥೆಯ ಅಣಕವಾಗುತ್ತದೆ.

***

1993ರಲ್ಲಿ ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿದ ಇಪ್ಪತ್ತು ವರ್ಷಗಳ ನಂತರ ನ್ಯಾಯಾಲಯವು ನಟ ಸಂಜಯ್ ದತ್‌ಗೆ ಶಿಕ್ಷೆ ಪ್ರಕಟಿಸಿರುವ ಹೊತ್ತಿನಲ್ಲೇ ಆ ದುರ್ಘಟನೆಗೆ ಸಂಬಂಧಿಸಿದ ಇನ್ನೊಂದು ವಿದ್ಯಮಾನವೂ ಫೇಸ್‌ಬುಕ್ ಮೂಲಕ ಎಲ್ಲೆಡೆ ಹಬ್ಬಿದೆ. ಅದು ಜಂಜೀರ್ ಎಂಬ ನಾಯಿಯನ್ನು ಕುರಿತದ್ದು.

ಗೋಲ್ಡನ್ ಲಾಬ್ರಡಾರ್ ತಳಿಗೆ ಸೇರಿದ್ದ ಜಂಜೀರ್ ನಾಯಿಗೆ ಎರಡು ವರ್ಷ ತುಂಬುವ ಮುನ್ನವೇ ಅದನ್ನು ಮುಂಬೈ ಪೊಲೀಸ್ ತಂಡಕ್ಕೆ ಸೇರಿಸಿಕೊಂಡು ತರಬೇತಿ ನೀಡಲಾಯಿತು. ಅದರ ಕೂದಲು ಶುಂಠಿ ಬಣ್ಣದ್ದಾಗಿದ್ದರಿಂದ ಅದಕ್ಕೆ ಮೊದಲು ಜಿಂಜರ್ ಎಂದು ಹೆಸರಿಡಲಾಗಿತ್ತು. ಆದರೆ ಅಮಿತಾಬ್ ಬಚ್ಚನ್ ಓರ್ವ ಪ್ರಾಮಾಣಿಕ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ನಟಿಸಿದ್ದ 'ಜಂಜೀರ್' ಸಿನಿಮಾದಿಂದ ಸ್ಫೂರ್ತಿ ಪಡೆದ ಪೊಲೀಸರು ಜಿಂಜರ್ ನಾಯಿಯನ್ನು ಜಂಜೀರ್ ಎಂದೇ ಕರೆಯಲಾರಂಭಿಸಿದರಲ್ಲದೆ ಆ ಹೆಸರೇ ಆ ನಾಯಿಗೆ ಅಂಟಿಕೊಂಡಿತು.

ತುಂಬಾ ಚುರುಕಾಗಿದ್ದ ಜಂಜೀರ್ ಒಂದೆರಡು ತಿಂಗಳಲ್ಲೇ ತನ್ನ ಕೆಲಸದಲ್ಲಿ ಅಪಾರ ಪರಿಣತಿ ಪಡೆಯಿತು. ಅದು ಪೊಲೀಸ್ ತಂಡವನ್ನು ಸೇರಿದ ಮೂರು ತಿಂಗಳ ನಂತರ ಮುಂಬೈಯಲ್ಲಿ 12 ಕಡೆ ಬಾಂಬ್‌ಗಳು ಸ್ಫೋಟಗೊಂಡು ನೂರಾರು ಜನ ಸಾವಿಗೀಡಾದರು, ಗಾಯಾಳುಗಳಾದರು. ಭಯೋತ್ಪಾದಕರು ಬಚ್ಚಿಟ್ಟಿದ್ದ ಇತರೆ ಬಾಂಬ್‌ಗಳೂ ಅಂದು ಸ್ಫೋಟಗೊಂಡಿದ್ದರೆ ಸಾವಿಗೀಡಾದ ಜನರ ಸಂಖ್ಯೆ ಹೆಚ್ಚಾಗುತ್ತಿತ್ತು. ಆದರೆ ಅಂತಹ ದುರಂತವನ್ನು ತಪ್ಪಿಸಿದ್ದು ಇದೇ ಜಂಜೀರ್.

ಅವತ್ತು ಈ ಜಂಜೀರ್ ಒಟ್ಟಾರೆ 3,329 ಕೆಜಿ ಸ್ಫೋಟಕ ಆರ್‌ಡಿಎಕ್ಸ್, 600 ಡಿಟೋನೇಟರ್‌ಗಳನ್ನು, 249 ಕೈಬಾಂಬ್‌ಗಳನ್ನು ಮತ್ತು 6,406 ಗುಂಡುಗಳನ್ನು ತನ್ನ ಪ್ರತಿಭೆಯಿಂದಲೇ ಪತ್ತೆಹಚ್ಚಿತ್ತು.

ಎಂಟು ವರ್ಷಗಳ ಕಾಲ ಪೊಲೀಸ್ ಇಲಾಖೆಗೆ ಸೇವೆ ಸಲ್ಲಿಸಿದ ಜಂಜೀರ್ ತನ್ನ ಜೀವಿತಾವಧಿಯಲ್ಲಿ 175 ಪೆಟ್ರೋಲ್ ಬಾಂಬ್, 57 ನಾಡ ಬಾಂಬ್, 11 ಇತರ ತರಹದ ಬಾಂಬ್ ಮತ್ತು 600 ಡಿಟೊನೇಟರ್‌ಗಳನ್ನು ಪತ್ತೆಹಚ್ಚಿತ್ತು. ಈ ಎಲ್ಲ ಕಾರಣಗಳಿಗೆ ಪೊಲೀಸ್ ಇಲಾಖೆಯಲ್ಲಿ ಇತರೆ ಎಂಟು ನಾಯಿಗಳಿದ್ದರೂ ಜಂಜೀರ್ ಹೀರೋ ಆಗಿತ್ತು.

ಇಂತಹ ಜಂಜೀರ್‌ಗೆ ಎಂಟು ವರ್ಷ ವಯಸ್ಸಾಗಿದ್ದಾಗ ಮೂಳೆ ಕ್ಯಾನ್ಸರ್‌ಗೆ ತನ್ನ ಪ್ರಾಣ ಕಳೆದುಕೊಂಡಿತು. ಆಗ ಮುಂಬೈ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಅದಕ್ಕೆ ಸಕಲ ಗೌರವ ಮತ್ತು ಮರ್ಯಾದೆಗಳೊಂದಿಗೆ ಅಂತ್ಯ ಸಂಸ್ಕಾರಗಳನ್ನು ಮಾಡಿದ್ದರು. ಆ ಚಿತ್ರಗಳು ಈಗ ಜಂಜೀರ್‌ನ ಯಶೋಗಾಥೆಯೊಂದಿಗೆ ಇಂಟರ್‌ನೆಟ್‌ನಲ್ಲಿ ಹರಿದಾಡುತ್ತಿವೆ.


ಬಾಂಬ್‌ಗಳನ್ನು ಸ್ಫೋಟಿಸಿದವರಿಗೆ ನೆರವು ನೀಡಿದ್ದ ಸಂಜಯ್ ದತ್ ಮತ್ತು ಅದೇ ಕೃತ್ಯದಿಂದ ನೂರಾರು ಜನರ ಪ್ರಾಣ ಉಳಿಸಿದ ಜಂಜೀರ್ ಎಂಬ ನಾಯಿ ನಡುವಿನ ವ್ಯತ್ಯಾಸವನ್ನು ಎಲ್ಲರೂ ಗಮನಿಸಬೇಕಲ್ಲವೇ?


ಉತ್ತರ ಕನ್ನಡ:

'ಕತ್ತಿ'ಗೆ ಕಾಯುತ್ತಿವೆ ಅಂಕದ ಕೋಳಿಗಳು!!


ಉತ್ತರ ಕನ್ನಡವೆಂಬ ಸಮಸ್ಯೆ-ಸಂಕಷ್ಟಕ್ಕೆ ಉತ್ತರವೇ ಕಾಣದ ಜಿಲ್ಲೆಯಲ್ಲಿ ಖಾಲಿ ಬರಡು ರಾಜಕಾರಣಕ್ಕೇನೂ ಕಮ್ಮಿಯಿಲ್ಲ! ಈಗಂತೂ ಜಿಲ್ಲೆಯ ಅಷ್ಟೂ ಪಕ್ಷದಲ್ಲಿ ಯಾವ ಕೋಳಿ ಕಾಲಿಗೆ ಕತ್ತಿ ಕಟ್ಟಿದರೆ ಅಂಕ (ಯುದ್ಧ) ಗೆಲ್ಲಬಹುದೆಂಬ ಲೆಕ್ಕಾಚಾರ ತಾರಕ ತಲುಪಿದೆ; ಮತ್ತೊಂದೆಡೆ ಮತದಾರ ಯಾವ ಕೋಳಿಯನ್ನು ಯಾವ ಪಕ್ಷ ಅಂಕಕ್ಕೆ ಕಟ್ಟಬಹುದೆಂಬ ರೋಚಕ ಚರ್ಚೆಗೆ ಇಳಿದಿದ್ದಾರೆ. ಬಿರು ಬಿಸಿಲಿಂದ ಒಂದೇ ಸಮನೆ ಬೆವರಿಳಿಸುತ್ತಿರುವ ಉತ್ತರ ಕನ್ನಡ ಈ ಅಂಕ (ಚುನಾವಣೆ) ರಾಜಕಾರಣದಿಂದ ಕಾದ ಕಾವಲಿಯಂತಾಗಿಬಿಟ್ಟಿದೆ!


ಜಿಲ್ಲೆಯ ಕತ್ತಿ ವರಸೆ ದಿನಕ್ಕೊಂದು ಆಯಾಮ ಪಡೆಯುತ್ತಿದೆ. ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ


ದೇಶಪಾಂಡೆ



ಅಸ್ನೋಟಿಕರ್



ಶಿವಾನಂದ ನಾಯ್ಕ



ದಿನಕರಶೆಟ್ಟಿ


ಜೆ.ಡಿ.ನಾಯ್ಕ್


ಸತೀಶ್ ಸೈಲ್



ಶಿವರಾಂ ಹೆಬ್ಬಾರ್


ವಿನೋದ್ ಪ್ರಭು



ಎ.ಎಸ್.ಪಾಟೀಲ


ಸುನೀಲ್ ಹೆಗ್ಡೆ


ಸೂರಜ್ ನಾಯ್ಕ್ ಸೋನಿ


ಗಾಯಿತ್ರಿ ಗೌಡ


ಶಾರದಾ ಎಂ.ಶೆಟ್ಟಿ


ಅನಿಲ್‌ಕುಮಾರ್

ಮತ್ತು ಜೆಡಿಎಸ್‌ನ ಅಂಗಳದಲ್ಲಿ ಇವತ್ತಿದ್ದ ಕೋಳಿ ಹೆಸರು ನಾಳೆ ಇರುವುದಿಲ್ಲ. ಒಂದಿಷ್ಟು ಚಾಲಾಕಿ ಕೋಳಿಗಳು ತಾವೇ ಸರ್ವಸಮರ್ಥ ಫೈಟರ್‌ಗಳೆಂದು ಬಿಂಬಿಸಲು ಹೆಣಗಾಡುತ್ತಿದ್ದರೆ, ಕತ್ತಿ ಬಗಲಲ್ಲಿ ಇಟ್ಟುಕೊಂಡಿರುವ ಬಾಸ್‌ಗಳು ತಮಗೆ ನಿಷ್ಠೆಯಿಂದಿರುವ ಕೋಳಿಗಾಗಿ ಹುಡುಕಾಡುತ್ತಿದ್ದಾರೆ. ಈ ಕತ್ತಿ (ಟಿಕೆಟ್) ತಳಮಳ-ತಾಪತ್ರಯ-ತರಲೆಯ ತರಹೇವಾರಿ ಪುರಾಣ ಇಲ್ಲಿದೆ.

ಎಡವಟ್ಟು ಅಸ್ನೋಟಿಕರ್ ಅತಂತ್ರ


ಆಪರೇಷನ್ ಮಂತ್ರಿ ಆನಂದ ಅಸ್ನೋಟಿಕರ್‌ಗೆ ಬಿಜೆಪಿಯಿಂದ ಚುನಾವಣೆಗೆ ಇಳಿಯುವ ಮನಸ್ಸು-ಧೈರ್ಯ ಒಂಚೂರೂ ಇಲ್ಲ. ಆದರೂ ಈ ಅಡ್ಡಕಸಬಿ ತಾನು ಬಿಜೆಪಿ ಬಿಡಲಾರೆನೆಂದು ಬೇಕಂತಲೇ ಬೊಬ್ಬೆ ಹೊಡೆಯುತ್ತಿದ್ದಾನೆ. ಬಿಜೆಪಿಯ ಹಿರಿ-ಮರಿ, ಲೋಕಲ್-ಬೆಂಗಳೂರು ಮುಖಂಡ ಮಣಿಗಳಿಗೆ ಈತನ ಮೇಲೆ ನಂಬಿಕೆಯಿಲ್ಲ. ಆತನನ್ನು ಕಾರವಾರ-ಅಂಕೋಲಾ ಕ್ಷೇತ್ರದಲ್ಲಿ ಕ್ಯಾಂಡಿಡೇಟ್ ಮಾಡುವ ಸಣ್ಣ ಯೋಚನೆಯೂ ಇಲ್ಲ. ಅಸ್ನೋಟಿಕರ್‌ನ ಮೊದಲ ಆದ್ಯತೆ ಏನಿದ್ದರೂ ಕಾಂಗ್ರೆಸ್. ಆದರೆ ಕಳೆದ ಬಾರಿ ಮುತುವರ್ಜಿ ವಹಿಸಿ ಈತನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದ ಆರ್.ವಿ. ದೇಶಪಾಂಡೆ ಈ ಬಾರಿ ಅಡ್ಡ ನಿಂತಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಮಾರ್ಗರೆಟ್ ಆಳ್ವ ಅದೆಷ್ಟೇ ಪ್ರಯತ್ನ ಮಾಡಿದರೂ ಕಾಂಗ್ರೆಸ್ ಕದ ಅಸ್ನೋಟಿಕರ್‌ಗೆ ತೆರೆಯದಂತೆ ದೇಶಪಾಂಡೆ ದೊಡ್ಡ ಬೀಗ ಜಡಿದಿದ್ದಾರೆ.


ಈಗ ಅಸ್ನೋಟಿಕರ್‌ಗೆ ಕಾಂಗ್ರೆಸ್ ಟಿಕೆಟ್ ಸಿಗುವ ಭರವಸೆ ಉಳಿದಿಲ್ಲ. ಹಾಗಂತ ಜೆಡಿಎಸ್ ಸೇರುವ ಮನಸ್ಸೂ ಇಲ್ಲ. ಜೆಡಿಎಸ್ ದೊರೆ ಕುಮ್ಮಿ ಜತೆ ನಿಕಟ 'ನಂಟು' ಇರುವ ಅಸ್ನೋಟಿಕರ್‌ಗೆ ಆತನ ಪಾರ್ಟಿ ಲಾಭದಾಯಕವಲ್ಲ ಎಂಬ ಅಳುಕು. ಹೀಗಾಗಿ ಅಸ್ನೋಟಿಕರ್ ಪಕ್ಷೇತರವಾ[gi] ಸ್ಪರ್ಧಿಸುವ ಸ್ಕೆಚ್ ಹಾಕುತ್ತಿದ್ದಾನೆ. ಪಕ್ಷೇತರನಾದರೆ ಮುಸ್ಲಿ[ಮ್] ಕ್ರಿಶ್ಚಿಯನ್ ಮತ ಪಡೆಯಬಹುದು. ಗೆದ್ದರೆ ಅಧಿಕಾರಕ್ಕೇರ[ುವ] ಪಕ್ಷಕ್ಕೆ ನುಸುಳಿ ಮಂತ್ರಿಯಾಗಬಹುದೆಂಬುದು ಈ ತ[ಲೆ] ತರುಣನ ದೂ(ದು)ರಾಲೋಚನೆ.

ಕಾಂಗ್ರೆಸ್ ಟಿಕೆಟ್ ಸತೀಶ್ ಸೈಲ್ ಎಂಬ ಅದಿ[ರು] ಕಳ್ಳ ಮತ್ತು ಗೋಪಾಲಕೃಷ್ಣ ನಾಯಕ್ ಎಂಬ ಅದಿ[ರು] ಅಧಿಪತಿ ಸಂತೋಷ್ ಲಾಡ್‌ನ ಪರಿಚಾರಕನ ನಡು[ವೆ] ಹೊಯ್ದಾಡುತ್ತಿದೆ. ರಾಜ್ಯ ಯುವ ಕಾಂಗ್ರೆಸ್ ಪ್ರಧಾ[ನ] ಕಾರ್ಯದರ್ಶಿಯಾಗಿರುವ ಗೋಪು ಆ ಸ್ಥಾನಕ್ಕೆ ಏರಿ[ದ್ದು] ಸಂತೋಷ್ ಲಾಡ್ ಮಹಿಮೆಯಿಂದ. ದೇವಪಿತೃ ಲಾ[ಡ್] ಮತ್ತು ಮ್ಯಾಗಿ ಮಗ ನಿವೇದಿತ್ ಆಳ್ವನ ಕೃಪೆಯಿಂ[ದ] ತನಗೆ ಟಿಕೆಟ್ ಸಿಗುತ್ತದೆಂದು ಈ ಗೋಪು ಭಾವಿಸಿದ್ದಾನೆ. ಸೈಲ್‌ಗೆ ಸಿಬಿಐ ಬಳಿ ಇರುವ ಅದಿರು ಕಳ್ಳಸಾಗಾಣಿಕೆ ಕೇಸ್ ಉರುಳಾಗುತ್ತದೆಂದು ಅಸ್ನೋಟಿಕರ್ ಮತ್ತು ಗೋಪು ಕನಸು ಕಾಣುತ್ತಿದ್ದಾರೆ. ಹಾಗೊಮ್ಮೆ ದೇಶಪಾಂಡೆಯ ಪ್ರಯತ್ನವೆಲ್ಲಾ ವ್ಯರ್ಥವಾಗಿ ಸೈಲ್‌ಗೆ ಕಾಂಗ್ರೆಸ್ ಟಿಕೆಟ್ ತಪ್ಪಿದರೆ ಆತ ಬಿಜೆಪಿ ಅಥವಾ ಪಕ್ಷೇತರವಾಗಿ ನಿಲ್ಲಲು ಸಿದ್ಧನಾಗಿದ್ದಾನೆ. ಬಿಜೆಪಿ ಸೈಲ್‌ಗಾಗಿ ಕಾಯುತ್ತಿದೆ. ಸೈಲ್ ಕಾಂಗ್ರೆಸ್ ಕ್ಯಾಂಡಿಡೇಟಾದರೆ ಅಂಕೋಲೆಯ ಭಾಸ್ಕರ


...6ನೇ ಪುಟಕ್ಕೆ


ಶಿರಸಿಯಿಂದ ಶಿವರಾಜ್‌ಕುಮಾರ್ ಮಡದಿ ಸ್ಪರ್ಧಿಸ್ತಾರಾ?


ಕಾಗೇರಿ


ಭೀಮಣ್ಣ ನಾಯ್ಕ್


ಶಶಿಭೂಷಣ್ ಹೆಗ್ಡೆ


ಗೀತಾ ಶಿವರಾಜ್‌ಕುಮಾರ್


ಶಾಂತರಾಂ ಹೆಗ್ಡೆ

ಶಿರಸಿ-ಸಿದ್ದಾಪುರ ಕ್ಷೇತ್ರದ "ಟಿಕೆಟ್ ಸಮೀಕರಣ ಚಿತ್ರ-ವಿಚಿತ್ರವಾಗಿ ಬದಲಾಗುತ್ತಿದೆ. ಇದು ಬಿಜೆಪಿ ಸರ್ಕಾರದ ಹಾರ್ಡ್‌ಕೋರ್ ಚಡ್ಡಿ ಬ್ರಾಹ್ಮಣ ಕಾಗೇರಿ ವಿಶ್ವೇಶ್ವರ ಹೆಗಡೆಯ ಕ್ಷೇತ್ರ. ಅಲ್ಲಿ ಆತನೇ ಈ ಬಾರಿಯೂ ಬಿಜೆಪಿಯ ಡಾರ್ಕ್ ಹಾರ್ಸ್. ಜೆಡಿಎಸ್‌ನಿಂದ ದಿವಂಗತ ರಾಮಕೃಷ್ಣ ಹೆಗಡೆಯ ದಾಯಾದಿ ಮೊಮ್ಮಗ ಶಶಿಭೂಷಣ ಹೆಗಡೆ ಸ್ಪರ್ಧಿಸುತ್ತಾರೆಂದು ಈವರೆಗಿನ ನಿರ್ಧಾರವಾಗಿತ್ತು, ಆತ ಇಡೀ ಕ್ಷೇತ್ರಕ್ಕೇ ಒಂದು ರೌಂಡೂ ಹಾಕಿಯಾಗಿತ್ತು,

ಆದರೆ ಕಾಂಗ್ರೆಸ್ ಟಿಕೆಟ್‌ಗಾಗಿ ನಡೆದಿರುವ ಶೂದ್ರ-ಬ್ರಾಹ್ಮಣ ಮತ್ತು ಮ್ಯಾಗಿ-ದೇಶಪಾಂಡೆ ಕಾಳಗ ಜೆಡಿಎಸ್ ಮೇಲೆ ಅಡ್ಡ ಪರಿಣಾಮ ಮಾಡುತ್ತಿರುವುದು ವಿಚಿತ್ರವಾದರೂ ಖರೆ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಭೀಮಣ್ಣ ನಾಯ್ಕ ದಿವಂಗತ 'ಬಂ'ರ ಭಾಮೈದ. 'ಬಂ'ರಿಂದಾಗಿಯೇ ರಾಜಕೀಯದ ಅ,ಆ,ಇ,ಈ ಕಲಿತವ. ಇಂಥವನಿಗೆ ಅಸೆಂಬ್ಲಿ ಟಿಕೆಟ್ ಕೊಡಿಸುವ ಆಮಿಷವೊಡ್ಡಿ 'ಬಂ' ಜೀವಂತವಿರುವಾಗಲೇ ದೇಶಪಾಂಡೆ ಹೈಜಾಕ್ ಮಾಡಿದ್ದರು. ಈ ದೀವರ ಧೀರನನ್ನು ಡಿಸಿಸಿ ಅಧ್ಯಕ್ಷನಾಗಿಸಿ ಎದುರಾಳಿ ಮ್ಯಾಗಿಗೂ ಟಾಂಗ್ ಕೊಟ್ಟಿದ್ದರು.

ಈಗ ದೇಶಪಾಂಡೆಗೆ ಭೀಮಣ್ಣನಿಗೆ ಕಾಂಗ್ರೆಸ್ ಟಿಕೆಟ್ ಕೊಡಿಸುವ ಮನಸ್ಸಿಲ್ಲ, ಮ್ಯಾಗಿ ಶಿಷ್ಯ ರವೀಂದ್ರ ನಾಯ್ಕ್ ಎಂಬ ಗೋಲ್‌ಮಾಲ್ ಗಿರಾಕಿಗೂ ಟಿಕೆಟ್ ದಕ್ಕಲು ಆತ ಬಿಡುತ್ತಿಲ್ಲ. ಈ ರವಿ ಕಳೆದ ಚುನಾವಣೆಯಲ್ಲಿ ಭಾರಿ ಭರ್ಜರಿ ಅಂತರದಿಂದ ಕಾಗೇರಿ ಎದುರು ಮುಂಡಿಯೂರಿದವ. ಇಂಥವನಿಗೆ ಟಿಕೆಟ್ ಕೊಡುವುದು ಅನರ್ಥಕಾರಿ ನಿಜ. ಆದರೆ ಕ್ಷೇತ್ರದ ಬಹುಸಂಖ್ಯಾತ ದೀವರ ಬೆಂಬಲ ಗಳಿಸಿರುವ ಭೀಮಣ್ಣನಿಗೆ ದೇಶಪಾಂಡೆ ವಂಚಿಸುತ್ತಿರುವುದೇಕೆ?

ಇದಕ್ಕೆ ಎರಡು ಕಾರಣ. ಒಂದು ಭೀಮಣ್ಣನಂಥ ಬಲಾಢ್ಯ ಶೂದ್ರ ಕಾಂಗ್ರೆಸ್‌ನಿಂದ ನಿಂತರೆ ಕಾಗೇರಿ ಗೆಲ್ಲುವುದಿಲ್ಲ. ಕಾಗೇರಿ ಸೋಲುವುದು ದೇಶಪಾಂಡೆಗೆ ಬೇಕಾಗಿಲ್ಲ, ಇದು 25 ವರ್ಷದ ಹಿಂದಿಂದಲೂ ದೇಶಪಾಂಡೆ-ಕಾಂಗೇರಿ ನಡೆಸಿಕೊಂಡು ಬಂದಿರುವ ಅನೈತಿಕ ಒಳರಾಜಕೀಯ. ಕಾಗೇರಿಯನ್ನು ಗೆಲ್ಲಿಸಲು ಕಾಂಗ್ರೆಸ್‌ನಿಂದ ಶಾಂತಾರಾಮ ಹೆಗಡೆ ಎಂಬ ದುರ್ಬಲನನ್ನು ಕಣಕ್ಕಿಳಿಸುವ ಇರಾದೆ ದೇಶಪಾಂಡೆ ಸಾಹೇಬರದು. ಇದರ ಹಿಂದೆ ಹೈಗರ ಮಠಾಧೀಶರಾದ ಸ್ವರ್ಣವಲ್ಲಿ ಸ್ವಾಮಿ ಮತ್ತು ರಾಮಚಂದ್ರಾಪುರ ಮಠಾಧೀಶ ರಗಳೆ ರಾಘವನ ಕಿತಾಪತಿಯೂ ಅಡಗಿದೆ. ಈ ಬ್ರಾಹ್ಮಣ ಸ್ವಾಮಿಗಳಿಗೆ ಕಾಗೇರಿ ಬಿದ್ದರೂ ಬೇಸರವಿಲ್ಲ. ಹಾಗಂತ ಶೂದ್ರರ್‍ಯಾರೂ ಗೆಲ್ಲಬಾರದು. ಹಾಗಾಗಿ ಕಾಂಗ್ರೆಸ್‌ನಿಂದಲೂ ಬ್ರಾಹ್ಮಣರೇ ಕ್ಯಾಂಡಿಡೇಟಾಗುವಂತೆ ಈ ಸ್ವಾಮಿದ್ವಯರು ಕಸರತ್ತು ನಡೆಸಿದ್ದಾರೆ. ಇದರ ಪರಿಣಾಮವಾಗಿ ಶಾಂತಾರಾಮ ಹೆಗಡೆ ಎಂಬ ಅಡಿಕೆ ಕಳ್ಳ ಕಾಂಗ್ರೆಸ್ ಟಿಕೆಟ್ ಪಡೆಯುವ ಸಾಧ್ಯತೆ ಹೆಚ್ಚಾಗಿದೆ.


ಹಾಗೊಮ್ಮೆ ಭೀಮಣ್ಣ ನಾಯ್ಕನಿಗೆ ಕಾಂಗ್ರೆಸ್ ಟಿಕೆಟ್ ತಪ್ಪಿದರೆ ಆತ ತಕ್ಷಣವೇ ಸೋದರಳಿಯ ಮಧು 'ಬಂ'ರ ಜೆಡಿಎಸ್‌ಗೆ ಸೇರುತ್ತಾನೆ. ಅಷ್ಟೇ ಅಲ್ಲ, ಸಿನೆಮಾ ನಟ ಶಿವರಾಜ್‌ಕುಮಾರ್ ಹೆಂಡತಿ- ಮಧು'ಬಂ' ಅಕ್ಕ-ಭೀಮಣ್ಣ ನಾಯ್ಕನ ಅಕ್ಕನ ಮಗಳಾದ ಗೀತಾ ಬಂಗಾರಪ್ಪ, ಯಾನೆ ಗೀತಾ ಶಿವರಾಜ್‌ಕುಮಾರ್‌ಳನ್ನು ಶಿರಸಿಯಲ್ಲಿ ಜೆಡಿಎಸ್ ಕ್ಯಾಂಡಿಡೇಟ್ ಮಾಡಲಾಗುತ್ತದೆ. ಅರ್ಥಾತ್ ಶಶಿಭೂಷಣ್ ಹೆಗಡೆಯನ್ನು ಬೀದಿ ಪಾಲಾಗಿಸಲಾಗುತ್ತದೆ. ಇದು ಮಧು-ಭೀಮಣ್ಣರ ಸ್ಟ್ರೇಟಜಿ. ಈ ಸೂತ್ರ ತೋರಿಸಿಯೇ ಭೀಮಣ್ಣ ಈಗ ದೇಶಪಾಂಡೆಗೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನೆ. ದೇಶಪಾಂಡೆ ಬೆಚ್ಚಿಬಿದ್ದಿದ್ದಾರೆ ಪಾಪ!!

ಏನೇ ಇರಲಿ, ಭೀಮಣ್ಣನ ಕಾಂಗ್ರೆಸ್ ಕ್ಯಾಂಡಿಡೇಟಾಗಲಿ ಅಥವಾ ಗೀತಾ ಶಿವರಾಜ್‌ಕುಮಾರ್ ಜೆಡಿಎಸ್ ಅಭ್ಯರ್ಥಿಯಾಗಲಿ ಕಾಗೇರಿಗೆ ಸೋಲು ಮಾತ್ರ ಖಾತ್ರಿ. ಕಾಗೇರಿಯ ಕಾವಿ ಕುತಂತ್ರ ಈ ಸಲ ಆತನಿಗೇ ತಿರುಗುಬಾಣ ಆಗುವ ಸೂಚನೆ ಗೋಚರಿಸುತ್ತಿದೆ. ಒಂದು ಕಡೆ ಸ್ವಪಕ್ಷದ ಸಂಸದ ಅನಂತ್ಕಾಣಿಯೇ ತಿರುಗಿ ಬಿದ್ದಿದ್ದಾನೆ. ಅನಂತ್ಕಾಣಿ ಅತ್ಯಾಪ್ತ ಸಹಚರ ರವಿ ಹೆಗಡೆ ಹೂವಿನ ಮನೆ ಎಂಬಾತ ಜಿಲ್ಲಾ ಕೆಜೆಪಿ ಸಂಚಾಲಕನಾಗಿದ್ದಾನೆ. ಆತ ಕೆಜೆಪಿ ಕ್ಯಾಂಡಿಡೇಟಾಗಿ ಶಿರಸಿಯಲ್ಲಿ ಕಾಗೇರಿಗೆ ಸೆಡ್ಡು ಹೊಡೆಯಲು ಅವಡುಗಚ್ಚಿ ರೆಡಿಯಾಗಿದ್ದಾನೆ. ಕಾಗೇರಿಯಿಂದ ತುಳಿಸಿಕೊಂಡ ರವಿ ಹೆಗಡೆ ಬ್ರಾಹ್ಮಣರ ಒಂದಿಷ್ಟು ಓಟು ಕಿತ್ತರೂ ಸಾಕು, ಅದು ಬಿಜೆಪಿಗೆ ಹಾನಿ. ಹಾಗೆಯೇ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಸಚ್ಚಿದಾನಂದ ಹೆಗಡೆ, ಪಶ್ಚಿಮ ಘಟ್ಟ ಕಾರ್ಯಪಡೆ ಅಧ್ಯಕ್ಷ ಅನಂತ ಹೆಗಡೆ ಆಶೀಸರ, ವಗೈರೆ ಬ್ರಾಹ್ಮಣ ಕುಲಬಾಂಧವರೇ ಕಾಗೇರಿಗೆ ವಿಶ್ರಾಂತಿ ಕೊಡಲು ಬೆವರಿಳಿಸಲಿದ್ದಾರೆ. ಬಿಎಸ್‌ಆರ್‌ಸಿಯಿಂದ ವಕೀಲಾಗ್ರೇಸ ರಾಮಾ ಜೋಷಿ ಸ್ಪರ್ಧೆಗಿಳಿಯಲಿದ್ದಾರೆ. ಇದೂ ಕಾಗೇರಿಗೇ ಮೈನಸ್. ಜೆಡಿಎಸ್‌ನಿಂದ ಶಶಿಭೂಷಣ ಹೆಗಡೆ ಹುರಿಯಾದರಂತೂ ಹೆಗಡೆಜೀ ಅಭಿಮಾನಿಗಳು, ಸಿದ್ದಾಪುರ ಏರಿಯಾದ ಹೈಗರು ಕಾಗೇರಿ ಕಾಲೆಳೆಯಲಿದ್ದಾರೆ.

ಅಭ್ಯರ್ಥಿಗಳ ನಡುವೆ ಯಾವ ಸಮೀಕರಣವಾದರೂ ಕಾಗೇರಿಗೆ ಗಂಡಾಂತರ! ಕಾಗೇರಿ-ಗೀತಾ ಶಿವರಾಜ್‌ಕುಮಾರ್-ಶಾಂತಾರಾಮ ಹೆಗಡೆ ಕಾಳಗವೇ ನಡೆಯಲಿ ಇಲ್ಲವೇ ಕಾಗೇರಿ-ಶಶಿಭೂಷಣ ಹೆಗಡೆ-ಭೀಮಣ್ಣ ನಾಯ್ಕ ತ್ರಿಕೋನ ಸ್ಪರ್ಧೆಯೇ ಆಗಲಿ, ಇದು ಕಾಗೇರಿಯನ್ನು ಮಾಜಿ ಮಾಡುತ್ತದೆ!! ಈ ಸಂಭವನೀಯ ಆಟದಲ್ಲಿ ಕೊನೆಗೆ ಬಿಜೆಪಿಯ ಕಾಗೇರಿ, ಕಾಂಗ್ರೆಸ್‌ನ ಭೀಮಣ್ಣ ಮತ್ತು ಜೆಡಿಎಸ್‌ನ ಶ[ಶಿ] ಮಧ್ಯೆ ಘನಘೋರ ಕಾದಾಟ ನಡೆಯುವ ಸಾಧ್ಯತೆಯೇ ಹೆಚ್ಚು!

ಕಾಗೇರಿಯನ್ನು ಬಚಾಯಿಸುವ ದೇಶಪಾಂಡೆಯ ಆಟ ಈ ಬಾರಿ ಕಾಂಗ್ರೆಸ್‌ನಲ್ಲಿ ನಡೆಯುವುದು ಕಷ್ಟ. ಹೈಗರ ಸ್ವಾಮಿಗಳಿಗೂ ಇದು ಅರ್ಥವಾಗಿದೆ. ಕಾಗೇರಿಯನ್ನು ಕಳೆದುಕೊಳ್ಳುವ ಪೀಠಾಧಿಪತಿಗಳು ಪಕ್ಕದ ಯಲ್ಲಾಪುರದಲ್ಲಾದರೂ ಕುಲತಿಲಕ ಶಿವರಾಮ ಹೆಬ್ಬಾರ್ (ಕಾಂಗ್ರೆಸ್)ನನ್ನು ಗೆಲ್ಲಿಸಿಕೊಳ್ಳುವ ಅನಿವಾರ್ಯಕ್ಕೆ ಬಿದ್ದಿದ್ದಾರೆ...

ಪರದೇಶಿ ಸ್ವತ್ತಿಗೆ ಪಾಪಿಗಳ ಕಣ್ಣು


ಆಸ್ತಿ ಮೇಲೆ ಕಣ್ಣು ಹಾಕಿರುವ ಮೈಕಲ್

ಒಂದಾನೊಂದು ಕಾಲದಲ್ಲಿ ಘನತೆ ಗೌರವಗಳಿಗೆ ...ವಾಗಿದ್ದ ಶಾಂತಪ್ರಿಯ ಮೈಸೂರು ಈಗ ಒಂದರ ... ಮತ್ತೊಂದು ಹಗರಣಕ್ಕೆ ಸಿಲುಕಿ ಕುಖ್ಯಾತವಾಗುತ್ತಿದೆ.

ಮಾರ್ಚ್ 12ರಂದು ಮೈಸೂರು ...ನಗರದಲ್ಲಿ ಸಂಭವಿಸಿದ ಶತಾಯುಷಿ ...ರ ಸಾವು ಈಗ ಮತ್ತೊಂದು ಹಗರಣದ ... ಪಡೆಯುತ್ತಿದೆ.

...ಿಂದು ಸತ್ತ ಮಹಾನುಭಾವನ ಹೆಸರು ... ಜೋಬರ್ಟ್ ವ್ಯಾನ್ ಇಂಜೆನ್. ...ಸಾಮಾನ್ಯ ವ್ಯಕ್ತಿಯಲ್ಲ; ಅಂತಾರಾಷ್ಟ್ರೀಯ ...ತೆ ಗಳಿಸಿದ್ದ ಟ್ಯಾಕ್ಸಿಡರ್ಮಿಸ್ಟ್. ...ಡರ್ಮಿಸ್ಟ್ ಎಂದರೆ ಮ್ಯೂಸಿಯಂಗಳಲ್ಲಿ ..., ಸಿಂಹ, ಚಿರತೆ, ಕಾಡುಕೋಣ ...ತಾದ ಪ್ರಾಣಿಗಳ ಚರ್ಮದಿಂದ ...ರಿಸಿದ ಪ್ರತಿಕೃತಿಗಳನ್ನು ನಾವೆಲ್ಲಾ ...ಗಣ್ಣುಗಳಿಂದ ನೋಡಿದ್ದೀವಲ್ಲಾ? ಅಂಥಾ ಪ್ರತಿಕೃತಿಗಳನ್ನು ರಚಿಸುವ ಕಲೆಗೆ ಟ್ಯಾಕ್ಸಿಡರ್ಮಿ ಅಂತಲೂ, ಅಂಥಾ ನಿಪುಣರಿಗೆ ಟ್ಯಾಕ್ಸಿಡರ್ಮಿಸ್ಟ್ ಅಂತಲೂ ಕರೆಯುತ್ತಾರೆ.

ಇಂಥಾ ಟ್ಯಾಕ್ಸಿಡರ್ಮಿಸ್ಟ್ ಆಗಿದ್ದ ಎಡ್ವಿನ್ ಜೋಬರ್ಟ್‌ಗೆ ಹೆಂಡತಿಮಕ್ಕಳು ಯಾರೂ ಇರಲಿಲ್ಲ; ಆದರೂ ಜೀವನಪ್ರೀತಿಯನ್ನು ಮೈತುಂಬಿಕೊಂಡಿದ್ದ ಆತ ಬರೋಬ್ಬರಿ 101 ವರ್ಷ ಬಾಳಿ ಬದುಕಿ, ಇಹಲೋಕ ತ್ಯಜಿಸಿದ. ಇದು ಮಾಮೂಲಿನಂತೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯೂ ಆಯಿತು.


ಆತ ಕೇವಲ ತನ್ನ ಪಾರ್ಥಿವ ಶರೀರವನ್ನಷ್ಟೆ ಬಿಟ್ಟುಹೋಗಿದ್ದರೆ, ಪೊಲೀಸರಿಗೆ ಮತ್ತು ಕಾರ್ಪೊರೇಷನ್ ವ್ಯಾನ್‌ನವರಿಗೆ ಮಾತ್ರ ಅನಿವಾರ್ಯ ಕರ್ತವ್ಯ ಉಳಿಯುತ್ತಿತ್ತು, ಆದರೆ ಆತ ಬಿಟ್ಟುಹೋದ ಕೋಟ್ಯಾಂತರ ಬೆಲೆಯ ಆಸ್ತಿ ಪಾಸ್ತಿಯಿದೆಯಲ್ಲಾ? ಅದು ಈ ವ್ಯಕ್ತಿಯ ಸುತ್ತ ಹಲವಾರು ಗಂಟುಕಳ್ಳರನ್ನು ಜಮಾವಣೆ ಮಾಡಿದೆ. ಹೀಗಾಗಿ ಈತನ ಸಾವು ಮತ್ತು ವಾರಸುದಾರಿಕೆಯ ಪ್ರಶ್ನೆ ದಿನೇದಿನೇ ಜಟಿಲಗೊಳ್ಳುತ್ತಾ ಸಾಗಿದೆ.

ಈ ಕತೆಯನ್ನು ಕೆದಕುತ್ತಾ ಹೋದರೆ ತೀವ್ರ ಕುತೂಹಲ ಹುಟ್ಟುತ್ತದೆ. ಕಳೆದ ಒಂದೂವರೆ ವರ್ಷದಿಂದ ಈ ಕಲೆಗಾರ ಕಂ ತಂತ್ರಜ್ಞ ಜೋಬರ್ಟ್ ಹಾಸಿಗೆ ಹಿಡಿದಿದ್ದರು. ತಾನು ಸಾಯುವ ಹಿಂದಿನ ದಿನವಷ್ಟೆ ಮೈಕೆಲ್ ಈಶ್ವರ್ ಎಂಬಾತನ ವಿರುದ್ಧ ಒಂದು ಕಂಪ್ಲೈಂಟ್ ಕೊಟ್ಟಿದ್ದರು.

ಆ ಕಂಪ್ಲೈಂಟ್‌ನ ಸಾರಾಂಶ ಇಷ್ಟು. ಮೈಕೆಲ್ ಈಶ್ವರ್ ಎಂಬುವವನು ನಕಲಿ ದಾಖಲೆಗಳನ್ನು ಸೃಷ್ಟಿಸಿ ತನ್ನ ಆಸ್ತಿಪಾಸ್ತಿಗಳನ್ನು ಲಪಟಾಯಿಸಿದ್ದಾನೆ ಹಾಗೂ ತನ್ನನ್ನು ಅಕ್ರಮವಾಗಿ ಒಂದು ಕೋಣೆಯಲ್ಲಿ ಕೂಡಿಹಾಕಿದ್ದಾನೆ ಎಂಬುದಾಗಿತ್ತು. ಈ ಕಂಪ್ಲೈಂಟನ್ನು ವಯೋವೃದ್ಧ ಜೋಬರ್ಟ್ ತನ್ನ ಮನೆಗೆಲಸದವರ ಕೈಯಲ್ಲಿ ಪೊಲೀಸ್ ಠಾಣೆಗೆ ಮಾರ್ಚ್ 3ನೇ ತಾರೀಖೇ ಕಳಿಸಿಕೊಟ್ಟಿದ್ದರಂತೆ. ತನಿಖಾಧಿಕಾರಿ ಮಾರ್ಚ್ 11ಕ್ಕೆ ಎಫ್‌ಐಆರ್ ದಾಖಲಿಸಿದ್ದಾರಂತೆ.

ಈ ದೂರನ್ನು ಸೂಕ್ಷ್ಮವಾಗಿ ಗಮನಿಸಿದರೆ ಈ ಸಾವಿನ ಸುತ್ತ ಭಾರೀ ಷಡ್ಯಂತ್ರವೇ ನಡೆದಿರುವುದು ನಿಕ್ಕಿಯಾಗುತ್ತದೆ. ಮೈಕೆಲ್ ಈಶ್ವರ್ ಎಂಬ ರಿಯಲ್ ಎಸ್ಟೇಟ್ ಆಸಾಮಿಯೊಬ್ಬ ತಾನು ಜೋಬರ್ಟ್ ಅವರ ದತ್ತುಪುತ್ರ ಎಂದು ಕೆಲವು ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದಾನೆ. ನಜರ್‌ಬಾದ್ ಪೊಲೀಸರು ಆತನ ತಲಾಶೆಯಲ್ಲಿರುವುದರಿಂದ ಸದ್ಯ ಈ "ದತ್ತು ಪುತ್ರ" ಪರಾರಿಯಾಗಿದ್ದಾನೆ.

ನಾನೆ ದತ್ತು ಪುತ್ರ ಎಂದು ಮೈಕೆಲ್‌ನಂಥವರು ಘೋಷಿಸಿಕೊಳ್ಳಲು ಬಲವಾದ ಕಾರಣ ವಾರಸುದಾರರಿಲ್ಲದ ಜೋಬರ್ಟ್‌ನ ಖಾಸಗಿ ಆಸ್ತಿಪಾಸ್ತಿಗಳು ಮಾತ್ರ. ಮೈಸೂರು ನಗರದ ಆಯಕಟ್ಟಿನ ಜಾಗದಲ್ಲಿ, ಅಂದರೆ ರಾಜ್ಯ ಪೊಲೀಸ್




ಅಕಾಡೆಮಿಯ ಎದುರುಗಡೆಯ ವಿಶಾಲವಾದ ಮೈದಾನದಲ್ಲಿ ಬ್ರಿಟಿಷ್ ಶೈಲಿಯ ಭಾರೀ ಬಂಗಲೆಯೇ ವ್ಯಾನ್ ಇಂಜೆನ್‌ನ ನಿವಾಸವಾಗಿತ್ತು. ಒಟ್ಟು 76,708 ಅಡಿಗಳ ವಿಸ್ತೀರ್ಣ! ರಿಯಲ್ ಎಸ್ಟೇಟ್ ಕ್ರಿಮಿಗಳಿಗೆ ಬಾಯಲ್ಲಿ ನೀರೂರಿಸುವಂಥ ಸ್ಥಳ! ಒಂದು ಚದರ ಅಡಿಗೆ ಏನಿಲ್ಲವೆಂದರೂ ನಾಲ್ಕು ಸಾವಿರ ರೂಪಾಯಿ ಅಂತ ಲೆಕ್ಕ ಹಿಡಿದರೂ 30 ಕೋಟಿಗೂ ಅಧಿಕ ಮೊತ್ತ! ಹಾಗೆಯೆ ಕೇರಳದ ಮಾನಂದವಾಡಿಯಲ್ಲಿ ಸುಮಾರು 250 ಎಕರೆ ಕಾಫಿ ತೋಟವೂ ಸೇರಿದೆ. ಅದರಲ್ಲಿ ಈಗಾಗಲೇ ಸುಮಾರು 40 ಎಕರೆಯಷ್ಟನ್ನು ಈ ದತ್ತು ಪುತ್ರನೇ ಮುಂದೆ ನಿಂತು ಮಾರಾಟ ಮಾಡಿದ್ದಾನೆ. ಮೈಸೂರು ನಗರದ ಆಸ್ತಿಯ ಒಂದು ಭಾಗವನ್ನು ಈ ಹಿಂದೆಯೇ ಪರಭಾರೆ ಮಾಡಲಾಗಿದ್ದು ಆ ಜಾಗದಲ್ಲಿ ಭಾರೀ ಶಾಪಿಂಗ್ ಮಾಲ್ ನಿರ್ಮಾಣಕಾರ್ಯ ಭರದಿಂದ ಸಾಗಿದೆ.

ಈ ದತ್ತು ಪುತ್ರ ಜೋಬರ್ಟ್‌ನ

...6ನೇ ಪುಟಕ್ಕೆ


ಜೋಬರ್ಟ್‌ರ ಆಪ್ತ ಸಹಾಯಕಿ ಮರಿನಾ ಮೈನ್



ಜೋಬರ್ಟ್‌ರ ಮೈಸೂರಿನಲ್ಲಿರುವ ಬ್ರಿಟಿಷ್ ಶೈಲಿಯ ಬಂಗಲೆ

...ಾಕ್ಸಿಡರ್ಮಿ-ಕಲೆಯೋ? ಕೊಲೆಯೋ?

...ಎಡ್ವಿನ್ ಜೋಬರ್ಟ್ ವ್ಯಾನ್ ಇಂಜೆನ್‌ನ ...ಕರು ಮೂಲತಃ ಹಾಲೆಂಡ್ ದೇಶದವರು. ಸುಮಾರು ...ು ಶತಮಾನಗಳ ಹಿಂದೆ ಡಚ್ಚರು ವ್ಯಾಪಾರಕ್ಕಾಗಿ ...ಕ್ಕೆ ಬಂದರು ನೋಡಿ; ಹಾಗೆ ಬಂದವರಲ್ಲಿ ವ್ಯಾನ್ ...ನ್ ಕುಟುಂಬವೂ ಒಂದು. ಎಡ್ವಿನ್‌ರ ತಂದೆ ...ಜೆನ್ ಮೆಲ್ವಿಲೆ ವ್ಯಾನ್ ಇಂಜೆನ್ ಟ್ಯಾಕ್ಸಿಡರ್ಮಿ ...ಯಲ್ಲಿ ಪರಿಣತಿ ಪಡೆದಿದ್ದವರು.

...ಗಿನ ಕಾಲದಲ್ಲಿ ರಾಜಪರಿವಾರ ಹಾಗೂ ಬ್ರಿಟಿಷ್ ...ರಿಗಳಿಗೆ ಕೇವಲ ಮೋಜಿಗಾಗಿ ಕಾಡುಪ್ರಾಣಿಗಳನ್ನು ...ಟ್ಟು ಕೊಲ್ಲುವ ದುಶ್ಚಟವೂ ಇತ್ತು. ಹಾಗೆ ತಾವು ...ದ ಪ್ರಾಣಿಗಳ ತಲೆಬುರುಡೆ, ಕೊಂಬು ಹಾಗೂ ...ಗಳನ್ನು ಸಂಗ್ರಹಿಸುವ ಹವ್ಯಾಸ ರೂಢಿಸಿಕೊಂಡಿದ್ದರು. ...ಮೇಣ ತಾಂತ್ರಿಕ ಪ್ರಗತಿ ಹೊಂದಿದಂತೆ ಸತ್ತ ಪ್ರಾಣಿಯ ...ರವನ್ನೇ ಬಳಸಿ ಜೀವಂತ ಪ್ರಾಣಿಯನ್ನೇ ಹೋಲುವ ...ತಿ ತಯಾರಿಕಾ ವಿಧಾನ ಚಾಲ್ತಿಗೆ ಬಂತು. ಅದೇ ...ಡರ್ಮಿ ಕಲೆ.

...ೀಗೆ ಟ್ಯಾಕ್ಸಿಡರ್ಮಿ ಕೃತಿಗಳಿಗೆ ಭಾರೀ ಬೇಡಿಕೆಯಿ...ನ್ನು ಮನಗಂಡ ವ್ಯಾನ್ ಇಂಜೆನ್ ಈ ಕಲೆಗೆ ಒಂದು ...ಮದ ರೂಪ ನೀಡಿದರು. ಹೀಗೆ ಪ್ರಪಂಚದಲ್ಲೇ ...ಮೊದಲ ಬಾರಿಗೆ ಮೈಸೂರಿನಲ್ಲಿ ಟ್ಯಾಕ್ಸಿಡರ್ಮಿ ...ಯೊಂದು 1890ರಲ್ಲಿ ಪ್ರಾರಂಭವಾಯಿತು. ಅದೇ ವರ್ಷ ಮಧ್ಯಪ್ರದೇಶದ ಮಹಾರಾಜನೊಬ್ಬ ಬೇಟೆಯ ಮೋಜಿಗಾಗಿ ಒಂದೇ ದಿನದಲ್ಲಿ 22 ಹುಲಿಗಳನ್ನು ಗುಂಡಿಟ್ಟು ಕೆಡವಿದ್ದ. ಆ ಇಪ್ಪತ್ತೆರಡೂ ಹುಲಿಯ ಶವಗಳು ಮೈಸೂರಿನ ಈ ಫ್ಯಾಕ್ಟರಿಗೆ ರವಾನೆಯಾಗಿ, ಕಲಾಕೃತಿಗಳ ರೂಪ ಪಡೆದು ಮೈಸೂರಿನ ಖ್ಯಾತಿಯನ್ನು ಹೆಚ್ಚಿಸಿದ್ದವು!!

ಈ ಫ್ಯಾಕ್ಟರಿಯಲ್ಲಿ ತಯಾರಾದ ಪ್ರತಿರೂಪಗಳು ಜಗತ್ತಿನೆಲ್ಲೆಡೆಗೂ ರಫ್ತಾಗಿವೆ. ಬ್ರಿಟಿಷ್ ಅಧಿಕಾರಿಗಳ ಹಾಗೂ ಭಾರತದ ಶ್ರೀಮಂತರ ವಿಲಾಸಿ ಬಂಗಲೆಗಳಲ್ಲಿ ಅಲಂಕಾರಿಕ ವಸ್ತುಗಳಾಗಿ, ಅವರ ದರ್ಪದ ಸಂಕೇತಗಳಾಗಿ ಈ ಟ್ಯಾಕ್ಸಿಡರ್ಮಿ ಕೃತಿಗಳು ಸ್ಥಾನ ಪಡೆದುಕೊಂಡಿವೆ.

ನಮ್ಮ ದೇಶದಲ್ಲಿರುವ ಎಲ್ಲಾ ಮೃಗಾಲಯಗಳಲ್ಲಿ ಹಾಗೂ ಮ್ಯೂಸಿಯಂಗಳಲ್ಲಿ ಕಂಡುಬರುವ ಟ್ಯಾಕ್ಸಿಡರ್ಮಿ ಪ್ರತಿಕೃತಿಗಳಲ್ಲಿ ಕನಿಷ್ಟ ಅರ್ಧಭಾಗ ಮೈಸೂರಿನ ಈ ಕಾರ್ಖಾನೆಯಲ್ಲಿ ತಯಾರಾಗಿವೆ ಎಂಬುದೇ ಇವರ ಮಹತ್ವವನ್ನು ಸೂಚಿಸುತ್ತದೆ. ಇದುವರೆಗೆ ಈ ಕಾರ್ಖಾನೆ ಸುಮಾರು 43,000ಕ್ಕೂ ಹೆಚ್ಚು ಟ್ಯಾಕ್ಸಿಡರ್ಮಿ ಪ್ರತಿಕೃತಿಗಳನ್ನು ರೂಪಿಸಿದ ಹೆಗ್ಗಳಿಕೆ ಹೊಂದಿದೆ. ಒಂದುಕಾಲದಲ್ಲಿ ಪ್ರಪಂಚದಲ್ಲೇ ಅತಿದೊಡ್ಡ ಟ್ಯಾಕ್ಸಿಡರ್ಮಿ ಕಾರ್ಖಾನೆ ಎಂಬ ಖ್ಯಾತಿಗೆ ಪಾತ್ರವಾಗಿತ್ತು. ಈ ಕಾರ್ಖಾನೆ ಉತ್ತುಂಗದಲ್ಲಿದ್ದಾಗ ಸುಮಾರು 150 ಕುಶಲಕರ್ಮಿಗಳು ಇಲ್ಲಿ ದುಡಿಯುತ್ತಿದ್ದರು. ಕಂಪನಿಯಲ್ಲಿ ತಯಾರಾದ ಅರ್ಧ ಉತ್ಪನ್ನಗಳಿಗೆ ಇದೇ ರಾಜ ಪರಿವಾರ, ಬ್ರಿಟಿಷ್ ಅಧಿಕಾರಿಗಳು ಹಾಗೂ ಸ್ಥಳೀಯ ಶ್ರೀಮಂತರೇ ಗಿರಾಕಿಗಳಾಗಿದ್ದರು.



ವ್ಯಾನ್ ಇಂಜೆನ್‌ನ ಕೃತಿಗಳು..

ಇವುಗಳಿಗೆ ಬೇಡಿಕೆ ಹೆಚ್ಚಿದಂತೆಲ್ಲಾ ವನ್ಯಮೃಗಗಳ ಜೀವಕ್ಕೆ ಸಂಚಕಾರವೂ ಹೆಚ್ಚಾಯಿತು. ಪ್ರಾಣಿಗಳ ಚರ್ಮ, ಉಗುರು, ಕೊಂಬು ಮುಂತಾದ ಅಂಗಾಂಗಗಳನ್ನು ಪಡೆದುಕೊಳ್ಳಲಿಕ್ಕಾಗಿ ಪ್ರಾಣಿಗಳ ಬೇಟೆಯೂ ಹೆಚ್ಚಾಯಿತು. ಈ ವಿದ್ಯಮಾನ ಕೇವಲ ಭಾರತಕ್ಕೆ ಸೀಮಿತವಾದುದಲ್ಲ; ವಿಶ್ವವ್ಯಾಪಿಯಾದದ್ದು. ಹೀಗಾಗಿ ಪ್ರಾಣಿ ಬೇಟೆಯನ್ನು ನಿಷೇಧಿಸುವ ಕಾನೂನುಗಳನ್ನು ಜಾರಿಗೆ ತರಲಿಕ್ಕೆಂದು ವಿಶ್ವಸಂಸ್ಥೆಯಲ್ಲಿ ನಿರ್ಣಯವೊಂದನ್ನು ಅಂಗೀಕರಿಸಬೇಕಾಯಿತು.

ಅದರಂತೆ 1975ರಲ್ಲಿ ಭಾರತ ಸರ್ಕಾರ ಪ್ರಾಣಿಗಳ ಬೇಟೆಯನ್ನು ನಿಷೇಧಿಸಿದ್ದರಿಂದಾಗಿ ಕ್ರಮೇಣ ಈ ಫ್ಯಾಕ್ಟರಿ ಕೃಶಗೊಂಡು ಕೊನೆಗೆ 1989ರಲ್ಲಿ ಸಂಪೂರ್ಣ ಸ್ಥಗಿತವಾಯಿತು. ನಂತರದ ದಿನಗಳಲ್ಲಿ ಎಡ್ವಿನ್ ಜೋಬರ್ಟ್ ತನ್ನ ಸಂಗ್ರಹಗಾರದ ಬಹುಪಾಲು ವಸ್ತುಗಳನ್ನು, ಅಂದರೆ ಪ್ರಾಣಿಗಳ ಎಲುಬು, ತಲೆಬುರುಡೆ ಮುಂತಾದುವನ್ನು ಮೈಸೂರಿನಲ್ಲಿರುವ ರೀಜನಲ್ ಮ್ಯೂಸಿಯಂ ಫಾರ್ ನ್ಯಾಚುರಲ್ ಹಿಸ್ಟರಿ ಸಂಸ್ಥೆಗೆ ವಹಿಸಿಕೊಟ್ಟರು.

ಅಮೆರಿಕ, ಬ್ರಿಟನ್‌ನಂಥಾ ದೇಶಗಳಲ್ಲಿ ಹುಲಿ ಚಿರತೆ ಮುಂತಾದ ಕಾಡುಪ್ರಾಣಿಗಳ ಚರ್ಮ, ಪ್ರತಿಕೃತಿ ಮುಂತಾದವುಗಳ ಹರಾಜು ನಡೆಯುತ್ತದೆ. ಇಂಥಾ ಮಾರಾಟ/ಹರಾಜಿಗೆ ಸಂಬಂಧಿಸಿದ ಜಾಹಿರಾತುಗಳು ಅಂತರ್ಜಾಲದಲ್ಲಿ ಯಥೇಚ್ಛವಾಗಿ ಸಿಗುತ್ತವೆ. ತೀರಾ ಇತ್ತೀಚೆಗೆ ಒಂದು ಸುಂದರ ಚಿರತೆ ಮರಿಯ ಚರ್ಮ 75000 ಡಾಲರ್‌ಗಳಿಗೆ, ಅಂದರೆ ಸುಮಾರು 38 ಲಕ್ಷ ರೂಪಾಯಿಗಳಿಗೆ ಮಾರಾಟವಾಗಿದೆ. ಅದು ಅಷ್ಟೊಂದು ದುಬಾರಿ ಬೆಲೆಗೆ ಮಾರಾಟವಾಗಲು ಕಾರಣ ಅದನ್ನು ತಯಾರಿಸಿದ್ದು ಮೈಸೂರಿನ ಪ್ರಖ್ಯಾತ ವ್ಯಾನ್ ಇಂಜೆನ್ ಕಾರ್ಖಾನೆಯಲ್ಲಿ!

ಇದನ್ನು ಕಲೆಯೆನ್ನಬೇಕೋ? ಕೊಲೆಯೆನ್ನಬೇಕೋ ಎಂಬುದೇ ಒಂದು ಜಟಿಲ ಸವಾಲು.


ಟ್ಯಾಕ್ಸಿಡರ್ಮಿ ಕೃತಿಯಲ್ಲುಳಿದ ಹುಲಿಗಳ ಪ್ರತಿಕೃತಿ



ವ್ಯಾನ್ ಇಂಜೆನ್‌ರ ಕಾರ್ಖಾನೆಯ ಜಾಹೀರಾತು


ಟ್ಯಾಕ್ಸಿಡರ್ಮಿ ಕೃತಿಯಲ್ಲುಳಿದ ಪ್ರಾಣಿಗಳ ಪ್ರತಿಕೃತಿ

ಸ್ವತ್ತಿಗೆ ಪಾಪಿಗಳ ಕಣ್ಣು

...5ನೇ ಪುಟದಿಂದ

ರಾಶಿಗೆ ವಹ್ಗರಿಸಿದ್ದು ಕೂಡ ಒಂದು ಆಸ್ತಿಯ ಡೀಲಿಂಗ್‌ಗಾಗಿ 2004ರಲ್ಲಿ, ಈ ಮೇಲ್ಕಂಡ ನಿವಾಸದ ಪಕ್ಕದಲ್ಲೇ ಇದ್ದ ಕಾರ್ಖಾನೆಗೆ ಸೇರಿದ ಜಮೀನನ್ನು 3 ಕೋಟಿ ರೂಪಾಯಿಗಳಿಗೆ ಮಾರಾಟ ಮಾಡಿಸಿದ್ದ. ಈ ವ್ಯವಹಾರದ ನಂತರ ನನಗೆ ಬಹಳ ಆತ್ಮೀಯರಾದ ಜೋಬರ್ಟ್ ನನ್ನನ್ನು ದತ್ತು ತೆಗೆದುಕೊಂಡುಬಿಟ್ಟರು ಎಂಬುದು ಈ ಪುತ್ರನ ವಿವರಣೆ.

ಅದೂಅಲ್ಲದೆ ಈಗ ಹತ್ತಾರು ಕೋಟಿ ಮೌಲ್ಯವುಳ್ಳ ಬಂಗಲೆ ಮತ್ತು ಜಮೀನನ್ನು 75 ಲಕ್ಷ ಕೊಟ್ಟು ಖರೀದಿ ಮಾಡಿರುವುದಾಗಿಯೂ ಆತ ಕ್ಲೈಮು ಮಾಡುತ್ತಿದ್ದಾನಂತೆ. ಅಂದರೆ ದತ್ತು ಪುತ್ರನಾದವನಿಗೆ ಅಪ್ಪನಿಂದ ಆಸ್ತಿ ಖರೀದಿ ಮಾಡಬೇಕಾದ ಅನಿವಾರ್ಯತೆ ಏನಿತ್ತು? ಎಂಬ ಪ್ರಶ್ನೆಗೆ ಆತ ಏನು ಹೇಳುತ್ತಾನೋ ಗೊತ್ತಿಲ್ಲ, ಅದೂಅಲ್ಲದೆ ಹೀಗೆ ಮಾರಾಟ ಮಾಡಿ ಗಳಿಸಿದ ಕೋಟ್ಯಾಂತರ ರೂಪಾಯಿ ಹಣ ಎಲ್ಲಿ ಹೋಯಿತು? ಮೊದಲೇ ಹಾಸಿಗೆ ಹಿಡಿದಿದ್ದ ಶತಾಯುಷಿ ಆ ಹಣವನ್ನು ಔಷಧಿಗೆ ಬಿಟ್ಟರೆ ಬೇರೆ ಯಾವುದಕ್ಕೆ ಖರ್ಚು ಮಾಡಿರಲು ಸಾಧ್ಯ? ಇತ್ಯಾದಿ ಪ್ರಶ್ನೆಗಳಿಗೆ ಸದ್ಯಕ್ಕೆ ಉತ್ತರವಿಲ್ಲ.

ಮತ್ತೊಂದೆಡೆ ಜೋಬರ್ಟ್‌ಗೆ ಆಪ್ತ ಸಹಾಯಕಿಯಾಗಿದ್ದ ಮರಿನಾ ಮೈನ್ ಎಂಬಾಕೆಗೂ ಈ ಆಸ್ತಿಯ ಮೇಲೆ ಕಣ್ಣಿತ್ತು ಎಂಬ ಗುಮಾನಿಯೂ ಇದೆ. ಈಕೆ ಟ್ಯಾಕ್ಸಿಡರ್ಮಿ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿಕೊಂಡು, ಜೋಬರ್ಟ್‌ಗೆ ಕಳೆದ 25 ವರ್ಷಗಳಿಂದಲೂ ಹತ್ತಿರವಾಗಿದ್ದವಳು. ಕಾರ್ಖಾನೆ ಮುಚ್ಚಿದ ನಂತರ ಜೋಬರ್ಟ್‌ನ ಆಪ್ತಳಾಗಿ ಈ ಬಂಗಲೆಯಲ್ಲೇ ಕೆಲಸಕ್ಕೆ ನಿಂತಿದ್ದಳು. ಹಣ ಎಲ್ಲಿ ಹೋಯಿತು ಎಂಬ ಪ್ರಶ್ನೆಗೆ ದತ್ತುಪುತ್ರ ಮೈಕೆಲ್ ಈಕೆಯ ಕಡೆ ಬೊಟ್ಟು ಮಾಡಿ "ಎಲ್ಲ ಹಣಕಾಸಿನ ವ್ಯವಹಾರವೂ ಆಕೆಗೆ ಗೊತ್ತು" ಅನ್ನುತ್ತಾನೆ. ಹಾಗಾದರೆ ದತ್ತು ಪುತ್ರನ ಸ್ಥಾನಕ್ಕೆ ಯಾವ ಬೆಲೆ? ಜೋಬರ್ಟ್ ಜೀವಂತವಾಗಿದ್ದಾಗ ಈತನಿಗ ಹಣಕಾಸಿನ ವ್ಯವಹಾರ ಯಾಕೆ ಬಿಟ್ಟುಕೊಡಲಿಲ್ಲ? ಎಂಬ ಪ್ರಶ್ನೆಗಳು ಹಾಗೆ ಉಳಿಯುತ್ತವೆ.

ಇಲ್ಲಿಗೆ ಎರಡು ದಶಕಗಳ ಹಿಂದೆ ಬೆಂಗಳೂರಿನಲ್ಲಿರುವ ದೇವಿಕಾರಾಣಿ ಹಾಗೂ ರೋರಿಚ್ ದಂಪತಿಗಳ ಎಸ್ಟೇಟ್ ಹಾಗೂ ಆಸ್ತಿಪಾಸ್ತಿಗಳು ಭಾರೀ ವಿವಾದಕ್ಕೀಡಾಗಿ ಕೊನೆಗೆ ಅವುಗಳನ್ನು ಸರ್ಕಾರ ಸ್ವಾಧೀನ ಪಡಿಸಿಕೊಳ್ಳುವುದರೊಂದಿಗೆ



ಸುಖಾಂತ್ಯ ಕಂಡಿತ್ತು, ಈಗಲೂ ಈ ಪರದೇಶಿಯ ಸ್ವತ್ತಿನ ಮೇಲೆ ಹಲವಾರು ಪಾಪಿಗಳು ಕಣ್ಣಲ್ಲಿ ಕಣ್ಣಿಟ್ಟು ಹೊಂಚುಹಾಕುತ್ತಿರುವುದಂತೂ ನಿಜ. ನಮ್ಮ ಸರ್ಕಾರ ಮತ್ತು ಪೊಲೀಸ್ ವ್ಯವಸ್ಥೆಯಾದರೂ ಸರಿದಾರಿಯಲ್ಲಿ ನಡೆಯುತ್ತದೆಯೋ ಎಂಬುದನ್ನು ಕಾಲವೇ ಹೇಳಬೇಕು.

○ ದೊಡ್ಡಿಪಾಳ್ಯ ನರಸಿಂಹಮೂರ್ತಿ

ಬೇಟೆ: ರಾಜರ ಜನ್ಮಸಿದ್ಧ ಹಕ್ಕು!!



ರಾಜ ಮಹಾರಾಜರ ಶೌರ್ಯವನ್ನು ಹಾಡಿಹೊಗಳುವ ಮಂದಿ ಈ ಕಾಲಘಟ್ಟದಲ್ಲೂ ನಮ್ಮಲ್ಲಿ ಹೇರಳವಾಗಿದ್ದಾರೆ. ಆದರೆ ಬಹಳಷ್ಟು ಸಂದರ್ಭಗಳಲ್ಲಿ ಆ ಶೌರ್ಯ ನೈಜ ಅರ್ಥದಲ್ಲಿ ಕ್ರೌರ್ಯವಾಗಿರುತಿತ್ತು ಎಂಬುದಕ್ಕೆ ಈ ಕೆಳಗಿನ ಒಂದೆರಡು ಉದಾಹರಣೆಗಳೇ ಸಾಕ್ಷಿ. ಮಧ್ಯಪ್ರದೇಶದ ರಾಜಸಂಸ್ಥಾನವೊಂದರ ಅಧಿಪತಿಯಾಗಿದ್ದ ರಾಜಾ ರಘುವೀರಸಿಂಹ 91 ಹುಲಿಗಳನ್ನು, 7 ಚಿರತೆಗಳನ್ನು ಮತ್ತು 5 ಆನೆಗಳನ್ನು ಬೇಟೆಯ ಮೋಜಿನಲ್ಲಿ ಕೊಂದು ಹಾಕಿದ್ದ. ಆತನ ವಾರಸುದಾರನಾಗಿ ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ಗದ್ದುಗೆಯೇರಿದ್ದವನೇ ರಾಜಾ ಗುಲಾಬ್‌ಸಿಂಹ. ಆತ 616 ಹುಲಿಗಳನ್ನು ಮತ್ತು 526 ಇತರ ಪ್ರಾಣಿಗಳನ್ನು ಬಲಿ ತೆಗೆದುಕೊಂಡಿದ್ದ.

ಇನ್ನು ಸ್ವತಂತ್ರ ಭಾರತದಲ್ಲೂ ಈ ಹೀನಚಾಳಿಯೇನೂ ಬದಲಾಗಲಿಲ್ಲ. ತಮ್ಮ ಸಂಸ್ಥಾನ ಸ್ವತಂತ್ರ ಭಾರತದಲ್ಲಿ ಲೀನವಾದ ನಂತರವೂ ಬೇಟೆಯಾಡುವ ಹಕ್ಕನ್ನು ರಾಜರು ಕಾಯ್ದಿರಿಸಿಕೊಂಡಿದ್ದರು. ಇತ್ತೀಚಿನವರೆಗೆ ಬಾಂಧವ್‌ಘಡ್ ಅರಣ್ಯ ಪ್ರದೇಶವನ್ನು ರಾಜ ಪರಿವಾರದ ಖಾಸಗಿ ಮೋಜಿಗಾಗಿ ಮೀಸಲಿರಿಸಲಾಗಿತ್ತು.

ಹೀಗಾಗಿ ಸ್ವತಂತ್ರ ಭಾರತದಲ್ಲಿ ಮೂರು ಬಾರಿ ಎಂಪಿಯಾಗಿ ವಿಂಧ್ಯಪ್ರದೇಶವನ್ನು ಪ್ರತಿನಿಧಿಸಿದ್ದ ಇದೇ ವಂಶಸ್ಥ ರಾಜಾ ಮಾರ್ತಾಂಡಸಿಂಹನಿಗೆ 131 ಹುಲಿಗಳನ್ನು ಹೊಡೆದು ಕೆಡವಿದ "ಖ್ಯಾತಿ" ಇದೆ.

ಈತನ ಮಗ ರಾಜಾ ಪುಷ್ಪರಾಜ ಸಿಂಹ 1997ರಲ್ಲಿ ಕೇಂದ್ರದಲ್ಲಿ ಮಂತ್ರಿಯಾಗಿದ್ದವನು. ಈತ ಹುಲಿ ಸಂತತಿಯನ್ನು



ಬಿಕ್ನೇರ್ ಮಹಾರಾಜ

ಉಳಿಸುವ ಅಭಿಯಾನ ಕೈಗೊಂಡಿದ್ದಾನೆ. ಹೀಗಾಗಿ ಹುಲಿ ಸಂರಕ್ಷಣಾ ಯೋಜನೆಯ ಅಧಿಕೃತ ಸಂಚಾಲಕನೂ ಆಗಿ ಪ್ರಚಾರ ಗಿಟ್ಟಿಸಿದ್ದಾನೆ. ಎಂಥಾ ವಿಪರ್ಯಾಸ!?

....ಅಂಕದ ಕೋಳಿಗಳು!!

...4ನೇ ಪುಟದಿಂದ

ನಾರ್ವೇಕರ್ ಎಂಬ ಹೆಸರುವಾಸಿ ಚಿಡ್ಡಿಗೆ ಬಿಜೆಪಿ ಟಿಕೆಟ್ ಗ್ಯಾರಂಟಿ. ಒಟ್ಟಿನಲ್ಲಿ ಕಾರವಾರ ಕ್ಷೇತ್ರದಲ್ಲಿ 'ಅದಲು ಬದಲು ಕಂಚೀ ಕದಲು...' ಆಟ ನಡೆದಿದೆ.

ಶಾರದಾ ಶೆಟ್ಟಿಗೆ ಛಾನ್ಸ್

ಕುಮಟಾ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಕಾಳಗದ ಸೆಮಿಫೈನಲ್‌ಗೆ ದಿವಂಗತ ಮಾಜಿ ಶಾಸಕ ಮೋಹನ ಶೆಟ್ಟಿ ಮಡದಿ ಶಾರದಾ ಶೆಟ್ಟಿ, ಮಾಜಿ ಜಿ.ಪಂ. ಅಧ್ಯಕ್ಷೆ ಗಾಯತ್ರಿ ಗೌಡ ಮತ್ತು ಸಿದ್ದು ಸಖ ಯಶೋಧರ ನಾಯ್ಕ ತಲುಪಿದ್ದಾರೆ. ಉಳಿದ ಒಂದು ಡಜನ್ ಆಕಾಂಕ್ಷಿಗಳು ಕ.ಬು. ಸೇರಿದ್ದಾರೆ. ಫಿಲ್ಟರ್ ಆಗಿ ಉಳಿದ ಮೂವರಲ್ಲಿ ಶಾರದಾ ಶೆಟ್ಟಿಗೆ ಕಾಂಗ್ರೆಸ್ ಟಿಕೆಟ್ ಸಿಗುವ ಛಾನ್ಸ್ ಹೆಚ್ಚಿದೆ. ಗುಪ್ತಚರ ವರದಿ ಮತ್ತು ಶಾರದಾ ಶೆಟ್ಟಿ ಗಂಡನ ಬಗ್ಗೆ ಕ್ಷೇತ್ರದಲ್ಲಿನ ಜನಾನುರಾಗ ಕಾಂಗ್ರೆ ಹೈಕಮಾಂಡ್ ಆಕೆಗೆ ಟಿಕೆಟ್ ಕೊಡಲು ಪ್ರಮುಖ ಕಾರಣವಂತೆ. ದಾಯಾದಿ ಮೈದುನನೂ ಆಗಿರುವ ಹಾಲಿ ಜೆಡಿಎಸ್ ಶಾಸಕ ದಿನಕರ ಶೆಟ್ಟಿಗೆ ಸೆಡ್ಡು ಹೊಡೆಯುವ ತಾಕತ್ತಿರುವುದು ಈಕೆಗೆ ಮಾತ್ರ ಎಂಬುದು ಸ್ಥಳೀಯ ಕಾಂಗ್ರೆಸ್ ಬಿಡಾರದ ನಂಬಿಕೆ.

ಜೆಡಿಎಸ್‌ನಿಂದ ಮತ್ತೆ ಶಾಸಕ ದಿನಕರ ಶೆಟ್ಟಿ ಅಖಾಡಕ್ಕೆ ಇಳಿಯುವುದು ಖಾತ್ರಿ. ಆತ ಕಳೆದ ಆರೆಂಟು ತಿಂಗಳಿಂದಲೇ ಎಲೆಕ್ಷನ್ ತಯಾರಿ ಮಾಡಿಕೊಂಡಿದ್ದಾರೆ. ಧೀಮಾಕು-ರಂಗೀಲಾ ಕಡಿಮೆ ಮಾಡಿಕೊಂಡು ಜನರೊಂದಿಗೆ ಬೆರೆಯುವುದನ್ನು ರೂಢಿಸಿಕ್ಕೊಂಡಿರುವ ದಿನಕರ ಶೆಟ್ಟಿ ಈ ಐದು ವರ್ಷದಲ್ಲಿ ತುಂಬ ಬದಲಾಗಿದ್ದಾರೆ. ಆದರೆ ಕಳೆದ ಬಾರಿ ಇಪ್ಪತ್ತೇ ಓಟಲ್ಲಿ ಗೆದ್ದಿರುವ ದಿನಕರ್‌ಗೆ ಮತ್ತೆ ಗೆಲ್ಲುವ ಧೈರ್ಯ ಪೂರ್ತಿ ಇಲ್ಲ. ಭಿಜೆಪಿ ಟಿಕೆಟ್ ಹೊನ್ನಾವರದ ಮುಗ್ವಾ ಜಿ.ಪಂ. ಸದಸ್ಯ ಮಂಜುನಾಥ ಗೌಡನಿಗೆಂದು ಮೂರ್‍ನಾಲ್ಕು ದಿನ ಬೊಬ್ಬೆ ಬಿದ್ದಿತ್ತು. ಬಿಜೆಪಿ ಭೂಪರು ಹಾಲಕ್ಕಿ ಒಕ್ಕಲಿಗನೊಬ್ಬನನ್ನು ಕ್ಯಾಂಡಿಡೇಟ್ ಮಾಡುವ ಚರ್ಚೆ ಬಿರುಸಾಗಿಯೂ ನಡೆಸಿದ್ದರು. ಆದರೆ ಈಗ ಸೂರಜ್ ನಾಯ್ಕ ಸೋನಿ ಎಂಬ ಸೋಗಲಾಡಿ ದೀವರ ಪೋರನ ಹೆಸರು ಕೇಳಿಬರುತ್ತಿದೆ. ತನಗೆ ಟಿಕೆಟ್ ಕೊಟ್ಟರೆ ಸಾಕು; ಖರ್ಚು-ವೆಚ್ಚ ತಾನೇ ಮಾಡ್ತೇನೆಂದು ಆತ ಬಿಜೆಪಿ ಹಿರಿಯರಿಗೆ ದುಂಬಾಲು ಬಿದ್ದಿದ್ದಾನೆ. ಆದರೆ ಎಂಪಿ ಅನಂತ್ಕಾಣಿ, ಸಚಿವ ಕಾಗೇರಿ ಮಾಣಿ, ಗೇರು ಅಭಿವೃದ್ಧಿ ನಿಗಮದ ಅಧ್ಯಕ್ಷ ವಿನೋದ ಪ್ರಭು ಎಂಬ ಕೊಂಕಣಿ 'ಕೊಯ್ಕ'ನಿಗೆ ಸೋನಿ ಅಂದರೆ ಆಗದು. ಆರ್‌ಎಸ್‌ಎಸ್ ವಲಯದ ಕಣ್ಮಣಿಯಾದ ಪ್ರಭು ಪಾರ್ಟಿಯಿಂದ ಬರುವ ಫಂಡ್ ಮೇಲೆ ಕಣ್ಣಿಟ್ಟು ಕ್ಯಾಂಡಿಡೇಟಾಗಲು ಹವಣಿಸುತ್ತಿದ್ದಾನೆ. ಅಂತಿಮವಾಗಿ ಪ್ರಭುಗೆ ಬಿಜೆಪಿ ಟಿಕೆಟ್ ಸಿಗುವ ಸಾಧ್ಯತೆ ಹೆಚ್ಚು!

ನಡುಬೀದಿಯಲ್ಲಿ ಡ್ರೈವರ್ ಶಿವಣ್ಣ!!

ಭಟ್ಕಳದ ಟಿಕೆಟ್ ರಾಜಕೀಯ ದೊಡ್ಡ ಮಟ್ಟದ ಕುತೂಹಲ ಕೆರಳಿಸಿದೆ. ಇದಕ್ಕೆ ಕಾರಣ ಮಾಜಿ ಮಂತ್ರಿ-ಮಾಜಿ ಚಿಡ್ಡಿ ಶಿವಾನಂದ ನಾಯ್ಕ ಎಂಬ ದೀವರ (ಈಡಿಗ) ಧೀರ. ಬಿಜೆಪಿಯ ಗರ್ಭಗುಡಿ ಸಂಸ್ಕೃತಿಯಲ್ಲಿ ಹೈರಾಣಾಗಿ ಸೆಕ್ಯೂಲರ್ ಮುಖವಾಡ ಹಾಕಿಕೊಂಡು ಬಿಜೆಪಿಯಿಂದ ಹೊರಬಂದಿರುವ ಶಿವಣ್ಣ ಕೆಜೆಪಿ ಕಿಂಗ್ ಯಡ್ಡಿಯ ಬಂಟ. ಉತ್ತರ ಕನ್ನಡದ ಬಿಜೆಪಿ ಬ್ರಾಹ್ಮಣ ಬಾಸ್‌ಗಳು ಶೂದ್ರ ಶಿವಣ್ಣನನ್ನು ಬಿಜೆಪಿಯಿಂದ ಒದ್ದು ಓಡಿಸಿದ್ದಾರೆ. ಈ ಶಿವಣ್ಣನಿಗೆ ಕೆಜೆಪಿಯಿಂದ ಅಖಾಡಕ್ಕಿಳಿವ ಧಮ್ ಇಲ್ಲ.

ಜೆಡಿಎಸ್‌ಗೆ ಬಾ ಎಂದು ಕುಮ್ಮಿ, ಮಧು 'ಬಂ', ಯತ್ನಾಳ್‌ಗಳು ಗಂಟು ಬಿದ್ದಾಗ ಈತ ಕಾಂಗ್ರೆಸ್ ಕಡೆ ಕಣ್ಣು ತೇಲಿಸತೊಡಗಿದ್ದ. ಭಟ್ಕಳದ ನವಾಯತ ಮುಸ್ಲಿಮರ ಒಲವು ಗಳಿಸಿರುವ ಶಿವಣ್ಣನಿಗೆ ದೇಶಪಾಂಡೆ, ಮಾರ್ಗರೆಟ್ ಆಳ್ವರ ಕೃಪಾಶೀರ್ವಾದವೂ ಸಿಕ್ಕಿತ್ತು, ಹಾಲಿ ಶಾಸಕ ಜೆ.ಡಿ.ನಾಯ್ಕರ ಕಂಡರೆ ಮ್ಯಾಗಿಗೆ ಆಗದು; ಹಿಂದೆಲ್ಲ ಗಾಡ್‌ಫಾದರ್ ಆಗಿದ್ದ ದೇಶಪಾಂಡೆಗೂ ಈಗಿತ್ತಲಾಗಿ ಜೆ.ಡಿ.ನಾಯ್ಕ ಅಂದರೆ ಅದೇನೋ ಬೇಸರ-ತಾತ್ಸಾರ ಶುರುವಾಗಿದೆ. ಖರ್ಗೆ-ಆಸ್ಕರ್ ಆಶ್ರಯ ಪಡೆದಿರುವ ಜೇಡಿಗೆ ಭಟ್ಕಳದಲ್ಲಿ ಈಗ ಕಿಮ್ಮತ್ತು ಇಲ್ಲವಾಗಿದೆ. ಇದಕ್ಕೆ ಆತನ ಮುಂಗೋಪ, ಹಪಾಹಪಿ ಮತ್ತು ಅಲ್ಪಸಂಖ್ಯಾತ ಮುಸ್ಲಿಮ್-ಕ್ರಿಶ್ಚಿಯನ್ ಬಗೆಗಿನ ದ್ವೇಷವೇ ಕಾರಣ. ಹಾಗಾಗಿ ಇಂಟಲಿಜೆನ್ಸ್ ರಿಪೋರ್ಟ್ ಹಾಗು ಕಾಂಗ್ರೆಸ್ ಹೈಕಮಾಂಡ್ ಮಾಡಿಸಿದ ಸರ್ವೇ ಎರಡೂ ಜೇಡಿ ಈ ಬಾರಿ ಭಟ್ಕಳದಲ್ಲಿ ಗೆಲ್ಲುವುದಿಲ್ಲ ಎಂದೇ ಹೇಳಿವೆ. ಇದೆಲ್ಲ ಶಿವಾನಂದ ನಾಯ್ಕನಲ್ಲಿ ಕಾಂಗ್ರೆಸ್ ಕ್ಯಾಂಡಿಡೇಟಾಗುವ ಆಸೆ ಬಿತ್ತಿದೆ.

ಕಳೆದ ಬಾರಿ ಬರೋಬ್ಬರಿ 12 ಸಾವಿರ ಮತದಂತರದಿಂದ ಕಾಂಗ್ರೆಸ್ ಕ್ಯಾಂಡಿಡೇಟ್ ವಿರುದ್ಧ ಸೋತಿದ್ದ ಶಿವಣ್ಣನಿಗೆ ಟಿಕೆಟ್ ಕೊಡುವುದಾದರೂ ಹೇಗೆಂಬ ಲಾಜಿಕ್ ಎಐಸಿಸಿ-ಕೆಪಿಸಿಸಿಯಲ್ಲಿ ಜೇಡಿ ಹಿತೈಷಿಗಳು ಮಂಡಿಸಿದ್ದಾರೆ. ಹೀಗಾಗಿ ಜೆಡಿ v/s ಶಿವಣ್ಣ ತಿಕ್ಕಾಟ ಕಾಂಗ್ರೆಸ್‌ನಲ್ಲಿ ಜೋರಾಗಿ ನಡೆದಿದೆ. ಹಾಗೊಮ್ಮೆ ಕಾಂಗ್ರೆಸ್ ಟಿಕೆಟ್ ದಕ್ಕಿಸಿಕೊಳ್ಳಲಾಗದಿದ್ದರೆ ಶಿವಣ್ಣನಿಗೆ ಭಟ್ಕಳದಲ್ಲಿ ಜೆಡಿಎಸ್ ಹುರಿಯಾಳಾಗುವ ಯೋಗ ಬಂದೀತು. ಆದರೆ ಇದಕ್ಕೂ ಸ್ಥಳೀಯ ದಳವಾಯಿಗಳು ಅಡೆ-ತಡೆ ಹಾಕುತ್ತಿದ್ದಾರೆ. ಬಾ ಎಂದಾಗ ಬರದೇ ಕಾಂಗ್ರೆಸ್ ಕಡೆ ಹೊರಟವನಿಗಿಂತ ನಗರಸಭೆ ಸದಸ್ಯ ಇನಾಯಿತುಲ್ಲಾ ಶಾಬಂದ್ರಿಯೇ ಬೆಟರ್ ಎಂದು ಸ್ಥಳೀಯ ಜೆಡಿಎಸ್ ಕಾರ್ಯಕರ್ತರು ಕೂಗುತ್ತಿದ್ದಾರೆ. ಇನಾಯಿತುಲ್ಲಾ ತಾನೇ ಕ್ಯಾಂಡಿಡೇಟೆಂದು ಕೆಲಸ ಶುರು ಹಚ್ಚಿಕೊಂಡಿದ್ದಾನೆ.

ಶಿವಣ್ಣನ ನಾಟಕ ನೋಡಿ ಕುಮ್ಮಿ-ಮಧು 'ಬಂ'ಗೂ ಸಿಟ್ಟು ಬಂದಿದೆ. ಇದೆಲ್ಲದರ ಪರಿಣಾಮವಾಗಿ ಶಿವಣ್ಣ ಈಗ ನಡುಬೀದಿಗೆ ಬಿದ್ದಿದ್ದಾರೆ. ಅಂತಿಮವಾಗಿ ಕೆಜೆಪಿ ಕ್ಯಾಂಡಿಡೇಟಾಗುವ ದುರಂತ ಆತ ತಲುಪಿದ್ದಾನೆ. ಏನೇ ಆಗಲಿ ಈ ಶಿವಣ್ಣ ಭಟ್ಕಳ ಎಂಬ ದೀವರ ಕ್ಷೇತ್ರದಲ್ಲಿ ಗಟ್ಟಿ ಹುರಿಯಾಳೇ. ಈ ವರದಿ ತಯಾರಾಗುತ್ತಿರುವ ವೇಳೆಗೆ ಕಾಂಗ್ರೆಸ್ ಕದ ತೆರೆಯುವ ಸೂಚನೆ ಕಾಣಿಸದೇ ಶಿವಣ್ಣ ಜೆಡಿಎಸ್ ದೊರೆಗಳ ಪಾದಕ್ಕೆ ಬಿದ್ದಿದ್ದಾರಂತೆ. ಕುಮ್ಮಿ-ಮಧು 'ತಥಾಸ್ತು' ಎಂದಿದ್ದಾರಂತೆ- ಎಂಬ ಸುದ್ದಿ ಹಬ್ಬಿದೆ. ಬಿಜೆಪಿ ಈಗಾಗಲೇ ಪಶು ಆಧಾರಿತ ಧರ್ಮಕಾರಣಿ ಗೋವಿಂದ ನಾಯ್ಕಗೆ ಟಿಕೆಟ್ ಕೊಟ್ಟು ತನ್ನ ನೈತಿಕತೆ ಜಗಜ್ಜಾಹೀರು ಮಾಡಿಕೊಂಡಿದೆ.

ಯಲ್ಲಾಪುರದಲ್ಲಿ ಯಾರ್‍ಯಾರು?

ಯಲ್ಲಾಪುರ-ಮುಂಡಗೋಡ ಕ್ಷೇತ್ರದ ಬಿಜೆಪಿ ಶಾಸಕ-ವಿ.ಎಸ್. ಪಾಟೀಲ ಪಕ್ಕದ ಹಾನಗಲ್‌ನ ಸಿ.ಎಂ.ಉದಾಸಿ ಅಂಡ್ ಸನ್ಸ್ ಒತ್ತಡಕ್ಕೆ ಸಿಲುಕಿ ಸೊರಗಿ ಸುಣ್ಣವಾಗಿ ಹೋಗಿದ್ದಾನೆ. ಪಾರ್ಟಿಯಲ್ಲಿ ಸಂಸದ ಅನಂತ್ಕಾಣಿ ಕಾಟ ಬೇರೆ ಆತನನ್ನು ಕಾಡುತ್ತಿದೆ. ಹೀಗಾಗಿ ಅತ್ತ ಕೆಜೆಪಿಗೂ ಸೇರದೆ; ಇತ್ತ ಬಿಜೆಪಿಯಲ್ಲೂ ಉಳಿಯದೆ ಪಾಟೀಲ್ ತ್ರಿಶಂಕುಸ್ವರ್ಗದಲ್ಲಿ ನೇತಾಡುತ್ತಿದ್ದಾನೆ. ಪಾಟೀಲ್‌ಗೆ ಬಿಜೆಪಿಯಲ್ಲೇ ಉಳಿಯಲು ಮಂತ್ರಿ ಕಾಗೇರಿ ಧೈರ್ಯ ತುಂಬಿದ್ದಾನೆ. ಆದರೆ ಪಾಟೀಲ್‌ಗೆ ಯಡ್ಡಿ-ಉದಾಸಿ ಬಿಟ್ಟಿರಲು ಸಾಧ್ಯವಾಗುತ್ತಿಲ್ಲ, ಪಾಪ. ಏನೇ ಇರಲಿ, ಪಾಟೀಲ್ ಬಿಜೆಪಿ ಅಥವಾ ಕೆಜೆಪಿಯಿಂದ ನಿಂತರೂ ಈ ಬಾರಿ ಮಾತ್ರ ಗೆಲ್ಲಲಾರ. ಬಿಜೆಪಿ ಟಿಕೆಟ್‌ಗೆ ಸಂಸದ ಅನಂತ್ಕಾಣಿ ಶಿಷ್ಯ ಉಮೇಶ್ ಬಿಜಾಪುರ್ ಕೈಯೊಡ್ಡಿ ನಿಂತಿದ್ದಾನೆ.

ಅಂತಿಮವಾಗಿ ಪಾಟೀಲ್ ಬಿಜೆಪಿ ಅಭ್ಯರ್ಥಿಯಾಗುವ ಸಾಧ್ಯತೆಯೇ ಹೆಚ್ಚು, ಕೆಜೆಪಿಯಿಂದ ಪಾಟೀಲನ ಖಾಸಾ ತಮ್ಮನೇ ಕ್ಯಾಂಡಿಡೇಟ್ ಆಗುವ ಸುದ್ದಿ ಹಬ್ಬಿದೆ. ಜೆಡಿಎಸ್‌ನಿಂದ ತರಹೇವಾರಿ ಇಂಟರ್‌ನ್ಯಾಷನಲ್ ಬಿಸಿನೆಸ್‌ಮನ್ ಅನಿಲ್‌ಕುಮಾರ್ ಎಂಬ ಮಲೆಯಾಳಿ ಬಿಲ್ಲವ (ತಿಯಾಸ್-ಬೆಳ್ಚಡ) ಕ್ಯಾಂಡಿಡೇಟೆಂದು ಒಂದೂವರೆ ವರ್ಷದ ಹಿಂದೆಯೇ ಘೋಷಣೆಯಾಗಿತ್ತು, ಆತ ನೀರಂತೆ ಕಪ್ಪು ಕಾಸು ಹರಿಸುತ್ತಲೇ ಇದ್ದಾನೆ. ಆತ ಅದೆಂಥ ಧನಾಧಾರಿತ ಸರ್ಕಸ್ ಮಾಡಿದರೂ ಜಿ.ಪಂ., ತಾ.ಪಂ ಅಥವಾ ಮುನ್ಸಿಪಾಲ್ಟಿ ಎಲೆಕ್ಷನ್‌ನಲ್ಲಿ ತನ್ನವರನ್ನೂ ಗೆಲ್ಲಿಸಲಾಗಿಲ್ಲ, ಆದರೂ ಈ ಹುಂಬ ಹಣದ ಮದದಿಂದ ಎಮ್ಮೆಲ್ಲೆಯಾಗುವ ಕನಸು ಕಾಣುತ್ತಿದ್ದಾನೆ.

ಕುತೂಹಲವಿರುವುದು ಕಾಂಗ್ರೆಸ್ ಕ್ಯಾಂಡಿಡೇಟ್ ಯಾರಾಗುತ್ತಾರೆಂಬ ಬಗ್ಗೆ. ಕಳೆದ ಬಾರಿ ಕೇವಲ ಮೂರೇ ಸಾವಿರ ಮತದಂತರದಿಂದ ಸೋತಿದ್ದ ಶಿವರಾಮ ಹೆಬ್ಬಾರ್ ಎಂಬ ಅದಿರು ಕಳ್ಳ ತಾನೇ ಕಾಂಗ್ರೆಸ್ ಅಭ್ಯರ್ಥಿಯೆಂದು ಕ್ಷೇತ್ರದಾದ್ಯಂತ ಹಣ ಹರಿಸುತ್ತ ಬಂದಿದ್ದಾನೆ. ಈತ ಮ್ಯಾಗಿ ಶಿಷ್ಯ, ಅಂದರೆ ದೇಶಪಾಂಡೆ ಕೆಂಗಣ್ಣಿಗೆ ತುತ್ತಾದವ. ಈತ ಬೇಲೇಕೇರಿ ಅದಿರು ಕಳ್ಳತನ ಕೇಸಲ್ಲಿ ಸಿಬಿಐಗೆ ಬೇಕಾದವ. ಈ 'ದೋಷ' ಎತ್ತಿಯಾಡಿ ದೇಶಪಾಂಡೆ ಆತನಿಗೆ ಟಿಕೆಟ್ ತಪ್ಪಿಸಲು ಲಾಬಿ ಮಾಡುತ್ತಿದ್ದಾರೆ. ಜಿ.ಪಂ.ನ ಮಾಜಿ ಉಪಾಧ್ಯಕ್ಷನೂ- ಇಬ್ಬರು ಹೆಂಡಿರ ಮುದ್ದಿನ ಗಂಡನೂ ಆಗಿರುವ ತನ್ನ ಅನುಯಾಯಿ ಎಲ್.ಟಿ. ಪಾಟೀಲನಿಗೆ ಟಿಕೆಟ್ ಕೊಡಿಸುವ ಪ್ಲಾನ್ ದೇಶಪಾಂಡೆ ಸಾಹೇಬರದು.

ಈ ಮರಾಠ ಪಾಟೀಲನಿಗಿಂತ ಬ್ರಾಹ್ಮಣರ ಹೆಬ್ಬಾರನೇ ಜಬರ್ದಸ್ತ್ ಕ್ಯಾಂಡಿಡೇಟೆಂದು ಕಾಂಗ್ರೆಸ್ ಹೈಕಮಾಂಡ್ ಮಟ್ಟದಲ್ಲಿ ಬಿಂಬಿಸಲಾಗುತ್ತಿದೆ. ಇದಕ್ಕೆ ಕ್ಷೇತ್ರದ ಹೈಗರ (ಬ್ರಾಹ್ಮಣರ) ಮೇಲೆ ಅಪಾರ ಪ್ರಭಾವವಿರುವ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸ್ವಾಮಿಯ ಆಶೀರ್ವಾದವೂ ಇದೆ. ಹೆಬ್ಬಾರ್ ಕಾಂಗ್ರೆಸ್ ಅಭ್ಯರ್ಥಿಯಾದರೆ ಕಡ್ಡಾಯವಾಗಿ ಆ ಪಾರ್ಟಿಗೆ ಮತ ಹಾಕುವಂತೆ ಸ್ವರ್ಣವಲ್ಲಿ ಪೀಠ ಈಗಾಗಲೇ ರಹಸ್ಯ ಫರ್ಮಾನು ಹೊರಡಿಸಿದೆ. ಇದು ದೇಶಪಾಂಡೆಯನ್ನು ಪೀಕಲಾಟಕ್ಕೆ ಸಿಲುಕಿಸಿದೆ. ಮುಂಡಗೋಡ-ಯಲ್ಲಾಪುರದಲ್ಲಿ ಕಾಂಗ್ರೆಸ್ ಕಟ್ಟಿ ಬೆಳೆಸಿದ ಹೆಬ್ಬಾರ್‌ನನ್ನು ಟಿಕೆಟ್ ರೇಸ್‌ನಿಂದ ಹಿಮ್ಮೆಟ್ಟಿಸುವ ದೇಶಪಾಂಡೆಯ ತಂತ್ರ ಕೈಕೊಟ್ಟಿದೆ. ಜಿಲ್ಲೆಯ 6 ಕ್ಷೇತ್ರದಲ್ಲಿ ಮ್ಯಾಗಿ ಬಳಗಕ್ಕೆ 3 ಕ್ಷೇತ್ರ ಕೊಡುವ ರಾಜಿಸೂತ್ರದಲ್ಲಿ ಹೆಬ್ಬಾರ್‌ಗೆ ಟಿಕೆಟ್ ಸಿಗುವುದು ಖಾತ್ರಿಯಾಗಿದೆ. ಆತ ಪ್ರಚಾರ ಜಾತ್ರೆ ಶುರು ಹಚ್ಚಿಕೊಂಡಿದ್ದಾರೆ.

ದೇಶಪಾಂಡೆ V/s ಸುನಿಲ್ ಹೆಗಡೆ

ಪ್ರತಿಷ್ಠೆಯ ರಣಾಂಗಣ ಹಳಿಯಾಳ-ಜೋಯಿಡಾದಲ್ಲಿ ಕಾಂಗ್ರೆಸ್‌ನಿಂದ ಆರ್.ವಿ. ದೇಶಪಾಂಡೆ, ಜೆಡಿಎಸ್‌ನಿಂದ ಹಾಲಿ ಶಾಸಕ- ಸುನಿಲ್ ಹೆಗಡೆ ಮತ್ತು ಬಿಎಸ್‌ಆರ್‌ಸಿಯಿಂದ ರವಿ ರೇಡ್ಕರ್ ಎಂಬುದು ಖಾತ್ರಿಯಾಗಿ ತುಂಬ ದಿನಗಳೇ ಆಗಿದೆ. ದೇಶಪಾಂಡೆ ಮತ್ತು ಆತನೇ ಸಾಕಿ ಸಲುಹಿದ ಸ್ವಜಾತಿ ಹುಡುಗ ಸುನಿಲ್ ಹೆಗಡೆ ಎಲೆಕ್ಷನ್ ಪ್ರಚಾರ ಶುರು ಮಾಡಿಕೊಂಡು ಹೆಚ್ಚು-ಕಮ್ಮಿ ಒಂದು ವರ್ಷ ಕಳೆದಿದೆ. ದೇಶಪಾಂಡೆಗಿದು ಅಳಿವು-ಉಳಿವಿನ ಕೊನೆಯ ಹೋರಾಟ. ಹಾಗಾಗಿ ಆತ ಎಲೆಕ್ಷನ್ ಟ್ರಿಕ್ಸ್ ತುಂಬ ಆಕ್ರಮಣಕಾರಿಯಾಗಿ ಹೆಣೆದಿದ್ದಾರೆ. ಜಿ.ಪಂ-ಮುನ್ಸಿಪಾಲ್ಟಿ ಎಲೆಕ್ಷನ್‌ನಲ್ಲಿ ಶಾಸಕ ಸುನಿಲ್‌ನ ಜೆಡಿಎಸ್ ಅನ್ನು ಹೈರಾಣಾಗಿಸಿದ್ದಾರೆ. ಹಣದ ಹಣಾಹಣಿಯೇ ಈ ಬಾರಿ ನಡೆದುಹೋಗಲಿದೆ. ಸುನಿಲ್ ಮತ್ತವನ ಅಪ್ಪ- ಮಾಜಿ ಎಮ್ಮೆಲ್ಸಿ ವೆಂಕಟೇಶ್ ಹೆಗಡೆಗೆ ದೇಶಪಾಂಡೆಯ ಪಟ್ಟುಗಳನ್ನು ಎದುರಿಸಲಾಗುತ್ತಿಲ್ಲ, ದೇಶಪಾಂಡೆಯ ಗರಡಿಯಲ್ಲಿ ಪಳಗಿದ ಸುನಿಲ್‌ಗೆ ದೇಶಪಾಂಡೆಯ ಹೊಸ ವರಸೆ ಕಂಗೆಡಿಸಿದೆ. ದೇಶಪಾಂಡೆಯ 'ಗಿಫ್ಟ್ ಪಾಲಿಟಿಕ್ಸ್' ಜೋರಾಗಿದೆ. ಬಿಎಸ್‌ಆರ್‌ಸಿ ಆಟಕ್ಕುಂಟು, ಲೆಕ್ಕಕ್ಕೆ ಇಲ್ಲ.

○ ನಹುಷ

'ಕಾಲೆಳೆಯುವ ರಾಜಕೀಯ ತಂತ್ರ'

ಚುನಾವಣೆಯ ದಿನಾಂಕ ಘೋಷಣೆಯಾದ ಬೆನ್ನಲ್ಲೇ ದ ರಾಜಕೀಯ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಆದರೂ ಎಲ್ಲ ಪ್ರಮುಖ ಪಕ್ಷಗಳು ತಮ್ಮ ಅಭ್ಯರ್ಥಿಗಳ ಯನ್ನು ಘೋಷಿಸಲು ಹಿಂದೆ ಮುಂದೆ ನೋಡುತ್ತಿವೆ. ಕಾರಣವಿಷ್ಟೆ: ತಾವು ತಮ್ಮ ಪಟ್ಟಿಯನ್ನು ಪ್ರಕಟಿಸಿದರೆ ಲ್ಲಿರುವ ಅತೃಪ್ತರು ಬೇರೆ ಪಕ್ಷಗಳಿಗೆ ಹೋಗುತ್ತಾರೆಂಬ ಭಯ ಒಂದು ಾದರೆ, ಬೇರೆ ಪಕ್ಷದವರು ತಮ್ಮ ಯನ್ನು ಬಿಡುಗಡೆ ಮಾಡಿದನಂತರ ಟಿಕೆಟ್ ತಿರಸ್ಕರಿಸಿಕೊಂಡವರು ಪಕ್ಷದತ್ತ ಧಾವಿಸುತ್ತಾರೆ ಎಂಬ ಇನ್ನೊಂದು ಕಡೆ.



ಹೀಗಾಗಿ ಮೊದಲು ಕಾಂಗ್ರೆಸ್ ತನ್ನ ಪಟ್ಟಿಯನ್ನು ಗಡೆ ಮಾಡಲಿ ಎಂದು ಬಿಜೆಪಿಯ ನಾಯಕರು ುತ್ತಿದ್ದರೆ ಬೆಜೆಪಿಗಳು ತಮ್ಮ ಅಭ್ಯರ್ಥಿಗಳನ್ನು ಷಿಸಲಿ ಎಂದು ಕಾಂಗ್ರೆಸ್‌ನ ದಳಪತಿಗಳು ುತ್ತಿದ್ದಾರೆ. ಈ ಎರಡೂ ರಾಷ್ಟ್ರೀಯ ಪಕ್ಷಗಳು ತಮ್ಮ ಪಟ್ಟಿಗಳನ್ನು ಹೊರಹಾಕಿದ ನಂತರ ತಮ್ಮ ರ್ಯಾಚರಣೆಯನ್ನು ಪ್ರಾರಂಭಿಸಲು ಪ್ರಾದೇಶಿಕ ಪಕ್ಷಗಳಾದ ತೀತ ಜನತಾ ದಳ, ಕರ್ನಾಟಕ ಜನತಾ ಪಕ್ಷ ಮತ್ತು ಆರ್ ಕಾಂಗ್ರೆಸ್ ಕಾಯುತ್ತಿವೆ.

ಅಭ್ಯರ್ಥಿಗಳ ಪಟ್ಟಿಗಳ ತಯಾರಿಕೆಯ ನಡುವೆಯೂ ರಾಜಕೀಯ ಪಕ್ಷಗಳು ತೆರೆಮರೆಯಲ್ಲಿ ಹಲವಾರು ಗಳಲ್ಲಿ ತೊಡಗಿವೆ. ಉದಾಹರಣೆಗೆ, ಬರುವ ಾವಣೆಯಲ್ಲಿ ಯಾವುದೇ ಕಾರಣಕ್ಕೂ ಕಾಂಗ್ರೆಸ್ ಮತ ಗಳಿಸಬಾರದು; ಅದಕ್ಕೆ ಏನಿದ್ದರೂ 90 95 ಸೀಟು ಬರಬೇಕಷ್ಟೆ ಎಂಬ ಆಶೆ ಯೂರಪ್ಪನವರದ್ದು. ಏಕೆಂದರೆ ಕಾಂಗ್ರೆಸ್ ಂದ 100 ಸೀಟುಗಳನ್ನು ಮಾತ್ರ ಸರ್ಕಾರ ರಚಿಸಲು ಅದು ವಿಧಿ ಯಡ್ಡಿಯ ಸಹಾಯವನ್ನು ುಲೇಬೇಕಾಗುತ್ತದೆ.



ಕಾಂಗ್ರೆಸ್ 90ರ ಸುತ್ತಮುತ್ತ ಗಳನ್ನು ಗೆದ್ದರೆ ಮಾತ್ರ ತನ್ನ ಪಕ್ಷಕ್ಕೆ ಕೀಯ ಅಸ್ತಿತ್ವವಿರುತ್ತದೆ ಎಂದು ಬಲ್ಲ ಯಡಿಯೂರಪ್ಪ ಗೆ ಕಾಂಗ್ರೆಸ್ ಅತ್ತ ಸ್ನೇಹಹಸ್ತ ಚಾಚಿದ್ದೂ ಒಳಗೊಳಗೆ ವಾರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳಿಗೆ ಣ್ಣಮುಕ್ಕಿಸಲು ಪ್ರಯತ್ನಿಸುತ್ತಿದ್ದಾರೆ.

ಇತ್ತೀಚಿನ ಸ್ಥಳೀಯ ಸಂಸ್ಥಾ ಚುನಾವಣೆಯ ಾಂಶದಿಂದ ಉತ್ತೇಜನ ಪಡೆದಿರುವ ಕಾಂಗ್ರೆಸ್ ೀಶಿಕ ಪಕ್ಷಗಳ ಸಹವಾಸವೇ ಬೇಡ ಎಂದು ಸಂಪೂರ್ಣ ಮತ ಸಾಧಿಸುವತ್ತ ತನ್ನ ಗಮನ ಹರಿಸಿದೆ. ಆದರೆ ್ರೆಸ್ ಎಂಬ ಅಶಿಸ್ತಿನ, ತಲೆ ಊದಿರುವ ನಾಯಕರ ಲ್ಲಿ ಅದು ಸುಲಭದ ಮಾತಲ್ಲ. ಕಾಂಗ್ರೆಸ್‌ನಲ್ಲಿ ರ್ಯಕರ್ತರಿಗಿಂತ ಮುಖ್ಯಮಂತ್ರಿ ಆಕಾಂಕ್ಷಿಗಳೇ ಹೆಚ್ಚಿನ ್ಯೆಯಲ್ಲಿರುವುದು ಆ ಪಕ್ಷದ ಹೈಕಮಾಂಡ್‌ಗೆ ೋವಾಗಿದೆ.

ಹೀಗಾಗಿ ಬರಲಿರುವ ಚುನಾವಣೆಯಲ್ಲಿ ಯಾರನ್ನೇ ್ರೆಸ್ ತನ್ನ ಮುಂದಿನ ಮುಖ್ಯಮಂತ್ರಿ ಎಂದು ಮಾಂಡ್ ಪ್ರತಿಬಿಂಬಿಸಿದರೂ ಅದು ಖಂಡಿತವಾಗಿಯೂ ಕ ಅಭ್ಯರ್ಥಿಗಳ ಪಲಾಯನಕ್ಕೆ ಕಾರಣವಾಗುವ ತೆಯಿದೆ. ಕಾಂಗ್ರೆಸ್ ಟಿಕೆಟ್ ಸಿಗದ ಕೆಲವು ಬಲಾಢ್ಯ ರ್ಥಿಗಳು ಕೆ.ಜೆ.ಪಿ ಅಥವಾ ದಳಕ್ಕೆ ವಲಸೆ ಹೋಗದಂತೆ ಯುವ ಬಗ್ಗೆಯೂ ಕಾಂಗ್ರೆಸ್ ಹೈಕಮಾಂಡ್ ಯೋಚನೆ ುತ್ತಿದೆ. 90 ರಿಂದ 100 ಸೀಟುಗಳನ್ನು ಗೆದ್ದು ಬಣದ 10 ರಿಂದ 15 ಶಾಸಕರ ಬೆಂಬಲ ಪಡೆದು ಅವರ ತಾಳಕ್ಕೆ ತಕ್ಕಂತೆ ಕುಣಿಯುವ ದುರ್ಗತಿ ಬರಬಾರದೆಂಬುದು ಬಹುತೇಕ ಎಲ್ಲ ಕಾಂಗ್ರೆ ನಾಯಕರ ಅನಿಸಿಕೆ.

ಮೇ 8ರಂದು ಅಸ್ಪಷ್ಟ ಫಲಿತಾಂಶ ಹೊರಬಿದ್ದರೆ ಯಾವುದೇ ಕಾರಣಕ್ಕೂ ಜನತಾದಳದ ಬೆಂಬಲವನ್ನು ಕಾಂಗ್ರೆಸ್ ಸ್ವೀಕರಿಸುವುದಿಲ್ಲ ಎಂಬುದು ರಾಜಕೀಯ ವಲಯದಲ್ಲಿನ ಲೆಕ್ಕಾಚಾರ. ಆದ್ದರಿಂದ ಬಿಜೆಪಿಯನ್ನು ಬೆಂಬಲಿಸದೆ ಕುಮಾರಸ್ವಾಮಿ ನೇತೃತ್ವದ ಜನತಾದಳಕ್ಕೆ ಬೇರೆ ದಾರಿಯೇ ಇಲ್ಲದಂತಾಗಿದೆ. ಈ ಬಾರಿ ಯಡಿಯೂರಪ್ಪ, ಜನಾರ್ದನ ರೆಡ್ಡಿ, ಶ್ರೀರಾಮುಲು, ಸೋಮಶೇಖರ ರೆಡ್ಡಿ ಸೇರಿದಂತೆ ಅನೇಕ ನಾಯಕರು ಬಿಜೆಪಿಯಿಂದ ನಿರ್ಗಮಿಸಿರುವುದರಿಂದ ಬಿಜೆಪಿ ಶಕ್ತಿಹೀನವಾಗಿದೆ. ಎಷ್ಟರಮಟ್ಟಿಗೆಂದರೆ ಕಳೆದ ಬಾರಿಯ ಚುನಾವಣೆಯಲ್ಲಿ ದೊರಕಿದ್ದ ಸೀಟಿನ ಅರ್ಧದಷ್ಟು ಕೂಡ ಈ ಬಾರಿ ಬಿಜೆಪಿ ಗೆಲ್ಲುವ ಸಾಧ್ಯತೆ ಇಲ್ಲ ಎಂಬುದೇ ರಾಜಕೀಯ ಪಂಡಿತರ ಲೆಕ್ಕಾಚಾರವಾಗಿದೆ. ಅಂದರೆ ಬಿಜೆಪಿ ಹೆಚ್ಚೆಂದರೆ 50 ರಿಂದ 55 ಸೀಟುಗಳನ್ನಷ್ಟೇ ಗೆಲ್ಲಬಹುದು.

ಬಿಜೆಪಿ ತೀರಾ ನಿಕೃಷ್ಟವಾದ ಸಂಖ್ಯೆಯಲ್ಲಿ ಸೀಟುಗಳನ್ನು ಗೆದ್ದರೆ ಅದು ಪರೋಕ್ಷವಾಗಿ ಜನತಾ ದಳಕ್ಕೂ ದೊಡ್ಡ ಆಘಾತವಾಗಲಿದೆ. ಬಿಜೆಪಿ ಗೆಲ್ಲಬೇಕೆಂದರೆ ಅದರ ಮತಗಳು ಇತರೆ ಪಕ್ಷಗಳಿಗೆ ಹಂಚಿ ಹೋಗಬಾರದು, ಆ ಕಾರಣಕ್ಕೇ ಅನೇಕ ಕ್ಷೇತ್ರಗಳಲ್ಲಿ ಬಿಜೆಪಿಯ ವಿರುದ್ಧ ಸೋಲುವ ಅಭ್ಯರ್ಥಿಗಳನ್ನು ಹಾಕುವ ಮೂಲಕ ಬಿಜೆಪಿಯ ಮಾನ ಮತ್ತು ತನ್ನ ಅಸ್ತಿತ್ವ - ಎರಡನ್ನೂ ಉಳಿಸಬೇಕೆಂದು ಜನತಾ ದಳ ನಿರ್ಧರಿಸಿದೆ ಎಂಬ ಮಾತಿಗಳು ಕೇಳಿಬರುತ್ತಿದೆ.

ಬಿಜೆಪಿ ಪಕ್ಷದ ಎಲ್ಲ ರಾಜ್ಯ ಮಟ್ಟದ ನಾಯಕರಿಗೆ ನಡುಕ ಆರಂಭವಾಗಿದೆ. ಈಶ್ವರಪ್ಪ, ಅನಂತ್‌ಕುಮಾರ್, ಸದಾನಂದ ಗೌಡ, ಆರ್.ಅಶೋಕ್, ಜಗದೀಶ್ ಶೆಟ್ಟರ್ ಮತ್ತು ಸಂತೋಷ್'ಜಿ' ಇವರೆಲ್ಲರೂ ತಮ್ಮ ತಮ್ಮ ಭಿನ್ನಾಭಿಪ್ರಾಯಗಳನ್ನು ಮರೆತು ಒಗ್ಗಟ್ಟಿನಿಂದ ಕೆಲಸ ಮಾಡಲು ನಿರ್ಧರಿಸಿದ್ದಾರೆ. ಈ ಒಗ್ಗಟ್ಟಿಗೆ ಮುಖ್ಯ ಕಾರಣ ಯಡಿಯೂರಪ್ಪ. 'ಒಂದು ವೇಳೆ ನಾವು ನಮ್ಮನಮ್ಮಲ್ಲೇ ಇನ್ನೂ ಕಚ್ಚಾಡುತ್ತಿದ್ದರೆ ನಮ್ಮ ಪಕ್ಷ ಗಮನಾರ್ಹವಾದ ಸಂಖ್ಯೆಯಲ್ಲಿ ಸೀಟುಗಳನ್ನು ಗೆಲ್ಲುವುದಿಲ್ಲ, ಆಗ ನಾವು ಯಡಿಯೂರಪ್ಪನವರ ಲೇವಡಿ ಮಾತಿಗೆ ತುತ್ತಾಗಬೇಕಾಗುತ್ತದೆ' ಎಂಬ ಹೆದರಿಕೆ ಇವರನ್ನೆಲ್ಲ ಒಗ್ಗೂಡಿಸಿದೆ.



ಇನ್ನು ಶ್ರೀರಾಮುಲು ನೇತೃತ್ವದ ಬಿ.ಎಸ್.ಆರ್ ಕಾಂಗ್ರೆಸ್ ವಿಚಿತ್ರವಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿದೆ. ಮೊನ್ನೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಳ್ಳಾರಿ ಕ್ಷೇತ್ರವನ್ನು ಕಾಂಗ್ರೆ ಗೆದ್ದ ನಂತರವಂತೂ ಶ್ರೀರಾಮುಲುರವರ ಜಂಘಾಬಲ ಉಡುಗಿಹೋಗಿದೆ. ಅಸೆಂಬ್ಲಿ ಚುನಾವಣೆಯಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ ಕೆಲವೇ ಸೀಟುಗಳನ್ನು ಗೆದ್ದು, ರಾಜಕೀಯವಾಗಿ ದಿವಾಳಿಯಾಗುವ ಬದಲು ಚುನಾವಣೆಯ ಮೊದಲೇ ಯಾವುದಾದರೂ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವುದು ಉತ್ತಮ ಎಂಬುದು ಶ್ರೀರಾಮುಲು ಅಭಿಪ್ರಾಯ.



ಹೀಗಾಗಿ ಅಸೆಂಬ್ಲಿ ಚುನಾವಣೆಯಲ್ಲಿ ತಾವು ಸ್ವತಂತ್ರವಾಗಿ ಸ್ಪರ್ಧಿಸಬೇಕೋ ಅಥವಾ ಯಾವುದಾದರೂ ಪಕ್ಷದ ಜೊತೆಗೆ ಚುನಾವಣಾ ಮೈತ್ರಿ ಮಾಡಿಕೊಳ್ಳಬೇಕೋ ಎಂದು ಶ್ರೀರಾಮುಲು ತನ್ನ ಒಡನಾಡಿಗಳೊಂದಿಗೆ ಚರ್ಚಿಸುತ್ತಿದ್ದಾರೆ.

ಹಾಗೆಯೇ ಶ್ರೀರಾಮುಲು ಪಕ್ಷಕ್ಕೆ ಎಲ್ಲ 224 ಕ್ಷೇತ್ರಗಳಲ್ಲೂ ಶಕ್ತಿ ಇಲ್ಲದಿದ್ದರೂ ಅವರನ್ನು ಬೆಂಬಲಿಸುವ ನಾಯಕ ಜನಾಂಗ ಮತ್ತು ಹಿಂದುಳಿದವರು ಸಾಕಷ್ಟು ಕ್ಷೇತ್ರಗಳಲ್ಲಿ ಇರುವುದರಿಂದ ಅವರೊಂದಿಗೆ ಮೈತ್ರಿ ಮಾಡಿಕೊಂಡರೆ ತಮ್ಮ ಓಟುಗಳು ಹಂಚಿಹೋಗದೆ ತಮಗೆ ಲಾಭವಾಗಬಹುದು ಎಂಬ ಲೆಕ್ಕಾಚಾರ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳದ್ದು. ಹೀಗಾಗಿ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಜನತಾದಳದ ಕುಮಾರಸ್ವಾಮಿ ನಡುವೆ ಶ್ರೀರಾಮುಲು ಎರಡು ಸುತ್ತಿನ ಮಾತುಕತೆಯನ್ನು ಮಾಡಿಮುಗಿಸಿದ್ದಾರೆ. ಶ್ರೀರಾಮುಲು ಕೊನೆಯ ಹಂತದಲ್ಲಿ ಕುಮಾರಸ್ವಾಮಿಯವರ ಜೊತೆ ಕೈಜೋಡಿಸಿ ತನ್ನ ಎದುರಾಳಿ ಪಕ್ಷವಾದ ಕಾಂಗ್ರೆಯನ್ನು ಬಗ್ಗುಬಡಿಯಲು ರಣತಂತ್ರವನ್ನು ರೂಪಿಸುವ ಸಾಧ್ಯತೆಯಿದೆ.

ಚುನಾವಣಾಪೂರ್ವ ರಾಜಕೀಯ ಕಸರತ್ತುಗಳನ್ನು ವಿಶ್ಲೇಷಿಸಿದರೆ: ಒಂದು ಕಡೆ ಕಾಂಗ್ರೆಸ್ ಯಾವ ಕಾರಣಕ್ಕೂ 100 ರ ಗಡಿ ದಾಟಬಾರದು ಎಂಬುದು ಯಡಿಯೂರಪ್ಪನವರ ಆಶೆ: ಇನ್ನೊಂದು ಕಡೆ ಯಡ್ಡಿಯ ಕೆಜೆಪಿ 10 ಸೀಟುಗಳಿಗಿಂತ ಹೆಚ್ಚು ಗೆಲ್ಲಬಾರದು ಎಂಬುದು ದಳ ಮತ್ತು ಬಿಜೆಪಿಯವರ ತವಕ; ಮತ್ತೊಂದು ಕಡೆ ಬಿಜೆಪಿ ಸಂಪೂರ್ಣವಾಗಿ ನೆಲಕಚ್ಚಿಬಿಟ್ಟರೆ ರಾಜಕೀಯವಾಗಿ ತಾವೂ ನಗಣ್ಯರಾಗುತ್ತೇವೆ ಎಂಬ ಜನತಾದಳದವರ ಆತಂಕ...

ಹೀಗೆ ಒಂದೊಂದು ಪಕ್ಷದವರು ಒಂದೊಂದು ರೀತಿಯಲ್ಲಿ ಮುಂದಿನ ಚುನಾವಣೆಯ ಬಗ್ಗೆ ಕನಸು ಕಾಣುತ್ತಿದ್ದಾರೆ. ಆ ಕನಸಿಗೆ ತಕ್ಕಂತೆ ತೆರೆಮರೆಯಲ್ಲಿ ಕಾರ್ಯವ್ಯೂಹಗಳನ್ನು ರಚಿಸುತ್ತ ಚುನಾವಣೆಗೆ ಸಿದ್ಧತೆ ನಡೆಸುತ್ತಿದ್ದಾರೆ. ಎಲ್ಲ ರಾಜಕೀಯ ಪಕ್ಷಗಳು ಟಿಕೆಟ್ ಹಂಚಿಕೆ ಕಾರ್ಯವನ್ನು ಮುಗಿಸಿ ಅಭ್ಯರ್ಥಿಗಳನ್ನು ಘೋಷಿಸಿದ ನಂತರ ಚುನಾವಣೆಯ ರಂಗು ಇನ್ನೂ ಹೆಚ್ಚೇರಲಿದೆ.


● ಸದಾಶಿವ ಶೆಣೈ

ಅಧಿಕಾರಕ್ಕಾಗಿ ಸೋಮಣ್ಣನ ಪರದಾಟ

"ಯಾವುದೇ ಕಾರಣಕ್ಕೂ ಬಿಜೆಪಿ ಪಕ್ಷವನ್ನು ಬಿಟ್ಟು ಬೇರೆ ಪಕ್ಷಕ್ಕೆ ವಲಸೆ ಹೋಗುವುದಿಲ್ಲ" ಎಂದು ಖಡಾ ಖಂಡಿತವಾಗಿ ಹೇಳಿದ್ದ ನಗರಾಭಿವೃದ್ಧಿ ಸಚಿವ ವಿ.ಸೋಮಣ್ಣ ಸದ್ಯದಲ್ಲೇ ಬಿಜೆಪಿಯನ್ನು ತೊರೆದು ಯಡಿಯೂರಪ್ಪನವರ ಕೆಜೆಪಿ ಸೇರಲಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಸದ್ಯದಲ್ಲೇ ಬಿಜೆಪಿಯ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಸಂಪುಟದಲ್ಲಿರುವ ಮುರುಗೇಶ್ ನಿರಾಣಿ, ಉಮೇಶ್ ಕತ್ತಿ ಮತ್ತಿತರ ಸಚಿವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಿ ಕೆ.ಜೆ.ಪಿ ಸೇರಲಿದ್ದಾರೆ. ಈಗ ಬಿಜೆಪಿಯಿಂದ ಗೇಟ್ ಪಾಸ್ ಪಡೆದಿರುವ ರೇಣುಕಾಚಾರ್ಯ ಕೂಡ ಕೆಜೆಪಿ ಸೇರುವುದು ಸ್ಪಷ್ಟವಾಗಿದೆ.

ಇವರೆಲ್ಲರ ಜೊತೆ ರಾಜೀನಾಮೆ ನೀಡಬೇಕೋ, ಬೇಡವೋ ಎಂಬ ಜಿಜ್ಞಾಸೆಯಲ್ಲಿರುವವರೆಂದರೆ ಬಸವರಾಜ ಬೊಮ್ಮಾಯಿ ಮಾತ್ರ. ಅವರಿನ್ನೂ ಯಾವ ಪಕ್ಷದಿಂದ ಸ್ಪರ್ಧಿಸಬೇಕೆಂಬುದರ ಬಗ್ಗೆ ಅಂತಿಮ ತೀರ್ಮಾನ ಕೈಗೊಂಡಿಲ್ಲ.



ಬಹಿರಂಗವಾಗಿ ಬಿಜೆಪಿಗೆ ನಿಷ್ಠೆ ವ್ಯಕ್ತಪಡಿಸುತ್ತಲೇ ತೆರೆಮರೆಯಲ್ಲಿ ಕಾಂಗ್ರೆಸ್ ಸೇರಲು ಸೋಮಣ್ಣ ನಡೆಸಿದ ಪ್ರಯತ್ನಗಳು ಈಗ ಗುಟ್ಟಾಗಿ ಉಳಿದಿಲ್ಲ. ಆದರೆ ಅವರ ದುರದೃಷ್ಟಕ್ಕೆ ಕಾಂಗ್ರೆಸ್‌ನಲ್ಲಿರುವ ಅವರ ಗಾಡ್‌ಫಾದರ್ ಎಸ್.ಎಂ.ಕೃಷ್ಣರಿಗೇ ಬಿಡುಗಾಸಿನ ಬೆಲೆ ಇಲ್ಲ. ಜೊತೆಗೆ ಕಾಂಗ್ರೆಸ್ ಸೇರಿದರೂ ವಿಜಯನಗರ ಅಥವಾ ಗೋವಿಂದ ರಾಜನಗರದಿಂದ ಸ್ಪರ್ಧಿಸಲು ಟಿಕೆಟ್ ಸಿಗುವುದಿಲ್ಲ. ಹಾಗಂತ ಬೇರೆ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಗೆಲ್ಲುವ ಧೈರ್ಯವೂ ಸೋಮಣ್ಣನಿಗಿಲ್ಲ. ಅದೆಲ್ಲ ಬೇಡ, ಬಿಜೆಪಿಯಲ್ಲೇ ಇದ್ದು ಸ್ಪರ್ಧಿಸುವ ಇಚ್ಛೆಯೂ ಅವರಲ್ಲಿ ಉಳಿದಿಲ್ಲ.

ಹೀಗೆ ಅಳೆದು ಸುರಿದು ಲೆಕ್ಕಹಾಕಿದ ನಂತರ ಸೋಮಣ್ಣ ಕೆಜೆಪಿ ಸೇರುವ ನಿರ್ಧಾರಕ್ಕೆ ಬಂದಿದ್ದಾರೆ. ಅಷ್ಟೇ ಅಲ್ಲ, ತಮ್ಮ ಸ್ವಜಾತಿ ಲಿಂಗಾಯತರ ಪ್ರಾಬಲ್ಯವಿರುವ ಹನೂರು ಕ್ಷೇತ್ರದಿಂದ ಸ್ಪರ್ಧಿಸಿದರೆ ಗೆಲ್ಲಬಹುದು ಎಂಬ ಆಸೆ ಅವರ ಮನಸ್ಸಿನಲ್ಲಿ ಮೂಡಿದೆ.

ಮೊನ್ನೆಮೊನ್ನೆಯ ತನಕ 'ಬಿಜೆಪಿಯನ್ನು ಬಿಡಲಾರೆ, ಕಾಂಗ್ರೆಸ್‌ಗೆ ಹೋಗಲಾರೆ' ಎಂದು ಹಾಡುತ್ತಿದ್ದ ಸೋಮಣ್ಣ ಈಗ ಯಡ್ಡಿಗೆ ಜೈ ಎನ್ನುತ್ತಾ ಹನೂರಿನಲ್ಲಿ ತನ್ನ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಜ್ಜಾಗುತ್ತಿದ್ದಾರಂತೆ.

ಅಂದಹಾಗೆ, ಇದೇ ಸೋಮಣ್ಣ ಈ ಹಿಂದೆ, ಜನತಾ ದಳದಲ್ಲಿ, ಕಾಂಗ್ರೆಸ್‌ನಲ್ಲಿ ಮತ್ತು ಬಿಜೆಪಿಯಲ್ಲಿದ್ದು ಅಧಿಕಾರವನ್ನು ಅನುಭವಿಸಿದವರು. ಬರುವ ಚುನಾವಣೆಯ ನಂತರ ಕಾಂಗ್ರೆಸ್ ಮತ್ತು ಕೆಜೆಪಿ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದರೆ ಮತ್ತೆ ತನಗೆ ಅಧಿಕಾರ ಸಿಗುತ್ತದೆ ಎಂಬ ಆಶೆಯಿಂದಲೇ ಸೋಮಣ್ಣ ನಾಲ್ಕನೆ ಬಾರಿಗೆ ತಮ್ಮ ರಾಜಕೀಯ ವಾಸ್ತವ್ಯವನ್ನು ಈಗ ಕೆಜೆಪಿಗೆ ಬದಲಾಯಿಸಿದ್ದಾರೆ.

Honey- ಕಷಾಯ: ಎಲೆಕ್ಷನ್ ಸ್ಪೆಷಲ್

ಚುನಾವಣೆ ಘೋಷಣೆಯಾಗಿದೆ. ನಮ್ಮ ಪ್ರಮುಖ ರಾಜಕೀಯ ಪಕ್ಷಗಳ ವರ್ತಮಾನ, ಭವಿಷ್ಯದ ಕುರಿತು ಕೆಲವು honey-ಕಷಾಯಗಳು



ಬಿಜೆಪಿ
ಹಣೆಯಲ್ಲಿ ವಿಭೂತಿ
ಆತ್ಮದಲ್ಲಿ ನಾಮ
ಜನರಿಗೆ ಪಂಗನಾಮ!
ಸದ್ಯದಲ್ಲೇ ಹಣೆಗೆ
ಬೀಳಲಿದೆ ತಿರುಪತಿ ನಾಮ!

ಕಾಂಗ್ರೆಸ್
'ಕೈ'ಲಿದೆ
ಸುಲಿದ
ಬಾಳೆಹಣ್ಣು
ಕಾಲ ಬಳಿಯೇ
ಬಿದ್ದಿದೆ
ಒಳಜಗಳದ
ಸಿಪ್ಪೆ

ಜೆಡಿಎಸ್
ಗಟ್ಟಿ ಕಾಳುಗಳಿಲ್ಲದ
'ತೆನೆ' ಹೊತ್ತ
ಮಹಿಳೆ
'ಕೈ'
ಹಿಡಿಯಲೂ ರೆಡಿ
'ಕಮಲ'
ಮುಡಿಗೇರಿಸಲೂ
ಎವರ್‌ರೆಡಿ!


ಬಿ.ಎಸ್.ಆರ್. ಕಾಂಗ್ರೆಸ್
ಗಣಿಯಲ್ಲಿ ಭೂತ
ಕುಣಿಯಲ್ಲಿ ವರ್ತಮಾನ
ಜೈಲಲ್ಲಿ ಭವಿಷ್ಯ
ಸದ್ಯದಲ್ಲೇ ಕೊನೆಗೊಳ್ಳಲಿದೆ
ಅಲ್ಪಾಯುಷ್ಯ...

ಕೆಜೆಪಿ
ಬಿಜೆಪಿ ಬುಡಕ್ಕೆ
'ಕೈ'ಯಿಟ್ಟ
ಲೋಕಲ್ ಪಟಾಕಿ

ರೈತಸಂಘ
ಅಲ್ಲಲ್ಲಿ ಸ್ಪರ್ಧೆ
ಖಚಿತ
ಸೋಲು ಅಷ್ಟೇ
ಉಚಿತ

ಸರ್ವೋದಯ
ಉದಯವಾಗುವ
ಮೊದಲೇ
'ಭೂಗತ'
ಸದ್ಯ ಶಾಶ್ವತ ಅಸ್ತಂಗತ!

● ಪಿ.ಕೆ. ಮಲ್ಲನಗೌಡರ್



ಹೋಂ ಸ್ಟೇ ಪ್ರಕರಣದಲ್ಲಿ ಆರೆಸ್ಸೆಸ್ಸಿಗರ 'ನೈತಿಕ ಪೊಲೀಸ್‌ಗಿರಿ'ಯ ಅಮಾನುಷ ದಾಳಿಗೆ ಸಾಕ್ಷಿಯಾಗಿ ಅದನ್ನು ವರದಿ ಮಾಡಿದ್ದ ಪತ್ರಕರ್ತ ನವೀನ್ ಸೂರಿಂಜೆ ಕೊನೆಗೆ ಅದೇ ಸಂಘಿಗಳ ಷಡ್ಯಂತ್ರಕ್ಕೆ ಬಲಿಯಾಗಿ ಜೈಲು ಸೇರಬೇಕಾಗಿತ್ತು. ಇದೀಗ ನ್ಯಾಯಾಲಯ ಅವರಿಗೆ ಷರತ್ತು ಬದ್ಧ ಜಾಮೀನು ನೀಡಿ ಬಿಡುಗಡೆ ಮಾಡಿದೆ. ಕುತೂಹಲ ಮತ್ತು ಕಾಳಜಿಗೆಂದು ಪತ್ರಿಕೆ ಅವರನ್ನು ಮಾತನಾಡಿಸಿತು. ಸುಮಾರು ನಾಲ್ಕೂವರೆ ತಿಂಗಳ ಕಾಲ ಜೈಲಿನಲ್ಲಿದ್ದ ಅವರ ಅನುಭವ, ಷಡ್ಯಂತ್ರದ ಹಿಂದಿನ ಪಿತೂರಿ, ವ್ಯವಸ್ಥೆಗಳ ಅವ್ಯವಸ್ಥೆ ಎಲ್ಲವೂ ಇಲ್ಲಿದೆ, ಅವರದೇ ಮಾತುಗಳಲ್ಲಿ...

ಕಂಬಿ ಹಿಂದಿನ ಕಥನ

ನವೀನ್ ಸೂರಿಂಜೆಯ ಮಾತುಗಳು

ಅಂತೂ ಹೊರಗೆ ಬಂದಿದ್ದೇನೆ!

ಒಮ್ಮೊಮ್ಮೆ ಹೀಗನ್ನಿಸುತ್ತದಾದರೂ, ಇದು ನನಗೆ ದೊಡ್ಡ ಉಲ್ಲಾಸವನ್ನೇನು ಉಂಟುಮಾಡಿಲ್ಲ. ಯಾಕಂದ್ರೆ, ಜೈಲಿನಲ್ಲಿದ್ದ ದಿನಗಳ ಸಂಖ್ಯೆ ಜಾಸ್ತಿಯಾದವು ಎನ್ನುವುದೊಂದನ್ನು ಬಿಟ್ಟರೆ ಆ ದಿನಗಳು ನನ್ನ ಅಧ್ಯಯನಕ್ಕೆ ತುಂಬಾ ಸಹಕಾರಿಯಾಗಿದ್ದವು. ಹೊರಗಿನಿಂದ ಪುಸ್ತಕಗಳನ್ನು ತರಿಸಿ ಓದಿದ ಅಧ್ಯಯನಕ್ಕಿಂತ ಜೈಲಿನ ಒಳಗೇ ನನಗೆ ಸಿಕ್ಕ ಅನುಭವಗಳು, ವಿಪರ್ಯಾಸಗಳು ಹೇಳಿದ ಪಾಠಗಳು ನಿಜಕ್ಕೂ ಬೆಲೆ ಕಟ್ಟಲಾಗದಂತವು.

ನಾನಿದ್ದ ಮಂಗಳೂರು ಜೈಲು, ಇಡೀ ದೇಶದ ಕೋಮುವಾದದ ಅಧ್ಯಯನಕ್ಕೆ ಹೇಳಿಮಾಡಿಸಿದ ಜಾಗ. ಯಾಕೆಂದ್ರೆ ಎಲ್ಲರಿಗೂ ಗೊತ್ತಿರುವಂತೆ ಇವತ್ತು ಮಂಗಳೂರು ಕೋಮುವಾದಿಗಳ ಕೇಂದ್ರಸ್ಥಾನವಾಗುತ್ತಿದೆ. ಇದುವರೆಗೆ ಸಾಕಷ್ಟು ಕೋಮುಗಲಭೆಗಳಿಗೆ ಸಾಕ್ಷಿಯಾಗಿದೆ. ಹಾಗಾಗಿ ಇಲ್ಲಿನ ಜೈಲುಗಳಲ್ಲಿರುವ ಕೈದಿಗಳಲ್ಲಿ ಆ ಕೋಮುವಾದದ ಎಫೆಕ್ಟ್ ಮತ್ತು ಇಂಪ್ಯಾಕ್ಟ್‌ಗಳನ್ನು ಸುಲಭವಾಗಿ ಕಾಣಬಹುದು. ಕೋಮುವಾದಿಗಳೂ ಜೈಲಲ್ಲಿದ್ದಾರೆ, ಕೋಮುವಾದಿಗಳಿಂದ ದೌರ್ಜನ್ಯಕ್ಕೊಳಗಾದವರೂ ಜೈಲಲ್ಲಿದ್ದಾರೆ. ಅವರ ಮಾತು, ಆಲೋಚನಾ ಲಹರಿಗಳನ್ನು ಗಮನಿಸುತ್ತಾ ಹೋದರೆ ತಳಮಟ್ಟದಿಂದ ಕೋಮುವಾದ ಹೇಗೆ ಹರಡಿಸಲ್ಪಡುತ್ತೆ ಎಂಬುದು ಸ್ಪಷ್ಟವಾಗುತ್ತಾ ಸಾಗುತ್ತೆ. ಅದೊಂದು ದೀರ್ಘ ಅಧ್ಯಯನವೇ ಸರಿ.

ಮಾಧ್ಯಮದವರಾಗಿ ಅದರಲ್ಲೂ ಕ್ರೈಮ್ ರಿಪೋರ್ಟರ್‌ಗಳಾಗಿ ನಾವೆಂತಹ ತಪ್ಪು ಮಾಡ್ತಿರ್ತೀವಿ ಅನ್ನೋದೂ ನನಗೆ ಇಲ್ಲಿಗೆ ಬಂದ ಮೇಲೆಯೆ ಗೊತ್ತಾದದ್ದು. ಪೊಲೀಸ್ ಬ್ಲಾಗಿನಲ್ಲಿರೋ ಸುದ್ದಿಗಳನ್ನ ಕಾಪಿ ಮಾಡಿ ನ್ಯೂಸ್ ಮಾಡೊ ನಾವುಗಳು ನಮಗೇ ಗೊತ್ತಿಲ್ಲದಂತೆ ಸತ್ಯವನ್ನು ತಿರುಚಿ ಬಿಟ್ಟಿರುತ್ತೇವೆ. ಸರಗಳ್ಳನೊಬ್ಬನ ಕಥೆ ಕೇಳಿದರೆ ಇದು ನಿಮಗೂ ಖಾತ್ರಿಯಾಗಬಹುದು.

ಅವನೊಬ್ಬ ಚಾಲಾಕಿ ಸರಗಳ್ಳ. ಐದಾರು ಪ್ರಕರಣಗಳಲ್ಲಿ ಸರ ಕದ್ದು ಜನರಿಗೆ ಸಿಕ್ಕದಂತೆ ಪೇರಿ ಕಿತ್ತಿದ್ದ. ಆದರೆ ಒಮ್ಮೆ ರೈಲ್ವೇ ಪೊಲೀಸರ ಕೈಗೆ ಅನುಮಾನಾಸ್ಪದವಾಗಿ ಸಿಕ್ಕಿ ಬಿದ್ದಿದ್ದನಂತೆ. ಬಂಧಿಸಿದ ಪೊಲೀಸರು ಈ ಹಿಂದಿನ ಐದಾರು ಪ್ರಕರಣಗಳಿಗೂ ಇವನೇ ಕಾರಣ ಇರಬಹುದೆಂದುಕೊಂಡು ಕೇಸ್ ಫಿಟ್ ಮಾಡಿ ಸ್ಲೇಟ್ ಕೊಟ್ಟು ಫೋಟೋ ಕ್ಲಿಕ್ಕಿಸೇ ಬಿಟ್ಟಿದ್ದರು. ಆದರೆ ನಾನು ಅವನನ್ನು ಭೇಟಿ ಮಾಡಿದ ಮೇಲಷ್ಟೆ ಗೊತ್ತಾದದ್ದು ಪಾಪ ಅವನಿಗೆ ಒಂದು ಕಾಲೇ ಇರಲಿಲ್ಲವೆನ್ನುವ ಸತ್ಯ! ಕೈಗೆ ಸಿಗದಂತೆ ಓಡಿಹೋಗುತ್ತಿದ್ದ ಆ ಸರಗಳ್ಳನಿಗೆ ಇದ್ದದ್ದು ಒಂದೇ ಕಾಲು. ಪೊಲೀಸರು ನೀಡುವ ಸ್ಲೇಟ್ ಹಿಡಿದ ಮಗ್‌ಶಾಟ್ ಫೋಟೋದಲ್ಲಿ (ಪೊಲೀಸರು ಬಂಧಿಸಿದ ನಂತರ ಆರೋಪಿಗಳ ಕೈಗೆ ಅವರ ವಿವರ ಮತ್ತು ಕೇಸ್ ನಂಬರ್ ಬರೆದ ಸ್ಲೇಟ್ ಕೊಟ್ಟು ತೆಗೆಸುವ ಫೋಟೋ) ಕ್ರೈಮ್ ಪತ್ರಕರ್ತರಿಗೆ ಅವನ ಕಾಲೆಲ್ಲಿ ಕಾಣಬೇಕು. ಕುಖ್ಯಾತ ಸರಗಳ್ಳನೆಂಬ ನ್ಯೂಸ್ ಮಾತ್ರವೇ ಸಾಕು! ಅಷ್ಟೇ ಅಲ್ಲ ಜೈಲಿಗೆ ಬರುವವರೆಗೆ ತನ್ನ ಮೇಲೆ ಆರು ಪ್ರಕರಣ ಹಾಕಿರುವ ಸಂಗತಿಯೇ ಅವನಿಗೆ ತಿಳಿದಿರಲಿಲ್ಲವಂತೆ.

ಕೇಳ್ತಾ ಹೋದರೆ ಇಂತಹ ಸಾಕಷ್ಟು ಪ್ರಕರಣಗಳು ಬೆಳಕಿಗೆ ಬರುತ್ತಲೇ ಹೋಗುತ್ತವೆ. ಜೈಲಿನೊಳಗಿನ ಮಂದಿಯ ಒಡನಾಟ ಹೆಚ್ಚಿದಂತೆ ನನಗೆ ಒಂದಂತೂ ಸ್ಪಷ್ಟವಾಯಿತು. ಗಮನಾರ್ಹವಲ್ಲದ ಪ್ರಕರಣಗಳನ್ನು ಹೊರತುಪಡಿಸಿ ಉಳಿದಂತೆ ಹೆಚ್ಚಿನ ಪ್ರಕರಣಗಳಲ್ಲಿ ಪೊಲೀಸರಿಗೆ ನೈಜ ಆರೋಪಿಗಳೇ ಬೇಕೆಂದೇನಿಲ್ಲ, ಪ್ರಕರಣ ವನ್ನು ಕ್ಲೋಸ್ ಮಾಡಿ ಕೈತೊಳೆದು ಕೊಂಡರೆ ಸಾಕು. ಅತ್ತ ಕಡೆ ಪತ್ರಕರ್ತರಿಗೆ ಸ್ಟೋರಿ ಮಿಸ್ ಆಗದೆ ಬಂದರೆ ಸಾಕು. ಜತಗೆ ಒಂದು ಮಗ್ ಶಾಟ್ ಇದ್ದರಂತು ಸಾಕೇ ಸಾಕು.

ಜೈಲಿಗೆ ಹೋದನಂತರ ಹೊಸದೊಂದು ಜಗತ್ತಿಗೇ ಹೋದಂತ ಅನುಭವವಾಗುತ್ತಿದೆ. ಈಗೀಗ ಗೆಳೆಯರ ಬಳಿ ಒಂದು ಮಾತನ್ನು ಹೇಳುತ್ತೇನೆ; ಜರ್ನಲಿಸ್ಟ್ ಆದವನು ಅದರಲ್ಲೂ ಕ್ರೈಂ ವರದಿ ಮಾಡುವವರು ಒಂದು ತಿಂಗಳಾದರೂ ಜೈಲಿನಲ್ಲಿ ಇರಬೇಕು. ಆಗ ಅವರದೇ ತಪ್ಪುಒಪ್ಪುಗಳು ಅವರಿಗೆ ಅರ್ಥ ಆಗುತ್ತದೆ.

ಬೇರೆಯವರ ವಿಚಾರವೇಕೆ ನನ್ನ ಸಂಗತಿಯನ್ನೇ ನೋಡಿ. ಸುಖಾಸುಮ್ಮನೆ ಜೈಲಿಗೆ ಹೋಗಬೇಕಾಯ್ತು. ದೊಡ್ಡದೊಂದು ಷಡ್ಯಂತ್ರವೇ ಅದಕ್ಕೋಸ್ಕರ ಕೆಲಸ ಮಾಡಿದೆ. ಹೋಂ ಸ್ಟೇ ಪ್ರಕರಣ ಇದಕ್ಕೆ ನೆಪ ಅಷ್ಟೆ!

ಕರಾವಳಿಯ ಬಹುಪಾಲು ಮಾಧ್ಯಮದವರು ಪ್ರಭುತ್ವ ಮತ್ತು ಅಧಿಕಾರದ ಆಣತಿಯಂತೆ ಕೆಲಸ ಮಾಡುತ್ತಿದ್ದಾರೆ. ಆದರೆ ಬೆರಳೆಣಿಕೆಯಷ್ಟು ಪತ್ರಕರ್ತರು ಮಾತ್ರ ಇದುವರೆವಿಗೂ ಜನಪರ ಮಾಧ್ಯಮ ಕರ್ತವ್ಯ ನಿರ್ವಹಿಸು ತ್ತಿದ್ದಾರೆ. ಅಂತಹ ಬೆರಳೆಣಿಕೆಯಷ್ಟು ಮಿತ್ರರೆಲ್ಲ ಒಂದು ಟೀಮ್ ಮಾಡಿಕೊಂಡ ನಾವು ಮೊದಲಿನಿಂದಲೂ ಜಾಹಿರಾತು, ಗಿಫ್ಟ್, ಡ್ರಿಂಕ್ಸ್ ಪಾರ್ಟಿಗಳ ಹಂಗಿಗೆ ಒಳಗಾಗದೆ ದಿಟ್ಟವಾಗಿ ಜನಪರ ವರದಿಗಳನ್ನು ಮಾಡುತ್ತಾ ಬಂದಿದ್ದೆವು.

ಎಸ್.ಡಿ.ಎಸ್ ಕಾಲೇಜಿನ ಬುರ್ಖಾ ಪ್ರಕರಣ, ಪೋಸ್ಟ್ ಆಫೀಸ್‌ನೊಳಗೆ ದಲಿತರ ಪ್ರವೇಶ ನಿರ್ಬಂಧ, ಮಲೆಕುಡಿಯರ ಒಕ್ಕಲೆಬ್ಬಿಸುವ ಯೋಜನೆ ಹೀಗೆ ಪ್ರಾಮಾಣಿ ಪ್ರಯತ್ನಗಳಿಗೆ ನಾವೆಲ್ಲ ಮುಂದಾಗುತ್ತಿದ್ದದ್ದು ಇಲ್ಲಿನ ಸಂಘ ಪರಿವಾರದವರಿಗೆ ಇಷ್ಟವಿರಲಿಲ್ಲ, ಅದರಲ್ಲೂ ಅನಧಿಕೃತ ಭೂಸ್ವಾಧೀನ ಮತ್ತು ಎಸ್.ಇ.ಝಡ್ ಕುರಿತಾದ ನಮ್ಮ ವರದಿಗಳು ಕೆಲವರ ಕಣ್ಣು ಕುಕ್ಕಿಸಿದ್ದವು.

ನಮ್ಮ ಜನಪರ ಹೋರಾಟ ಮತ್ತು ಕರ್ತವ್ಯ ಪ್ರಜ್ಞೆಯನ್ನು ಮೂಲೆಗುಂಪು ಮಾಡುವುದು ಸಾಧ್ಯವಿಲ್ಲವೆನ್ನುವುದು ಅವರಿಗೆ ಗೊತ್ತಾದ ನಂತರದಲ್ಲಿ ತಮ್ಮ ಅಧಿಕಾರ ಮತ್ತು ಪ್ರಭಾವಗಳನ್ನು ಬಳಸಿ ಸೇಡು ತೀರಿಸಿಕೊಳ್ಳಬೇಕೆನ್ನುವ ವಿಕೃತ ಯೋಜನೆಯನ್ನು ಯಾವಾಗಿನಿಂದಲೊ ರೂಪಿಸು ತ್ತಿದ್ದರು. ಹೋಂ ಸ್ಟೇ ಪ್ರಕರಣದಲ್ಲಿ ಈ ಕೋಮುವಾದಿಗಳ ನೈತಿಕ ಪೊಲೀಸ್‌ಗಿರಿಯನ್ನು ನಾವು 'ತಾಲಿಬಾನ್ ಸಂಸ್ಕೃತಿ' ಅಂತ ಬಿಂಬಿಸಿದ್ದಾಗಲಿ, ಅದಕ್ಕೆ ಜನಬೆಂಬಲ ವ್ಯಕ್ತವಾದ ದ್ದಾಗಲಿ ಈ ಶಕ್ತಿಗಳನ್ನು ಇನ್ನಿಲ್ಲದಂತೆ ಕೆರಳಿಸಿದ್ದೇ ನನ್ನ ಬಂಧನಕ್ಕೆ ಮುಖ್ಯ ಕಾರಣ.

ಅದೇನೇ ಇರಲಿ, ಈ ಷಡ್ಯಂತ್ರದಿಂದ ಜೈಲಿಗೆ ಹೋಗಿ ಬಂದಿದ್ದರಿಂದ ನಾನು ಹೊಸದನ್ನು ಕಲಿಯಲು ಅನು ಕೂಲವೇ ಆಯಿತು. ಮತ್ತೊಂದು ಮುಖ್ಯವಾದ ವಿಷಯ ವನ್ನು ಇಲ್ಲಿ ಹೇಳಬೇಕು. ನಾನು ಜೈಲಿನಲ್ಲಿದ್ದಾಗ ನನ್ನ ಗಮನಕ್ಕೆ ಬಂದದ್ದು. ಜೈಲು, ಕೈದಿ, ಶಿಕ್ಷೆ ಮುಂತಾದ ಪದಗಳ ಬಗ್ಗೆ ನಮ್ಮಲ್ಲಿ ಸಾಮಾಜಿಕ ತಿರಸ್ಕಾರದ ಭಾವನೆ ಯಿದೆ. ಆದರೆ ಅಲ್ಲಿರುವವರ ಹಕ್ಕುಗಳನ್ನು ರಕ್ಷಿಸುವುದೂ ಕಾನೂನಿನ ಕರ್ತವ್ಯ. ಆದರೆ ವಿಚಾರಣಾಧೀನ ಕೈದಿಗಳಿಗೆ ಮತದಾನ ಮಾಡಲು ಅವಕಾಶ ನೀಡಲಾಗುತ್ತಿಲ್ಲದ ಸಂಗತಿ ನಿಜಕ್ಕೂ ಅಚ್ಚರಿಯನ್ನುಂಟುಮಾಡುತ್ತೆ. ಯಾಕೆಂದರೆ ಅದೇ ಜೈಲಿನಲ್ಲಿರುವ ವ್ಯಕ್ತಿ ಬಯಸಿದರೆ ಚುನಾವಣೆಗೆ ಸ್ಪರ್ಧಿಸಬಹುದು. ಆದರೆ ಮತ ಹಾಕಲು ಕೈದಿಗಳಿಗೆ ಅವಕಾಶವಿಲ್ಲ. ಇತ್ತೀಚೆಗಷ್ಟೆ ಇಟಲಿಯ ಆರೋಪಿತ ನಾವಿಕರನ್ನು ಮತ ಹಾಕಲು ಸ್ವದೇಶಕ್ಕೆ ಕಳುಹಿಸುವ ತೀರ್ಪಿತ್ತ ಸುಪ್ರೀಂಕೋರ್ಟ್ ಕಾನೂನಿನ ಕರ್ತವ್ಯವನ್ನು ಎತ್ತಿ ಹಿಡಿದಿತ್ತು. ಆದರೆ ನಮ್ಮದೇ ದೇಶದ 123 ಸೆಂಟ್ರಲ್ ಜೈಲು, 333 ಜಿಲ್ಲಾ ಜೈಲು, 809 ಸಬ್ ಜೈಲು ಹಾಗೂ ವಿಶೇಷ ಜೈಲುಗಳಲ್ಲಿರುವ ಕೈದಿಗಳಿಗೂ ಮತದಾನದ ಹಕ್ಕು ಲಭಿಸುವಂತಾಗಬೇಕಾದ್ದು ಅವಶ್ಯಕವಾಗಿದೆ.

ಇಂತಹ ಚಿಂತನೆಗಳೆಲ್ಲ ನನ್ನಲ್ಲಿ ಮೊಳೆತದ್ದು ಅದೇ ಜೈಲಿನ ಒಳಗೆ!

ನಿರೂಪಣೆ: ಗಿರೀಶ್ ತಾಳಿಕಟ್ಟೆ

ಮೈಸೂರು: ರಣ-ರಂಗಾಯಣ

ಇಲ್ಲಿಗೆ 25 ವರ್ಷಗಳ ಹಿಂದೆ ಸ್ಥಾಪಿತವಾದ ರಂಗಾಯಣ ಸಂಸ್ಥೆಗೆ ಇದು ಬೆಳ್ಳಿ ಹಬ್ಬದ ಕಾಲ. ಹಬ್ಬದ ಮಾತು ಹಾಗಿರಲಿ, ಅಲ್ಲಿ ಕನಿಷ್ಟ ನೆಮ್ಮದಿಯೂ ಇಲ್ಲದ, ಸೂತಕದ ವಾತಾವರಣ ನಿರ್ಮಾಣವಾಗಿದೆ. ಕಾರಣ ಬಹಳ ಸ್ಪಷ್ಟ. ಅಂದು ನಾಡಿನ ಹೆಮ್ಮೆಯ ನಾಟಕಕಾರ ಬಿ.ವಿ.ಕಾರಂತರು ಮೈಸೂರಿನಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಹೊರಟಾಗ ಸರ್ಕಾರದ ಆಯಕಟ್ಟಿನ ಸ್ಥಾನದಲ್ಲಿದ್ದ ಎಂ.ಪಿ.ಪ್ರಕಾಶ್, ನಜೀರ್ ಸಾಬ್‌ರಂಥ ಸಜ್ಜನ, ಸುಸಂಸ್ಕೃತ ರಾಜಕಾರಣಿಗಳು ಬೆನ್ನು ತಟ್ಟಿ ಪ್ರೋತ್ಸಾಹಿಸಿದ್ದರು. ಆದರೆ ಈಗ ಹೇಳಿಕೇಳಿ ಬಿಜೆಪಿ ಸರ್ಕಾರ. ಜನಪರವಾಗಿರುವ ಎಲ್ಲವನ್ನೂ ಆಪೋಶನ ತೆಗೆದುಕೊಂಡು, ಕಠೋರ ಹಿಟ್ಲರ್‌ಶಾಹಿ ಆಡಳಿತವನ್ನು ಜಾರಿಗೆ ತರಲು ಕಟಿಬದ್ಧವಾಗಿರುವ ಆರೆಸ್ಸೆಸ್ ಕೂಟದ ಕಬಂಧ ಹಿಡಿತ ಬೇರೆ. ಹೀಗಾಗಿ ಜನಪರ, ಜಾತ್ಯತೀತ ಸಂಸ್ಕೃತಿಯ ಪರ ನಿಂತಿರುವ ಸಂಸ್ಥೆಯನ್ನು ಒಳಗಿನಿಂದಲೇ ಕೊಂದುಹಾಕಿ, ಕ್ರಮೇಣ ತಮ್ಮ ಆರೆಸ್ಸೆಸ್ ಪ್ರಭೃತಿಗಳನ್ನು ಪ್ರತಿಷ್ಠಾಪಿಸುವ ಕಾರ್ಯಕ್ಕೆ ಕೈಹಾಕಿದ್ದಾರೆ.

ಪರಿಣಾಮವಾಗಿ ರಂಗಾಯಣದ ಹಲವು ಕಲಾವಿದರನ್ನು ಶಿವಮೊಗ್ಗ ಮತ್ತು ಧಾರವಾಡ ಕೇಂದ್ರಗಳಿಗೆ ವರ್ಗಾವಣೆ ಮಾಡಿ ಸರ್ಕಾರಿ ಆದೇಶ ಹೊರಬಿದ್ದಿದೆ. ನಾಡಿನ ಅನೇಕ ಸಾಹಿತಿ ಕಲಾವಿದರು ಸಂಸ್ಕೃತಿ-ಹೀನ ಇಲಾಖೆಯ ಈ ಹಿಟ್ಲರ್‌ಶಾಹಿ ಕ್ರಮದ ವಿರುದ್ಧ ಬೀದಿಗಿಳಿದಿದ್ದಾರೆ.

ಸರ್ಕಾರದಲ್ಲಿ ವರ್ಗಾವಣೆಯೆಂದರೆ ತೀರಾ ಮಾಮೂಲಿ ವಿಷಯ. ಆದರೆ ಅದೇ ನೀತಿಯನ್ನು ರಂಗಾಯಣದಂಥ ಸ್ವಾಯತ್ತ ಸಂಸ್ಥೆಗೆ ಅನ್ವಯಿಸುವುದು ಅನರ್ಥಕಾರಿ. ಉದಾಹರಣೆಗೆ ಧಾರವಾಡದಂಥ ಪ್ರದೇಶದಲ್ಲಿ ತನ್ನದೇ ಆದ ಪ್ರಾದೇಶಿಕ ಅಸ್ಮಿತೆ, ಸಾಂಸ್ಕೃತಿಕ ಹಿನ್ನೆಲೆ, ಕಲಾ ಪ್ರಾಕಾರಗಳು ಇರುತ್ತವೆ. ಆದ್ದರಿಂದ ಸ್ಥಳೀಯ ಸಾಂಸ್ಕೃತಿಕ ಪರಿಸರಕ್ಕೆ ಹೊಂದಾಣಿಕೆಯಾಗಬಲ್ಲ ಕಲಾವಿದರನ್ನು ಸ್ಥಳೀಯವಾಗಿಯೇ ರೂಪಿಸಬೇಕೆಂಬ ನೀತಿಯನ್ನು ಬಹುತೇಕರು ಒಪ್ಪಿದ್ದಾರೆ. ಆದರೆ ಬಿಜೆಪಿ-ಆರೆಸ್ಸೆಸ್‌ಗಳದ್ದು ಹೇಗೂ ಏಕರೂಪದ ಫ್ಯಾಸಿಸ್ಟ್‌ಶಾಹಿ. ಆದ್ದರಿಂದ ಮೈಸೂರಿನಲ್ಲಿ ತಳವೂರಿರುವ ತಮ್ಮ ನಿಲುವಿಗೆ ಒಗ್ಗದವರನ್ನು ಇತರೆಡೆಗಳಿಗೆ ವರ್ಗಾಯಿಸಿ, ಕ್ರಮೇಣ ಆಪ್ತ ಆರೆಸ್ಸೆಸ್ಸಿಗರನ್ನು ಆ ಸ್ಥಾನಕ್ಕೆ ತಂದು ಕೂರಿಸುವ ಹುನ್ನಾರ ನಡೆಸಿದ್ದಾರೆ.

ಸಾಹಿತಿ-ಕಲಾವಿದ-ನಾಟಕಪ್ರಿಯರ ವಿರೋಧ ವ್ಯಕ್ತವಾದ ನಂತರ ಗಿಲೀಟು ಸಚಿವ ರಾಮದಾಸ್ ಈ ವರ್ಗಾವಣೆಗಳ ವಿರುದ್ಧ ಒಂದು ಪತ್ರಿಕಾಹೇಳಿಕೆ ಕೊಟ್ಟಿದ್ದಾನೆ. ಆ ಮೂಲಕ ಆತ ಮತ್ತೊಂದು ಅಂಶವನ್ನೂ ಬಹಿರಂಗಪಡಿಸಿದ್ದಾನೆ. ಆತ ಹೇಳಿದ್ದೇನೆಂದರೆ "ಈ ವರ್ಗಾವಣೆಯ ವಿಚಾರ ಒಂದು ವರ್ಷದಿಂದಲೂ ಅಜೆಂಡಾದಲ್ಲಿತ್ತು; ಆದರೆ ಚುನಾವಣಾ ನೀತಿಸಂಹಿತೆ ಜಾರಿಯಾಗಿರುವ ಈ ಸಂದರ್ಭದಲ್ಲಿ ಈ ನಿರ್ಣಯ ತೆಗೆದುಕೊಳ್ಳಬಾರದಿತ್ತು" ಎಂದು. ಅಂದರೆ ಇದರಿಂದ ಎರಡು ವಿಷಯ ಸ್ಪಷ್ಟ. ರಂಗಾಯಣಕ್ಕೆ ಸಂಬಂಧಿಸಿದ ವಿದ್ಯಮಾನಗಳು ಈಗಷ್ಟೆ ದಿಢೀರ್ ಕಾರಣಗಳಿಂದ ಉದ್ಭವವಾಗಿಲ್ಲ; ಬದಲಿಗೆ ಅದನ್ನು ಮಣ್ಣುಗೂಡಿಸುವ ಸಂಚು ವರ್ಷದ ಹಿಂದಿನಿಂದಲೂ ನಡೆಯುತ್ತಿದೆ ಎಂಬುದು ಒಂದು ಅಂಶ. ಎರಡನೆಯದು ಚುನಾವಣಾ ನೀತಿಸಂಹಿತೆ ಜಾರಿಯಾದ ನಂತರವೂ ತರಾತುರಿಯಲ್ಲಿ ಇಂಥಾ ಪ್ರಮುಖ ನಿರ್ಧಾರ ಕೈಗೊಳ್ಳುತ್ತಾರೆಂದರೆ, ಚುನಾವಣೆಯಲ್ಲಿ ಹೇಗೂ ಸೋಲು ಕಟ್ಟಿಟ್ಟಬುತ್ತಿಯಾಗಿರುವುದರಿಂದ ರಂಗಾಯಣದಂಥ ಸಾಂಸ್ಕೃತಿಕ ಸಂಸ್ಥೆಯನ್ನು ಆದಷ್ಟು ಶೀಘ್ರವಾಗಿ ಕೇಸರಿ ತೆಕ್ಕೆಗೆ ತೆಗೆದುಕೊಳ್ಳುವುದು ಅವರ ಪ್ರಮುಖ ಹಿಡನ್ ಅಜೆಂಡಾದ ಭಾಗ ಎಂಬುದು.

ಇದರಲ್ಲಿ ಮತ್ತೊಂದು ಅನಾಹುತಕಾರಿ ಅಂಶವೂ ಇದೆ. ಅದು ಅಧಿಕಾರ ಕೇಂದ್ರೀಕರಣಕ್ಕೆ ಸಂಬಂಧಿಸಿದ್ದು. ಶಿವಮೊಗ್ಗ, ಧಾರವಾಡ, ಮೈಸೂರು ಇತ್ಯಾದಿ ಪ್ರದೇಶಗಳ ಸಾಂಸ್ಕೃತಿಕ ಸಂಸ್ಥೆಯ ಇಷ್ಟ-ಕಷ್ಟಗಳನ್ನು ಬೆಂಗಳೂರಿನ ಎಸಿ ರೂಮುಗಳಲ್ಲಿ, ಕಾರ್ಪೋರೇಟ್ ಸಂಸ್ಕೃತಿಯಲ್ಲಿ ತೇಲಿ ಮುಳುಗುತ್ತಿರುವ ಭ್ರಷ್ಟ ಅಧಿಕಾರಶಾಹಿಗಳ ನಿಯಂತ್ರಣಕ್ಕೆ ವಹಿಸಿಬಿಡುವುದು ಆತ್ಮಹತ್ಯಾಕಾರಿಯಾದದ್ದು. ಇದರಿಂದ ಒಂದು ಕಡೆ ವಿಕೇಂದ್ರೀಕರಣ ನೀತಿಗೆ ಪೆಟ್ಟಾದರೆ ಮತ್ತೊಂದು ಕಡೆ ವೈವಿಧ್ಯಮಯ ಸಂಸ್ಕೃತಿಗೆ ಕಂಟಕಪ್ರಾಯವಾಗುವುದರಲ್ಲಿ ಸಂಶಯವಿಲ್ಲ. ಹೀಗಾಗಿ ಇಂಥಾ ಪ್ರವೃತ್ತಿಗಳನ್ನು ವಿರೋಧಿಸಲೇಬೇಕಾಗುತ್ತದೆ.

ಈ ವರ್ಗಾವಣೆ ಆದೇಶ ಹೊರಬಿದ್ದ ಪ್ರಕ್ರಿಯೆಯಾದರೂ ಹೇಗಿದೆ? ಇಂಥಾ ಒಂದು ಪ್ರಮುಖ ಆದೇಶ ಹೊರಡಿಸುವ ಮುನ್ನ ಸಂಸ್ಕೃತಿಹೀನ ಇಲಾಖೆಯ ಮಂದಿ ಸಂಬಂಧಿಸಿದ ಯಾರೊಬ್ಬರ ಅಭಿಪ್ರಾಯವನ್ನೂ ಕೇಳಲಿಲ್ಲ. ರಂಗಾಯಣದ ನಿರ್ದೇಶಕರಾಗಿದ್ದ ಲಿಂಗದೇವರು ಹಳೆಮನೆಯವರ ಅಕಾಲಿಕ ಮರಣದ ನಂತರ ಆ ಸ್ಥಾನಕ್ಕೆ ಮುಖ್ಯಮಂತ್ರಿ ಚಂದ್ರುರ ಆಪ್ತ ಮಿತ್ರ ಹಾಗೂ ಆರೆಸ್ಸೆಸ್ ವಾಸನೆಯ ಬಿ.ವಿ.ರಾಜಾರಾವ್ ಎಂಬುವವರನ್ನು ಕೂರಿಸಲಾಗಿತ್ತು. ಸರ್ಕಾರದ ಈ ದಿಢೀರ್ ಆದೇಶವನ್ನು ವಿರೋಧಿಸಿ ರಾಜಾರಾಮ್ ಅವರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದೇ ತಡ, ಅವರನ್ನು ನಿರ್ದೇಶಕ ಹುದ್ದೆಯಿಂದ ಕಿತ್ತುಹಾಕಲಾಗಿದೆ. ಆರೆಸ್ಸೆಸ್ ಹೇಗಿದ್ದರೂ ಶಿಸ್ತಿನ ಸಂಘಟನೆಯಲ್ಲವೆ?

ಕಲಾವಿದರ ವರ್ಗಾವಣೆಯ ಬಗ್ಗೆ ಯಾರಾದರೂ ಕೋರ್ಟ್ ಮೆಟ್ಟಿಲೇರಿ ತಡೆಯಾಜ್ಞೆ ತಂದುಬಿಟ್ಟರೆ ತಮಗೆ ಮುಖಭಂಗವಾಗಬಹುದು ಎಂಬುದನ್ನು ಮೊದಲೇ ಲೆಕ್ಕ ಹಾಕಿರುವ ಸಂಸ್ಕೃತಿ-ಹೀನ ಇಲಾಖೆ ಈಗಾಗಲೇ ಕೋರ್ಟ್‌ನಲ್ಲಿ ಕೇವಿಯಟ್ ದಾಖಲಿಸಿದೆ. ಕೇವಿಯಟ್ ದಾಖಲೆಯ ಜೆರಾಕ್ಸ್ ಪ್ರತಿಗಳನ್ನು ಎಲ್ಲಾ ಕಲಾವಿದರ ಮನೆ ಗೋಡೆಗಳಿಗೆ ಅಂಟಿಸಿರುವ ಇಲಾಖೆಯವರು ತಮ್ಮ ನಿಜ ಸಂಸ್ಕೃತಿಯನ್ನು ಪ್ರದರ್ಶಿಸಿದ್ದಾರೆ. ಈ ಮೂಲಕ ಕಲಾವಿದರನ್ನು ಕ್ರಿಮಿನಲ್‌ಗಳಿಗೆ ಸರಿಸಮಾನವಾಗಿ ನಡೆಸಿಕೊಳ್ಳುವ ಹೊಸ ಸಂಸ್ಕೃತಿಯೊಂದನ್ನು ಪರಿಚಯಿಸಿದಂತಾಗಿದೆ.


ಈ ಎಲ್ಲ ಒಳಸಂಚುಗಳ ಜೊತೆಗೆ ಕೆಲವು ಅಧಿಕಾರದ ಪಿತ್ತ ನೆತ್ತಿಗೇರಿರುವ ವ್ಯಕ್ತಿಗಳ ಕೈವಾಡವೂ ಇದೆಯೆಂಬ ಮಾತೂ ಕೇಳಿಬರುತ್ತಿದೆ. ಅದರಲ್ಲಿ ಪ್ರಮುಖ ಹೆಸರು ಶ್ರೀಮತಿ ನಿರ್ಮಲಾ ಮಠಪತಿ. ಈಗಾಗಲೇ ಎರಡು ಬಾರಿ ಸಸ್ಪೆಂಡ್ ಆಗಿ ಸಾಧನೆಗೈದಿರುವ ಈಕೆಯನ್ನು ರಂಗಸಮಾಜದ ರೆಜಿಸ್ಟ್ರಾರ್ ಹುದ್ದೆಯಲ್ಲಿ ಮೇಯಲು ತಂದು ಕೂರಿಸಲಾಗಿದೆ. ತಳ್ಳಗೆ ಬೆಳ್ಳಗೆ ವಯ್ಯಾರ ಮಾಡೋದನ್ನು ಹೊರತುಪಡಿಸಿದರೆ ಈಕೆಯದು ಪಕ್ಕಾ ಹಿಟ್ಲರ್ ಪ್ರವೃತ್ತಿ. ಅದರಲ್ಲೂ ಹೋದೆಡೆಯಲ್ಲೆಲ್ಲಾ ಸ್ಥಳೀಯ ಮಂತ್ರಿ ಮಹೋದಯರಿಗೆ ಪರಮಾಪ್ತಳಾಗಿಬಿಡುವ ಕಲೆಯನ್ನು ಚೆನ್ನಾಗಿ ಕರಗತ ಮಾಡಿಕೊಂಡಿದ್ದಾಳೆ. ಇದಕ್ಕಿಂತ ಹೆಚ್ಚಿಗೆ ಹೇಳುವುದು ಇಲ್ಲಿ ಸೂಕ್ತವಲ್ಲ. ಈಕೆ ತನ್ನ ಹಾದಿಗೆ ಅಡ್ಡಲಾಗಿರುವ ಅಥವಾ ತನ್ನನ್ನು ಪ್ರಶ್ನಿಸುವವರ ಮೇಲೆ ಸೇಡು ತೀರಿಸಿಕೊಳ್ಳುವ ಭರಾಟೆಯಲ್ಲಿದ್ದಾಳೆ ಎಂಬುದು ಮೈಸೂರಿನ ಕಲಾವಿದರ ಅಳಲು.




ಈ ಒಳಸಂಚಿನಲ್ಲಿ ತಮ್ಮದೇ ವೈಯಕ್ತಿಕ ತೆವಲುಗಳ ಕಾರಣಕ್ಕಾಗಿ ಇನ್ನೂ ಕೆಲವು ಪ್ರತಿಭಾವಂತ ಕಲಾವಿದರೂ ಬಳಕೆಯಾಗಿದ್ದಾರೆ ಎಂಬ ಆರೋಪ ಕೇಳಿ ಬರುತ್ತಿದೆ. ಪ್ರತಿಭೆ ಇದ್ದವರಲ್ಲಿ ಉತ್ತಮ ಮೌಲ್ಯಗಳೂ ಇರಲೇಬೇಕೆಂಬ ಕಡ್ಡಾಯವೇನಿಲ್ಲ ಬಿಡಿ.

ಆದರೆ ತನ್ನ ಕೊನೆದಿನಗಳನ್ನು ಎಣಿಸುತ್ತಿರುವ ಸರ್ಕಾರ ಇನ್ನೂ ಹೆಚ್ಚಿನ ಅನಾಹುತಗಳನ್ನು ಮಾಡದಂತೆ ಕಡಿವಾಣ ಹಾಕುವುದು ಹೇಗೆ ಎಂಬುದೇ ಈಗಿನ ಪ್ರಶ್ನೆ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ







...ಾಯಲ್ಲಿ ರಾಮಾಯಣ! ...ದುಕೆಲ್ಲಾ ಕಾಮಾಯಣ!! ...ಥುತ್ ಹಲ್ಕಾಗಳಾ...!

...ಇದು ಬಿಜೆಪಿಗಳ ನಿತ್ಯಕರ್ಮ.

...ಜೆಪಿ ಶಾಸಕನೊಬ್ಬನನ್ನೇ ಹೋಲುವ ವ್ಯಕ್ತಿಯೋರ್ವ ಟಿಬೆಟಿಯನ್ ...ಗಿಯೊಬ್ಬಳೊಂದಿಗೆ ನಡೆಸಿರುವ ಕಾಮಕೇಳಿಯ ಸಿಡಿಯೊಂದು ಈಗ ...ದ್ಯಂತ ಬಿಡುಗಡೆಯಾಗಿದೆ.


...ಗಾಗಲೇ ಸೋತಂತಿರುವ, ಅರೆ ಸತ್ತ ಹಾವಿನಂತಾಗಿರುವ ಹಿಂದೂ ...ಹಿತರ ಪಾರ್ಟಿಗೆ ಇದು ಇನ್ನೊಂದು ಪ್ರಾಣಾಂತಿಕ ಹೊಡೆತ. ಬಿಜೆಪಿ ...ಟ್ಟಿಗೆಯ ಕೊನೆಯ ಮೊಳೆ.

...ಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟರನ್ನೇ ಹೋಲುವ ವ್ಯಕ್ತಿಯ ...ಕ್ಸ್ ಸಿಡಿ ರಾದ್ಧಾಂತ ಸ್ಫೋಟಗೊಂಡ ತಕ್ಷಣ ಭಟ್ಟರು 'ಇದು ನನ್ನ ...ಷದ ಕರಾಳ ದಿನ' ಎಂದು ಶೋಕಿಸಿದ್ದಾರೆ. ಸುಳ್ಳು ಆರೋಪವಿದು ... ಕಾರಣಕ್ಕೆ ಈ ಶೋಕವಾ ಇಲ್ಲ ನನ್ನ ಗುಟ್ಟು ಬಯಲಾಯಿತಲ್ಲ ...ದಕ್ಕೆ ಈ ಗೋಳಾಟವಾ ಎಂಬುದು ಸರಿಯಾದ ತನಿಖೆಯಿಂದಷ್ಟೇ ...ನಾಗಬಲ್ಲದು.

...ಸಿದ ಐದು ವರ್ಷದ ಅಧಿಕಾರಾವಧಿಯಲ್ಲಿ ಈ ಹಿಂದೂ ವೀರರ ...ಸಾಧನೆಗಳೇನೆಂದು ನೋಡಿದರೆ ಡಿನೋಟಿಫಿಕೇಷನ್ ದಂಧೆ, ಭ್ರಷ್ಟಾಚಾರ, ...ತಳಿತ, ಒಳಜಗಳಗಳ ಜೊತೆಗೆ ಸೆಕ್ಸ್ ಹಗರಣಗಳ ಧಾರಾವಾಹಿಯೂ ...ಗೆ ನೆನಪು ಬಾರದಿರದು.


...010ರ ಮೇ ತಿಂಗಳಲ್ಲಿ ಹರತಾಳು ಹಾಲಪ್ಪ ತನ್ನ ಗೆಳೆಯನ ಮನೆಯಲ್ಲೇ ...ದ್ದ ಪಂಚೆ ಸಮೇತ ಸಿಕ್ಕುಬಿದ್ದು ರೇಪ್ ಕೇಸ್ ಹಾಕಿಸಿಕೊಂಡ. ಲಿಂಗಾಯತ ...ಕ ಯಡಿಯೂರಪ್ಪನ ಭಂಟನಾಗಿದ್ದ ಹಾಲಪ್ಪ ಶಿವಶರಣರ '...ಯನೊಲ್ಲೆ' ಎಂಬ ಬೋಧನೆಯನ್ನು ಕೊಂಚ ಬದಲಿಸಿ 'ಪರಸತಿಯ ...ಎಂದಾಗಿಸಿಕೊಂಡು ತನ್ನ ಹಾಗೂ ಬಿಜೆಪಿಯ ಮಾನಮರ್ಯಾದೆಗಳನ್ನೆಲ್ಲಾ ...ಹಾಕಿದ್ದ.

...ದಕ್ಕೂ ಮೂರು ತಿಂಗಳ ಹಿಂದೆ ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿ ... ಇರಿಸಿಕೊಂಡಿದ್ದ ಅನೈತಿಕ ಸಂಬಂಧವೂ ಬಯಲಾಗಿ ಫೋಟೊ ಸಹಿತ '...ಶ್'ನಲ್ಲಿ ಹಾಗೂ ಇನ್ನಿತರ ಮೀಡಿಯಾಗಳಲ್ಲಿ ...ಯವಾಗಿತ್ತು. ಈ ಬಿಜೆಪಿಗಳು ಅದೆಂತಾ ...ಗೇಡಿಗಳೆಂದರೆ ಈ ಹಗರಣ ಆದ ಮೇಲೂ ...ಕಾಚಾರಿಯನ್ನು ಕರೆದು ಕ್ಯಾಬಿನೆಟ್ ಮಂತ್ರಿಗಿರಿ ...ತ್ತ ತಮ್ಮ ಅಯೋಗ್ಯತೆ ಏನೆಂಬುದನ್ನು ಇಡೀ ...ಗೆ ತೋರಿಸಿಕೊಂಡಿದ್ದರು. ಅಷ್ಟೇ ಅಲ್ಲದೆ ಅದೇ ...ಕಾಚಾರಿಗೆ ಮೇಯಲು ಪೊಗದೊಸ್ತಾಗಿದ್ದ ...ರಿ ಖಾತೆಯನ್ನೇ ನೀಡಿ ಕೋಟ್ಯಂತರ ರೂಪಾಯಿ ... ಫಂಡೂ ಕಿತ್ತು ತಿಂದಿದ್ದಾರೆ. ಈಗ ...ಕಾಚಾರಿ 'ತಾನು ಆಗ ಮುಖ್ಯಮಂತ್ರಿಯಾಗಿದ್ದ ...ಂದ ಗೌಡರಿಗೆ ಹಣ ಕೊಟ್ಟಿದ್ದೆ' ಎನ್ನುತ್ತಿದ್ದಾರೆ. ಪಾಪದ ಪ್ರಾಣಿ ಸದಾನಂದ ...ಡೂ ಸಹ ಇದನ್ನು ನಿರಾಕರಿಸದೆ 'ರೇಣುಕಾಚಾರ್ಯ ಹಣ ಕೊಟ್ಟದ್ದು ...ಲ್ಲ, ಬಿಜೆಪಿ ಪಾರ್ಟಿಗೆ' ಎನ್ನುತ್ತಿದ್ದಾರೆ.



...ಹಣ ಕೊಟ್ಟದ್ದು ಗೌಡರಿಗೋ ಇಲ್ಲ ಪಾರ್ಟಿಗೋ ಎಂಬುದು ಒಂದೆಡೆ ಇರಲಿ. ಆದರೆ ಹಣ ಕೊಟ್ಟವನು ಮಾತ್ರ ಅಪ್ಪಟ ಲಂಪಟ ಅಲ್ಲವೆ ಎಂಬುದು ಬಿಜೆಪಿಗೆ ಮುಖ್ಯ ಅನ್ನಿಸಲಿಲ್ಲ ಎಂಬುದು ಗಮನಾರ್ಹ.

ಈ ರಗಳೆಗಳೆಲ್ಲ ಜನರ ನೆನಪಿನಿಂದ ಮಾಸುವ ಮೊದಲೇ ಬಿಜೆಪಿ ಸಚಿವರಾಗಿದ್ದ ಸಿ.ಸಿ. ಪಾಟೀಲ, ಲಕ್ಷ್ಮಣ ಸವದಿ ಹಾಗೂ ಕೃಷ್ಣ ಪಾಲೇಮಾರ್ ಶಾಸನ ಸಭೆಯ ಅಧಿವೇಶನ ನಡೆಯುತ್ತಿದ್ದಾಗಲೇ ಮೊಬೈಲ್‌ನಲ್ಲಿ ಸೆಕ್ಸ್ ವೀಡಿಯೋ ಒಂದನ್ನು ನೋಡುತ್ತಾ ಮೈಮರೆತಿದ್ದಾಗ ಟಿವಿ ಚಾನಲ್‌ಗಳ ಕೈಗೆ ರೆಡ್ ಹ್ಯಾಂಡಾಗಿ ಸಿಕ್ಕಿಬಿದ್ದರು. ನಾಡಿನ ಜನರೆಲ್ಲಾ ಛೀ..ಥೂ... ಎಂದು ಉಗಿದರೂ ಸಂಘ ಪರಿವಾರಿಗಳು ಈ ಹಲ್ಕಟ್ ಸಚಿವರ ಬೆಂಬಲಕ್ಕೆ ನಿಂತು ತಮ್ಮ ಜನ್ಮ ಪಾವನಗೊಳಿಸಿಕೊಂಡರು.



ಈಗ ನೋಡಿದರೆ ಇನ್ನೊಂದು ಸೆಕ್ಸ್ ಹಗರಣ ಹೊರಬಂದಿದೆ. ರಾಜ್ಯ ಬಿಜೆಪಿಯ ಹೊಸ ಅಧ್ಯಕ್ಷ ಪ್ರಹ್ಲಾದ್ ಜೋಶಿ 'ಈ ಪ್ರಕರಣ ಹಾಲಪ್ಪನ ತರದ ಹಗರಣವಲ್ಲ, ಸರಿಯಾದ ತನಿಖೆಯಾಗಲಿ, ಆಮೇಲೆ ಭಟ್ಟರ ವಿಚಾರದಲ್ಲಿ ತೀರ್ಮಾನ ಮಾಡುತ್ತೇವೆ' ಎನ್ನುತ್ತಿದ್ದಾರೆ. ಆಶ್ಚರ್ಯ ಅಂದರೆ ರೇಣುಕಾಚಾರಿಯ ಸೆಕ್ಸ್ ಹಗರಣವಾದಾಗಲೂ ಬಿಜೆಪಿ ಅವನ ವಿರುದ್ಧ ಕ್ರಮ ಕೈಗೊಂಡಿರಲಿಲ್ಲ, ಅದರ ಬದಲಾಗಿ ಪಾರ್ಟಿ ನಾಯಕರಿಗೆ ಲಂಚದ ಹಣ ಕೊಟ್ಟೆ ಎಂದಾತ ಹೇಳಿದಾಗಷ್ಟೇ ಇತ್ತೀಚೆಗೆ ರೇಣುಕಾಚಾರಿಯನ್ನು ಪಾರ್ಟಿಯಿಂದ ಉಚ್ಚಾಟಿಸಿ, ಸಚಿವಗಿರಿಯಿಂದಲೂ ಓಡಿಸಲಾಯಿತು. ಇದನ್ನೆಲ್ಲಾ ನೋಡುತ್ತಿದ್ದರೆ ರಾಜ್ಯ ಬಿಜೆಪಿ ನಾಯಕರಿಗೆ ಕಾಮನ್‌ಸೆನ್ಸ್, ಬುದ್ಧಿ ವಿವೇಕಗಳೆಲ್ಲಾ ಒಂಚೂರು ಇದ್ದಂತೆ ಕಾಣುತ್ತಿಲ್ಲ, ಈಗಿನ ಸೆಕ್ಸ್ ಸಿಡಿಯಲ್ಲಿ ಟಿಬೆಟಿಯನ್ ಹುಡುಗಿಯ ಜೊತೆ ಇರುವಾತ ಶಾಸಕ ರಘುಪತಿ ಭಟ್ಟರೇ ಹೌದೆಂದು ಎಲ್ಲರೂ ಅನುಮಾನ ಪಡುತ್ತಿದ್ದಾರೆ. ಈ ಸಿಡಿ ಸುದ್ದಿ ಹೊರಬಂದ ಕೂಡಲೇ ರಘುಪತಿ ಭಟ್ಟರೂ 'ನಾನು ಈ ಬಾರಿ ಎಲೆಕ್ಷನ್‌ಗೆ ನಿಲ್ಲುವುದಿಲ್ಲ' ಎಂದು ಹೇಳಿಕೆ ನೀಡಿದ್ದಾರೆ. ಒಂದು ವೇಳೆ ಆತ ಸ್ಪರ್ಧಿಸಿದ್ದರೂ ಈ ಬಾರಿಯಂತೂ ಉಡುಪಿಯ ಜನ ಸಾಮಾನ್ಯರಿರಲಿ ಹಾರ್ಡ್‌ಕೋರ್ ಚೆಡ್ಡಿಗಳೂ ಈ ಪತ್ನಿ ಹಂತಕ ಆರೋಪಿಗೆ ಓಟು ಹಾಕುತ್ತಿರಲಿಲ್ಲ, ಹೀಗಿದ್ದಾಗಲೂ ಬಿಜೆಪಿ ನಾಯಕರಿಗೆ ರಘುಪತಿ ಭಟ್ಟರನ್ನು ಪಾರ್ಟಿಯಿಂದ ಆಚೆ ದಬ್ಬಬೇಕೆಂದು ಅನಿಸುತ್ತಿಲ್ಲ ಯಾಕೆ?

ಬಿಜೆಪಿಯ ವಿಚಿತ್ರ ಜನ

ಇವರು ಎರಡು ನಾಲಿಗೆಯ ಜನ ಎಂಬುದನ್ನು ಸಾಬೀತುಪಡಿಸಲು ಯಾರೇನು ಕಷ್ಟಪಡಬೇಕಿಲ್ಲ.

ಕಾಲೇಜು ಹುಡುಗಿಯರು ಜೀನ್ಸ್ ಪ್ಯಾಂಟ್ ಹಾಕಿದರೆ, ಪಬ್‌ಗೆ ಹೋದರೆ, ಪ್ರೇಮಿಗಳ ದಿನ ಆಚರಿಸಿದರೆ ಎಗರಿ ಬೀಳುವ ಈ ಭಾರತೀಯ ಸಂಸ್ಕೃತಿ ರಕ್ಷಕರು ಅದೇ ತಮ್ಮ ಪಾರ್ಟಿಯ ಶಾಸಕರೇ ದಿನಕ್ಕೊಂದು ಕಾಮಾಯಣ ಸೃಷ್ಟಿಸುತ್ತಿರುವಾಗಲೂ ಅದನ್ನು ಖಂಡಿಸುವುದೂ ಇಲ್ಲ, ಶಿಸ್ತು ಕ್ರಮ ಕೈಗೊಳ್ಳುವುದೂ ಇಲ್ಲ, ಈ ನಾಡಿನ ಹೆಣ್ಣುಮಕ್ಕಳ ಕೈಗೆ ಸಿಕ್ಕರೆ ಪರಕೆಯೇಟು ತಿನ್ನಬೇಕಾದಷ್ಟು ಘನಂದಾರಿ ಹೀನಕಾರ್ಯಗಳನ್ನು ಮಾಡಿಯೂ 'ಈ ಬಾರಿ ಎಲೆಕ್ಷನ್‌ನಲ್ಲಿ ಪುನಃ ಗೆದ್ದು ಅಧಿಕಾರಕ್ಕೆ ಬರುತ್ತೇವೆ' ಎಂದು ಚೆಡ್ಡಿಗಳು ಚೀರಿಕೊಳ್ಳುತ್ತಿದ್ದಾರೆ.

ಹೀಗೆ ಜಗಜ್ಜಾಹೀರಾಗುವಂತಹ ಲೋಫರ್ ಕೆಲಸ ಮಾಡುತ್ತಿರುವವರಿಗೆ, ಹಲ್ಕಟ್‌ಗಳಿಗೆ ಪುನಃ ಓಟು ಹಾಕಿ ಗೆಲ್ಲಿಸಲು ನಾಡಿನ ಮತದಾರರಿಗೆ ಏನು ಹುಚ್ಚುನಾಯಿ ಕಚ್ಚಿದೆಯಾ?

RSS ಹಾಕಿದ ಬಲೆ!

ಈಗಿನ ಸೆಕ್ಸ್ ಸಿಡಿಯಲ್ಲಿರುವ ವ್ಯಕ್ತಿಯನ್ನು ರಘುಪತಿ ಭಟ್ಟನೇ ಎಂದು ಕರಾವಳಿಯ ಪ್ರತಿಯೊಬ್ಬರೂ ಅನುಮಾನ ಪಡುತ್ತಿದ್ದಾರೆ. ಈತನ ಜೊತೆಯಲ್ಲಿರುವಾಕೆ ಓರ್ವ ನೇಪಾಳಿ ಅಥವಾ ಟಿಬೆಟಿಯನ್ ಬೆಲೆವೆಣ್ಣೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಮೊದಲೇ ಫಿಕ್ಸ್ ಮಾಡಿಕೊಂಡು ಹೋಟೆಲ್ ಒಂದಕ್ಕೆ ಈ ಜೋಡಿ ಹೋಗಿದೆ. ಆದರೆ ಇವರ ಆಗಮನಕ್ಕೂ ಮುನ್ನವೇ ಆ ಹೋಟೆಲ್ ರೂಂನ ಟಿವಿಯೊಳಗೆ ಇದ್ದ ವ್ಯವಸ್ಥೆ ಬಳಸಿಕೊಂಡು ರೂಂನಲ್ಲಿ ನಡೆಯುವ ಬಾನಗಡಿಯನ್ನು ರೆಕಾರ್ಡ್ ಮಾಡಿಕೊಳ್ಳಲು ಆರೇಂಜ್ ಮಾಡಿಕೊಳ್ಳಲಾಗಿತ್ತು.

'ಇದು ನನ್ನ ವಿರುದ್ಧ ನಡೆದಿರುವ ರಾಜಕೀಯ ಪಿತೂರಿ' ಎಂದು ಉಡುಪಿಯ ಶಾಸಕ ರಘುಪತಿ ಭಟ್ ಹೇಳಿದ್ದಾರೆ. ಇದು ನಿಜವೂ ಇರಬಹುದು. ಆದರೆ ಭಟ್ಟರು ಹೀಗೆ ಮಾಡಿ ಸಿಕ್ಕಿಬಿದ್ದಿರುವುದು ಪಿತೂರಿ ಹೇಗಾಗುತ್ತದೆ? ಇದನ್ನು ಒಂದು ವೇಳೆ ಪಿತೂರಿ ಅಂತಲೇ ಹೇಳುವುದಾದರೆ ರಘುಪತಿ ಭಟ್ಟರ ಬಿಜೆಪಿಯವರೇ ಚುನಾವಣೆಯಲ್ಲಿ ಈತನನ್ನು ಸೋಲಿಸಲು ಈ ಪಿತೂರಿ ಮಾಡಿದ್ದಾರೆಂದು ಹೇಳಬೇಕಷ್ಟೆ.


ಇದೇನೇ ಇರಲಿ, ಭಟ್ಟರು ಹೇಳಿರುವ ರಾಜಕೀಯ ಪಿತೂರಿಯ ಒಂದು ಸಾಧ್ಯತೆ ಇದ್ದರೂ ಇರಬಹುದೆನಿಸುತ್ತದೆ. ಕರಾವಳಿಯ ಸಂಘ ಪರಿವಾರಿಗಳ ಒಂದು ಗುಂಪಿಗೆ ಶಾಸಕ ರಘುಪತಿ ಭಟ್ಟರನ್ನು ರಾಜಕೀಯವಾಗಿ ಮುಗಿಸುವ ತಹತಹವಿತ್ತು, ಕೆಲ ತಿಂಗಳುಗಳಿಂದಲೂ ಭಟ್ಟನ ಚಲನವಲನಗಳ ಮೇಲೆ ಕಣ್ಣಿಟ್ಟಿದ್ದ ಈ RSS ಹೈದರಿಗೆ ಆತ ರೆಗ್ಯುಲರ್ ಆಗಿ ಮಂಗಳೂರಿನ ಒಂದು ಹೋಟೆಲ್‌ಗೆ ಹೆಂಗಸರನ್ನು ಹುಡುಕಿಕೊಂಡು ಬರುತ್ತಾನೆಂಬುದು ಗೊತ್ತಿತ್ತು, ಇದುವರೆಗೂ ಸುಮ್ಮನಿದ್ದ ಈ ಚೆಡ್ಡಿಗಳೇ ಕಳೆದ ಫೆಬ್ರವರಿ 11ನೇ ತಾರೀಖು ರಾತ್ರಿ ಹೋಟೆಲ್ ರೂಂನ ಟಿವಿಯೊಳಗೇ ಕ್ಯಾಮರಾ ಫಿಕ್ಸ್ ಮಾಡಿ ಕಾದಿದ್ದಾರೆ. ಎಂದಿನಂತೆ ಅದೇ ರೂಂಗೆ ಭಟ್ಟರ ಆಗಮನವಾಗಿದೆ. ಒಂದು ಗಂಟೆಯ ರೇಜಿಗೆಯ ದೃಶ್ಯಗಳೆಲ್ಲ ಮುಗಿದನಂತರ ಆ ಹುಡುಗಿ ತನ್ನ ಕೈಗೆ ಟಿವಿಯ ರಿಮೋಟ್ ತೆಗೆದುಕೊಂಡು ಟಿವಿ ಆನ್ ಮಾಡಲು ಯತ್ನಿಸಿದರೂ ಅದು ಚಾಲೂ ಆಗುವುದಿಲ್ಲ, ಅದೇನೆಂದರೆ ಟಿವಿಯು ತನ್ನೊಳಗಿದ್ದ ಕ್ಯಾಮರಾಗೆ ಕೆಲಸ ಕೊಟ್ಟಿತ್ತಲ್ಲ, ಆದರೆ ಭಟ್ಟನಾಗಲಿ ಆ ಹುಡುಗಿಗಾಗಲಿ ಅದರ ಬಗ್ಗೆ ಅನುಮಾನ ಬರದೆ ಪುನಃ ಒಂದಷ್ಟು ಚೇಷ್ಟೆ ಚೆಲ್ಲಾಟಗಳನ್ನು ನಡೆಸಿ ಜಾಗ ಖಾಲಿ ಮಾಡಿದ್ದಾರೆ. ಈ ಜೋಡಿ ಹೊರಹೋದ ನಂತರ ಒಳನುಗ್ಗಿದ ಚೆಡ್ಡಿಗಳು ಕ್ಯಾಮರಾವನ್ನು ಜೋಪಾನವಾಗಿ ಸಾಗಿಸಿ ಕೆಲದಿನಗಳಾದ ನಂತರ ಸೀಡಿಗೆ ಭಟ್ಟಿಯಿಳಿಸಿ ಮೀಡಿಯಾಗಳಿಗೆ ರವಾನಿಸಿದ್ದಾರೆ.

ಬಿಜೆಪಿಯನ್ನು ತಿರಸ್ಕರಿಸಲು ರಾಜ್ಯದ ಜನರೇ ನಿರ್ಧರಿಸುವಾಗ ಸಂಘ ಪರಿವಾರಿಗಳಿಗೆ ಈ ಕೆಲಸ ಮಾಡುವ ಜರೂರತ್ತೇನೇನಿತ್ತು ಎಂಬುದೇ ಈಗ ಯಕ್ಷ ಪ್ರಶ್ನೆಯಾಗಿದೆ.

ಕೆಲ ವರ್ಷಗಳ ಹಿಂದೆ ನರೇಂದ್ರ ಮೋದಿ ತನ್ನ ಪ್ರತಿಸ್ಪರ್ಧಿ ಚೆಡ್ಡಿಯೊಬ್ಬನನ್ನು ಮುಗಿಸಲು ಇದೇ ತರದ ಸೆಕ್ಸ್ ಸೀಡಿ ಹಗರಣ ಸೃಷ್ಟಿಸಿದ್ದನೆಂಬುದು ನಿಮಗೂ ನೆನಪಿರಬಹುದು. ಎಲ್ಲೆಂದರಲ್ಲಿ ಚೆಡ್ಡಿ ಬಿಚ್ಚುವ ಚೆಡ್ಡಿಗಳಿಗೆ ಅವರ ಕುಲಬಾಂಧವರೇ ಈಗ ಕಂಟಕವಾಗುತ್ತಿರುವುದು ಆಶ್ಚರ್ಯಕರವಾಗಿದೆ.

ಭಟ್ಟರ ಬಾನಗಡಿಗಳೆಷ್ಟು

ಶಾಸಕ ರಘುಪತಿ ಭಟ್ಟರ ಪತ್ನಿ ಪದ್ಮಪ್ರಿಯಾ 2008ರ ಜೂನ್ ತಿಂಗಳಲ್ಲಿ ಅನುಮಾನಾಸ್ಪದವಾಗಿ ದೆಹಲಿಯಲ್ಲಿ ಕೊಲೆಯಾಗಿದ್ದರು. ಆಗಿನ ಗೃಹ ಸಚಿವ ವಿ.ಎಸ್. ಆಚಾರ್ಯ ತಮ್ಮ ಚೆಡ್ಡಿ ಬುದ್ಧಿಯನ್ನೆಲ್ಲಾ ಖರ್ಚು ಮಾಡಿ ಈ ಹತ್ಯೆಯನ್ನು ಆತ್ಮಹತ್ಯೆಯೆಂದು ಬಿಂಬಿಸಿ ಪೊಲೀಸರ ಕೈಯನ್ನು ಕಟ್ಟಿಹಾಕಿ




ಆಕೆಗೆ ಅನ್ಯಾಯ ಮಾಡಿದ್ದರು. ಆಗಲೇ ರಘುಪತಿ ಭಟ್ಟರ ಕಚ್ಚೇ ಹರುಕತನದ ಬಗ್ಗೆ ರಾಜ್ಯದ ಜನರಿಗೆಲ್ಲಾ ಗೊತ್ತಾಗಿತ್ತು.

ಉಡುಪಿಯ ಬಡ ಮುಸ್ಲಿಂ ಹುಡುಗಿಯೊಬ್ಬಳನ್ನು ಶೋಷಿಸಿ ರಾದ್ಧಾಂತ ಮಾಡಿಕೊಂಡ ಭಟ್ಟ ಉಡುಪಿಯ ಇನ್ನೊಬ್ಬ ಹುಡುಗಿಯೊಂದಿಗೆ, ಜಿಲ್ಲಾ ಪಂಚಾಯತಿ ರಾಜಕಾರಣಿಯೊಬ್ಬಳೊಂದಿಗೂ ರಂಗೀಲಾ ವ್ಯವಹಾರಗಳನ್ನಿಟ್ಟುಕೊಂಡಿದ್ದರೆಂಬ ಪುಕಾರುಗಳಿದ್ದವು. ಇದೆಲ್ಲದರ ಮುಂದುವರೆದ ಸೀರಿಯಲ್‌ನಂತೆ ಈಗ ಸೆಕ್ಸ್ ಸಿಡಿ ಹಗರಣ ಹೊರಬಂದಿದೆ.

ಈ ಬಿಜೆಪಿಗಳಿಗೆ ನಿಜಕ್ಕೂ ಮನಮರ್ಯಾದೆ ಚೂರಾದರೂ ಉಳಿದಿದ್ದರೆ ಸಂಬಂಧಿಸಿದವರನ್ನು ಉಗಿದು ಪಾರ್ಟಿಯಿಂದ ಆಚೆ ಓಡಿಸಲಿ. ಇಲ್ಲ 'ಥೂ ಹಲ್ಕಾಗಳು' ಎಂದು ಜನರೇ ಉಗಿಯುತ್ತಾರೆ.

● ಪಾರ್ವತೀಶ



ಬಿರುಕು ಸೃಷ್ಟಿಸುವವರು ಯಾರು?
ಸಿದ್ದು V/s ಪರಮೇಶ್ವರ್?



ಟಿಕೆಟ್ ಹಂಚಿಕೆ ಕುರಿತಂತೆ ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಮತ್ತು ವಿರೋಧಿ ನಾಯಕ ಸಿದ್ದರಾಮಯ್ಯ ಮಧ್ಯೆ ಜಗಳವೇ ನಡೆಯಿತು. ಇನ್ನೇನು ಕೈಕೈ ಮಿಲಾಯಿಸುವ ಮಟ್ಟಕ್ಕೆ ಬಯ್ದಾಡಿಕೊಂಡರು. ಗೋವಾದ ಮಾಜಿ ಮುಖ್ಯಮಂತ್ರಿ ಫಲೇರೋ ಏನಾದರೂ ಮಧ್ಯ ಪ್ರವೇಶಿಸದೇ ಹೋಗಿದ್ದರೆ ಸಿದ್ದು ಮತ್ತು ಪರಮೇಶ್ವರ್ ನಡುವೆ ಫೈಟಿಂಗ್ ನಡೆದುಬಿಡುತ್ತಿತ್ತು...!

ಕೆಲ ಆಯ್ದ ಪತ್ರಿಕೆಗಳು ಮತ್ತು ನಿರ್ದಿಷ್ಟ ಸಮೂಹಗಳಿಗೆ ಸೇರಿದ ಕೆಲ ಪತ್ರಕರ್ತರ ಮೂಲಕ ಇಂಥದೊಂದು ವದಂತಿಯನ್ನು ಕಳೆದೊಂದು ವಾರದಿಂದ ತೇಲಿ ಬಿಡಲಾಗುತ್ತಿದೆ.

ಈ ರೀತಿ ಗಾಳಿ ಸುದ್ದಿ ಹಬ್ಬಿಸುತ್ತಿರುವವರ ಹಿನ್ನೆಲೆ ಮತ್ತು ಉದ್ದೇಶವೊಂದೇ. ಅದು ಹಿಂದುಳಿದ ವರ್ಗಗಳ ಭರವಸೆಯಂತಿರುವ ಸಿದ್ದು ಮತ್ತು ಶೋಷಿತ ಸಮೂಹದ ನಾಯಕ ಪರಮೇಶ್ವರ್ ಮಧ್ಯೆ ಒಡಕಿದೆಯೆಂದು ಪುಕಾರೆಬ್ಬಿಸುವುದು ಮತ್ತು ಈ ಎರಡೂ ಶೋಷಿತ ಜನಸಮೂಹಗಳ ನಡುವೆ ಕಂದಕ ತೋಡುವುದು.

ಸಿದ್ದುಗೆ ಸಣ್ಣಪುಟ್ಟ ಸಂಗತಿಗಳ ಕುರಿತಂತೆ ರೊಚ್ಚಿಗೇಳುವ ವಯಸ್ಸು ಯಾವತ್ತಿಗೋ ಕಳೆದುಹೋಗಿದೆ. ಪರಮೇಶ್ವರ್ ಕಾಂಗ್ರೆಸ್ಸೆಂಬ ಹಡಗಿರಲಿ ತಮ್ಮದೇ ದೋಣಿ ಮುಳುಗುತ್ತಿದ್ದರೂ ಸೀರಿಯಸ್ಸಾಗುವವರಲ್ಲ. ಅಂಥದರಲ್ಲಿ ಯಾರೋ ತನ್ನ ಛೇಲಾ ಒಬ್ಬನಿಗೆ ಟಿಕೆಟ್ಟು ಸಿಗಲಿಲ್ಲವೆಂದೋ, ತಾನು ಸೂಚಿಸಿದವನನ್ನು ಮತ್ತೊಬ್ಬ ವಿರೋಧಿಸಿದನೆಂದೋ ಇಬ್ಬರೂ ಪರಸ್ಪರ ಕಿತ್ತಾಡುತ್ತಾರೆಂದರೆ ಅದನ್ನು ನಂಬುವವರಷ್ಟೇ ಮೂರ್ಖರಾಗಲು ಸಾಧ್ಯ. ಅಷ್ಟಕ್ಕೂ ಸಿದ್ದು ಮತ್ತು ಪರಮೇಶ್ವರ್ ಸೇರಿಕೊಂಡು ತಮಗೆ ಬೇಕುಬೇಕಾದವರಿಗೆ ಟಿಕೆಟ್ ಕೊಡಬಹುದಾಗಿದ್ದರೆ; ಸೋನಿಯಾ ಮೇಡಂ ಏಕಿರಬೇಕು? ಕೇಂದ್ರ ಮಂತ್ರಿಗಳಾದ ಮೊಯ್ಲಿ, ಖರ್ಗೆ, ಮುನಿಯಪ್ಪ ಏನು ಕಡಬು ತಿನ್ನುತ್ತಿರುತ್ತಾರಾ? ಅಥವಾ ಆಸ್ಕರ್ ಫರ್ನಾಂಡಿಸ್ ಎಂಬ ಗರ್ಭಗುಡಿಯ ಪೂಜಾರಿಗೆ ಯಾವ ಆಶೆ-ಆಕಾಂಕ್ಷೆಗಳೂ ಇರುವುದಿಲ್ಲವಾ?

ಕಾಂಗ್ರೆಸ್ ಜಾಯಮಾನದ ಅರಿವಿಲ್ಲದವರಷ್ಟೇ ಇಂಥ ಬಾಲೀಶ ಕತೆಗಳನ್ನು ನಂಬಲು ಸಾಧ್ಯವಷ್ಟೆ. ಟಿಕೆಟ್ ಹಂಚಿಕೆ ಕುರಿತಂತೆ ಸಿದ್ದು ಮತ್ತು ಪರಮೇಶ್ವರ್‌ಗೆ ಆಧಿಪತ್ಯ ಇಲ್ಲವೆಂಬುದು ಕಾಂಗ್ರೆಸ್ ಅಂತರಂಗದ ಪ್ರತಿಯೊಬ್ಬರಿಗೂ ಚೆನ್ನಾಗಿ ಗೊತ್ತಿದ್ದರೂ ಇಂಥ ವದಂತಿಗಳು ಏಕೆ ಹುಟ್ಟಿಕೊಳ್ಳುತ್ತವೆ?

ಸಿದ್ದು ಮತ್ತು ಪರಮೇಶ್ವರ್ ಮಧ್ಯೆ ಅಭಿಪ್ರಾಯ ಭೇದಗಳಿರಬಹುದು. ಹಾಗೇ ಆಸ್ಕರ್‌ಗೂ ಮೊಯ್ಲಿಗೂ ಮುನಿಯಪ್ಪಗೂ ಮತ್ತು ಎಸ್ಸೆಂ ಕೃಷ್ಣರ ನಡುವೆಯೂ





ಅವರವರದ್ದೇ ಆದ ಹಿತಾಸಕ್ತಿಗಳಿವೆ; ಅಭಿಪ್ರಾಯ ಭೇದವೂ ಇದೆ. ಹಾಗೆಂದಮಾತ್ರಕ್ಕೆ ಮಕ್ಕಳಂತೆ ಕಿತ್ತಾಡಿಕೊಳ್ಳುತ್ತಾರೆಂದಲ್ಲ. ಮಾಮೂಲಿನಂತೆ ಈ ಬಾರಿಯೂ 60 ಮಂದಿ ಸದಸ್ಯರಿದ್ದ ಕೆಪಿಸಿಸಿ ಚುನಾವಣಾ ಸಮಿತಿಯನ್ನು ರಾಜ್ಯದ ಉಸ್ತುವಾರಿ ಹೊತ್ತ ಎಐಸಿಸಿ ಪ್ರಧಾನ ಕಾರ್ಯದರ್ಶಿ ಮಧುಸೂದನ ಮಿಸ್ತ್ರಿ ರಚಿಸಿದ್ದಾರೆ.

ಮಾಜಿ ಮಂತ್ರಿಗಳು, ಲೋಕಸಭಾ ಸದಸ್ಯರು, ಕೆಪಿಸಿಸಿ ಪದಾಧಿಕಾರಿಗಳು ಮತ್ತು ವಿವಿಧ ಘಟಕಗಳ ಮುಖ್ಯಸ್ಥರಿದ್ದ ಚುನಾವಣಾ ಸಮಿತಿ ಒಂದು ಹಂತದಲ್ಲಿ ತನ್ನದೇ ಪಟ್ಟಿಯೊಂದನ್ನು ಸೂಚಿಸಿತ್ತು, ಇದು ಪ್ರಾಥಮಿಕ ಹಂತದ ಪಟ್ಟಿಯಾದರೆ ಆನಂತರದ್ದು ಸ್ಕ್ರೀನಿಂಗ್ ಕಮಿಟಿ. ಇದಕ್ಕೆ ಗೋವಾದ ಮಾಜಿ ಮುಖ್ಯಮಂತ್ರಿ ಫಲೇರೋ ಮುಖ್ಯಸ್ಥರಾದರೆ ಕೇಂದ್ರ ಮಂತ್ರಿ ಜಿತೇಂದ್ರಸಿಂಗ್, ಮಿಸ್ತ್ರಿ ವಿರೋಧಿ ನಾಯಕ ಸಿದ್ದು ಮತ್ತು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಇದರ ಸದಸ್ಯರು. ಸಮಸ್ಯೆ ಶುರುವಾಗಿದ್ದೇ ಇಲ್ಲಿ.

ಪರಮೇಶ್ವರ್ ಕೆಪಿಸಿಸಿಗೆ ಅಧ್ಯಕ್ಷರಾದರೂ ಸಿದ್ದು ತೂಕಕ್ಕೆ ಹೋಲಿಸಿದರೆ ಇನ್ನೂ ಪಳಗಬೇಕು. ಹೇಳ ಹೆಸರಿಲ್ಲದವರನ್ನೆಲ್ಲ

ಶಿವಮೊಗ್ಗದ ಟಿಕೆಟ್ ಮರ್ಮ!

ಯಡ್ಡಿ, ಕಾಗೋಡು, ಈಶ್ವರಪ್ಪ ಮಧ್ಯೆ 'ರಹಸ್ಯ' ಒಡಂಬಡಿಕೆ ?


ಶಿವಮೊಗ್ಗದ ಈ ಮೂವರು ನಾಯಕರಲ್ಲಿ ಯಾರು ಯಾರಿಗೆ ಟೋಪಿ ಇಟ್ಟಂತಾಯ್ತೆಂಬ ಪ್ರಶ್ನೆಗೆ ಉತ್ತರವಿನ್ನೂ ಸ್ಪಷ್ಟವಾಗುತ್ತಿಲ್ಲ.

ಸಾಗರದಲ್ಲಿ ಹಿರಿಯ ಸಮಾಜವಾದಿ ನಾಯಕ ಕಾಗೋಡು ತಿಮ್ಮಪ್ಪನವರ ವಿರುದ್ಧ ಕೆಜೆಪಿಯಿಂದ ದುರ್ಬಲ ಅಭ್ಯರ್ಥಿಯನ್ನು ಹಾಕಿಸಲು ಯಡ್ಡಿ ವಿರುದ್ಧ ಕಾಂಗ್ರೆಸ್ ಸಹಾಯಹಸ್ತ ಚಾಚಿರಬಹುದೆ? ಶಿಕಾರಿಪುರದಲ್ಲಿ ಯಡ್ಡಿ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗ ಹೊರಟ ಮಾಜಿ ಎಮ್ಮೆಲ್ಸಿ ಶಾಂತವೀರಪ್ಪನನ್ನು ಯಡ್ಡಿಯೇ ಬಯಸಿ ಹಾಕಿಸಿಕೊಂಡಿದ್ದಾರಾ? ಹಾಗೇ ಶಿವಮೊಗ್ಗದಲ್ಲಿ ಈಶ್ವರಪ್ಪ ವಿರುದ್ಧ ಕಾಂಗ್ರೆಸ್ ಡಮ್ಮಿಗಳನ್ನು ಕಣಕ್ಕಿಳಿಸುವ ಮೂಲಕ ಸಾಗರದಲ್ಲಿ ಕಾಗೋಡು ಗೆಲುವಿಗೆ ಪೂರಕವಾದ ಬಜೆಪಿ 'ನಿರ್ಬಲ'ನೊಬ್ಬನನ್ನು ಈಶ್ವರಪ್ಪ ಹಾಕಿ ಋಣ ತೀರಿಸಬೇಕಾ?

ಇಂಥದೊಂದು ಅನುಮಾನ ಶಿವಮೊಗ್ಗದ ನಾಲ್ಕೂ ಪಕ್ಷಗಳ ಕಾರ್ಯಕರ್ತರನ್ನು ಕಾಡಲಾರಂಭಿಸಿದ್ದು ಶಿಕಾರಿಪುರದ ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶದ ಮೂಲಕವೆ. ಈ ಬಾರಿ ಶತಾಯಗತಾಯ ಶಿಕಾರಿಪುರದಲ್ಲಿ ಯಡ್ಡಿಯನ್ನು ಸೋಲಿಸಲೇಬೇಕೆಂಬ ಹಠತೊಟ್ಟೇ ಅಲ್ಲಿನ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಕಳೆದೆರಡು ವರ್ಷಗಳಿಂದ ಆಖಾಡಕ್ಕಿಳಿದಿದ್ದರು. ಹೇಗೂ ಬಿಜೆಪಿಯಿಂದ ಯಡ್ಡಿ ಹೊರಬಂದಿದ್ದರಿಂದ ಸಂಘ ಪರಿವಾರದ ಐದಾರು ಸಾವಿರ ಮತಗಳು ಕಮ್ಮಿಯಾದರೂ ಯಡ್ಡಿ ಸೋಲು ಕಟ್ಟಿಟ್ಟ ಬುತ್ತಿಯೆ.

ಈ ಬಾರಿ ಶಿಕಾರಿಪುರದಲ್ಲಿ ಗೆಲ್ಲುವ ಎಲ್ಲ ಅವಕಾಶಗಳೂ ಕಾಂಗ್ರೆಸ್ಸಿಗೆ ನಿಚ್ಚಳವಾಗಿದ್ದರೂ ಯಡ್ಡಿ ವಿರುದ್ಧ ಕಾಂಗ್ರೆಸ್ ಕಣಕ್ಕಿಳಿಸುತ್ತಿರುವುದು ಶಾಂತವೀರಪ್ಪ ಗೌಡ ಎಂಬ ಮಾಜಿ ಯಡ್ಡಿ ಶಿಷ್ಯನನ್ನೇ!

ನಿನ್ನೆಮೊನ್ನೆಯ ತನಕ ಬಿಜೆಪಿಯಲ್ಲಿದ್ದು, ಯಡ್ಡಿಯ ಕೃಪೆಯಿಂದಲೇ ಎಮ್ಮೆಲ್ಸಿಯಾಗಿ ಎರಡನೇ ಅವಧಿಗೆ ತನ್ನನ್ನು ಎಮ್ಮೆಲ್ಸಿ ಮಾಡಲಿಲ್ಲ ಎಂಬ ಒಂದೇ ಕಾರಣಕ್ಕೆ ಧಣಿಯ ವಿರುದ್ಧ ಮುನಿಸಿಗೆ ಬಿದ್ದು ಕಾಂಗ್ರೆಸ್ ಕದ ತಟ್ಟಿದ್ದು ಶಾಂತವೀರಪ್ಪ ಗೌಡ. ಸದ್ಯ ಕಾಂಗ್ರೆಸ್ ನಾಯಕನೆಂದೇ ಚಾಲ್ತಿಯಲ್ಲಿರುವ ಹಿರೇಕೆರೂರು ಶಾಸಕ ಬಿ.ಸಿ. ಪಾಟೀಲರಿಗೆ ಈತ ರಕ್ತಸಂಬಂಧಿ. ಬಿ.ಸಿ. ಪಾಟೀಲ್, ಶಾಮನೂರು ಮೂಲಕ ಯಡ್ಡಿ ಕೈಚಳಕ ತೋರಿಸಿ ಶಾಂತವೀರಪ್ಪಗೌಡನನ್ನೇ ಹಾಕಿಸಿಕೊಂಡಿದ್ದಾರೆಂಬುದು ಕೆಲ ಕಾರ್ಯಕರ್ತರ ಆರೋಪವಷ್ಟೆ, ಹಾಗೇ ಶಾಮನೂರು ಮೂಲಕ ಯಡ್ಡಿ ಕಾಂಗ್ರೆಸ್ ನಾಯಕ ಕಾಗೋಡು ತಿಮ್ಮಪ್ಪರನ್ನೂ ದಿಕ್ಕುತಪ್ಪಿಸಿರಲೂಬಹುದು.





ಶಾಂತವೀರಪ್ಪಗೌಡ್ರು



ಯಡ್ಡಿ ಜೊತೆಗಿದ್ದ ಹಳಬರ್‍ಯಾರೂ ಇವತ್ತು ಕೆಜೆಪಿಯಲ್ಲಿಲ್ಲ, ಮುಖ್ಯಮಂತ್ರಿಯಾದ ಮೇಲೆ ಶಿಕಾರಿಪುರದ ಜನಸಾಮಾನ್ಯರ ಸಂಪರ್ಕವನ್ನೇ ಕಳಕೊಂಡ ಯಡಿಯೂರಪ್ಪನವರ ಮನೆ ಮುಂದೆ ಈಗ ಹಿಂದಿನಂತೆ ಜನಜಂಗುಳಿಯಿಲ್ಲ, ಶಿಕಾರಿಪುರಕ್ಕೆ 3 ಸಾವಿರ ಕೋಟಿಯಷ್ಟು ಕಾಮಗಾರಿ ತಂದಿದ್ದೇನೆಂದು ಯಡ್ಡಿ ಏನೋ ಬೆನ್ನು ತಟ್ಟಿಕೊಂಡರೂ ನಡೆದ ಬೋಗಸ್ ಕಾಮಗಾರಿಗಳೇ ಅಭಿವೃದ್ಧಿಯ ಹಣೆಬರಹವನ್ನು ಹೇಳುತ್ತಿವೆ.

ಮೊನ್ನೆ ನಡೆದ ಪುರಸಭಾ ಚುನಾವಣೆಯಲ್ಲಿ ಶಿಕಾರಿಪುರದ 23 ಸ್ಥಾನಗಳ ಪೈಕಿ ಕೆಜೆಪಿ ಹದಿನೈದನ್ನು ಗೆಲ್ಲುವುದಕ್ಕೆ ತಿಣುಕಾಡಬೇಕಾಯ್ತು. ಕಾಂಗ್ರೆಸ್ ಏಳರಲ್ಲಿ ಗೆದ್ದು ಬಹುತೇಕ ಕ್ಷೇತ್ರಗಳಲ್ಲಿ ಕಮ್ಮಿ ಅಂತರದಿಂದ ಸೋತಿದ್ದು ಯಡ್ಡಿಯ ಆತಂಕವನ್ನು ಇಮ್ಮಡಿಸಿತ್ತು. ಯಡ್ಡಿ ಚೆಲ್ಲಿದ ರೊಕ್ಕಕ್ಕೆ ಹೋಲಿಸಿದರೆ ಗೆದ್ದ 15 ಸ್ಥಾನಗಳೇ ಅದರ ದುರ್ಗತಿಯ ಸಂಕೇತದಂತಿತ್ತು. ಶಿರಾಳಕೊಪ್ಪದಲ್ಲಿ ಕೆಜೆಪಿಗಿಂತಲೂ ಕಾಂಗ್ರೆಸ್‌ನ ಕೈಯೇ ಮೇಲಾಗಿತ್ತು.

ಇಂಥ ದುರ್ಗತಿಯಲ್ಲಿ ತವರು ಕ್ಷೇತ್ರ ಶಿಕಾರಿಪುರವೇ ಕೈಕೊಟ್ಟಿತೆಂದರೆ ತನ್ನ ಪಾಲಿಗದು ಸರ್ವನಾಶವೆಂಬ ಅಳುಕು ಯಡ್ಡಿಯನ್ನು ಕಾಡಿದ್ದು ಸಹಜವೇ. ಆ ಕಾಲದಿಂದಲೂ ಯಡ್ಡಿ ವಿರುದ್ಧ ಹೋರಾಡಿಕೊಂಡೇ ಬಂದ ನಗರದ ಮಾದೇವಪ್ಪ, 1999ರಲ್ಲಿ ಯಡ್ಡಿಗೇ ಮಣ್ಣು ಮುಕ್ಕಿಸಿದ್ದ ಮಹಾಲಿಂಗಪ್ಪ, ಕುರುಬರ ನಾಯಕಿ ವಿಜಯಲಕ್ಷ್ಮಿ ಕಂಚುಗಾರ್; ಇತ್ಯಾದಿ ಕಾಂಗ್ರೆಸ್ಸಿನ ಯಾರೊಬ್ಬರಿಗೆ ಟಿಕೆಟ್ ಕೊಟ್ಟರೂ ಯಡ್ಡಿ ಸೋಲು ಕಟ್ಟಿಟ್ಟಬುತ್ತಿಯೆ.

ಇದಾಗಬಾರದೆಂದರೆ ತನ್ನ ಹಳೇ ಛೇಲಾ ಶಾಂತವೀರಪ್ಪ ಗೌಡ ಕಾಂಗ್ರೆಸ್ಸಿಗೆ ಅಭ್ಯರ್ಥಿಯಾದರಷ್ಟೇ ತಾನು ಗೆಲ್ಲಲು ಸಾಧ್ಯ ಎಂಬುದು ಯಡ್ಡಿಯ ಒಳ ಹುನ್ನಾರ.

ಅಷ್ಟಕ್ಕೂ ಶಾಂತವೀರಪ್ಪ ಗೌಡ ಶುದ್ಧ ಹಸ್ತನಾಗಿದ್ದರೆ ಆ ಮಾತು ಬೇರೆ. ಬಿಜೆಪಿಯಿಂದ ಗೆದ್ದು ಪುರಸಭಾಧ್ಯಕ್ಷನಾಗಿದ್ದಾಗ ಸಾರ್ವಜನಿಕ ಉದ್ದೇಶಕ್ಕೆಂದು ಮೀಸಲಿಟ್ಟ ಜಮೀನನ್ನು ಫೋರ್ಜರಿ ಮಾಡಿ ಸೈಟು ವಿಂಗಡಿಸಿ ಮಾರಿ ಹಾಕಿದ್ದ ಪ್ರಕರಣದಲ್ಲಿ ಯಡ್ಡಿ ಶಿಷ್ಯರ ಜೊತೆಗೇ ಶಾಂತವೀರಪ್ಪ ಮೊದಲ ಆರೋಪಿ. ಆ ಕೇಸಿನಿಂದ ಮುಕ್ತನಾಗಬೇಕೆಂದರೆ ಅದಕ್ಕೆ ಯಡ್ಡಿಯ ನೆರವು ಬೇಕೇಬೇಕು. ಯಡ್ಡಿ ಗೆಲ್ಲಲು ತಾನು ಕಾಂಗ್ರೆಸ್ ಟಿಕೆಟ್ ಗಿಟ್ಟಿಸಿ ಸಹಕರಿಸಿದರಷ್ಟೇ ತಾನು ಫೋರ್ಜರಿ ಕೇಸಿನಿಂದ ಬಚಾವಾಗಬಹುದೆಂಬ ಲೆಕ್ಕಾಚಾರವೂ ಶಾಂತವೀರಪ್ಪನಿಗಿದೆ.

ಗುರುಶಿಷ್ಯನ ನಡುವಿನ ಇಂಥದೊಂದು ಒಳಒಪ್ಪಂದದ ಫಲವೋ ಏನೋ ಇಲ್ಲಿಗೆ ತಿಂಗಳ ಹಿಂದಷ್ಟೇ ಯಡಿಯೂರಪ್ಪ 'ನನ್ನಿಂದಾಗಿ ಶಾಂತವೀರಪ್ಪ ಗೌಡರಿಗೆ ಅನ್ಯಾಯವಾಗಿದ್ದು ನಿಜವೇ. ಆ ಬಗ್ಗೆ ನನಗೂ ನೋವಿದೆ. ಅವರಿಗೆ ದೇವರು ಒಳ್ಳೆಯದು ಮಾಡಲಿ ಅಂತ ಇವತ್ತಿಗೂ ಪ್ರಾರ್ಥಿಸುತ್ತೇನೆ. ಅವರ ಬಗ್ಗೆ ನನಗೆ ಅಪಾರವಾದ ಗೌರವವಿದೆ...!'

ಕಾಂಗ್ರೆಸ್ ಅಭ್ಯರ್ಥಿಯಾಗಹೊರಟ ಶಾಂತವೀರಪ್ಪ ಗೌಡ ಮತ್ತು ಯಡ್ಡಿ ನಡುವಿನ ಒಳಒಪ್ಪಂದಕ್ಕೆ ಇದಕ್ಕಿಂತ ಸಾಕ್ಷಿ ಬೇಕೆ?

ಹಾಗಂತ ತನ್ನನ್ನು ಗೆಲ್ಲಿಸಲು ನೆರವಾದ ಕಾಂಗ್ರೆಸ್ಸಿಗೆ ಯಡ್ಡಿ ಪ್ರತ್ಯುಪಕಾರ ಸಲ್ಲಿಸಲೇಬೇಕಲ್ಲವೆ? ಬಹುಶಃ ಅದಕ್ಕೇ ಇರಬೇಕು ಸಾಗರದಲ್ಲಿ ಕಾಗೋಡು ವಿರುದ್ಧ ಕೆಜೆಪಿಯಿಂದ ಜಯಂತ್ ಎಂಬ ಬ್ರಾಹ್ಮಣನನ್ನು ಯಡ್ಡಿ ಹಾಕಿದ್ದಾರೆ. ಜಯಂತ್ ಹವ್ಯಕರ ಓಟು ಕಿತ್ತಷ್ಟೂ ಬಿಜೆಪಿಯ ಓಟ್ ಬ್ಯಾಂಕ್ ಸೊರಗುತ್ತದೆ.

ಶಿಕಾರಿಪುರದಲ್ಲಿ ಕಾಂಗ್ರೆಸ್ ಮತ್ತು ಕೆಜೆಪಿ ಮಧ್ಯೆ ರಹಸ್ಯ ಒಡಂಬಡಿಕೆಯಾದಂತೆಯೇ ಶಿವಮೊಗ್ಗದಲ್ಲೂ ಕಾಂಗ್ರೆಸ್ ಮತ್ತು ಬಜೆಪಿ ಮಧ್ಯೆ ಈಶ್ವರಪ್ಪ ಡೀಲೊಂದನ್ನು ಕುದುರಿಸಿದಂತಿದೆ. ಈಶ್ವರಪ್ಪ ಏನೇ ಸರ್ಕಸ್ ಮಾಡಿದರೂ ಈ ಬಾರಿ ಕೆಜೆಪಿಯ ರುದ್ರೇಗೌಡರ ಮುಂದೆ ನೀರು ಕುಡಿಯಲೇಬೇಕು. ಕಳೆದ ಬಾರಿ ಕಾಂಗ್ರೆಸ್ಸಿನಿಂದ ಇಸ್ಮಾಯಿಲ್ ಖಾನ್ ಎಂಬ ಮುಸ್ಲಿಂ ಅಭ್ಯರ್ಥಿಯನ್ನು ಹಾಕಿಸಿಕೊಂಡು ಹೇಗೋ ಗೆಲುವು ಸಾಧಿಸಿದ್ದ ಈಶ್ವರಪ್ಪನಿಗೆ ಈ ಬಾರಿ ಕಾಂಗ್ರೆಸ್ಸಿನಿಂದ ಬ್ರಾಹ್ಮಣ ಅಭ್ಯರ್ಥಿ ಇದ್ದರೇನೇ ಲಾಭ.

ಇದಕ್ಕೆ ಕಾಂಗ್ರೆಸ್ಸಿಗೆ ಸಿಕ್ಕಿರುವುದು ಆರ್. ದಿವಾಕರ್ ಎಂಬ ಮಾಜಿ ಯಡ್ಡಿ ಶಿಷ್ಯ. ಹಾಗೆ ನೋಡಿದರೆ ಶಿವಮೊಗ್ಗದ ಬ್ರಾಹ್ಮಣರ ನಾಯಕ ಕೆ.ಬಿ.ಪ್ರಸನ್ನ ಕುಮಾರ್ ಎಲ್ಲ ರೀತಿಯಲ್ಲೂ ಈಶ್ವರಪ್ಪಗೆ ಸರಿಸಾಟಿಯಾಗಬಲ್ಲ, ಒಂದಲ್ಲ ಮೂರು ಬಾರಿ ಬೇರೆಬೇರೆ ವಾರ್ಡುಗಳಿಂದ ಗೆದ್ದು ಕೌನ್ಸಿಲರ್ ಆದ ಕೆ.ಬಿ. ಪ್ರಸನ್ನಕುಮಾರ್ ಆ ಕಾಲದಿಂದಲೂ ಈಶ್ವರಪ್ಪ ವಿರುದ್ಧ ಸೆಡ್ಡು ಹೊಡೆಯುತ್ತಲೇ ಬಂದವರು. ಆದರೆ ಕೆ.ಬಿ. ಪ್ರಸನ್ನಕುಮಾರ್‌ಗೆ ಕಾಂಗ್ರೆಸ್ ಟಿಕೆಟ್ಟು ಕೊಡಬೇಕಲ್ಲ?

ಕೆ.ಬಿ. ಪ್ರಸನ್ನಕುಮಾರ್‌ಗೆ ಟಿಕೆಟ್ಟು ತಪ್ಪಿಸಲೆಂದೇ ವಕೀಲ ದಿವಾಕರ್‌ನನ್ನು ಕಾಂಗ್ರೆಸ್ಸಿಗೆ ಕರೆತಂದಿದ್ದಾರೆಂಬುದು ಕಾಗೋಡು ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರಿಗಿರುವ ಅಸಮಾಧಾನ. ಹಾಗೊಮ್ಮೆ ಕೇಬಿಗೇ ಟಿಕೆಟ್ ಕೊಡಬೇಕಾಗಿ ಬಂದರೆ ಅದಕ್ಕೆ ಅವರದೇ ಜಾತಿಯ ದಿವಾಕರ್‌ರನ್ನು ಅಡ್ಡ ತಂದು ಅಂತಿಮವಾಗಿ ಕುರುಬರ ಆರ್. ಪ್ರಸನ್ನಕುಮಾರ್ ಎಂಬ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷನಿಗೆ ಟಿಕೆಟ್ ಕೊಡುವ ಹುನ್ನಾರವೂ ಕಾಂಗ್ರೆಸ್ಸಿಗೆ ಇದೆಯಂತೆ. ಏಕೆಂದರೆ ಕುರುಬರ ಪ್ರಸನ್ನಕುಮಾರ್ ಹಗಲು ಹೊತ್ತಿನಲ್ಲಿ ಕಾಂಗ್ರೆಸ್ ಕಚೇರಿಯಲ್ಲಿದ್ದರೆ ರಾತ್ರಿ ಹೊತ್ತು ಈಶ್ವರಪ್ಪನವರ ಮನೆಯಲ್ಲಿರುತ್ತಾರೆ! ಈ ನಡುವೆ ಜೆಡಿಎಸ್ ಅಭ್ಯರ್ಥಿ ಶ್ರೀಕಾಂತ್ ಸಹ ಕುರುಬರೇ ಆದಕಾರಣ ಮತ ವಿಭಜನೆಯಾಗಿ ಕೊನೆಗೆ ಅದು ಈಶ್ವರಪ್ಪಗೆ ಅನುಕೂಲವಾದೀತೆಂಬ ತರ್ಕವೂ ಇದೆ. ಇಲ್ಲಿ ಇದ್ದುದರಲ್ಲಿ ಶ್ರೀಕಾಂತ್ ಯೋಗ್ಯ ಅಭ್ಯರ್ಥಿ.

ಕೆ.ಬಿ. ಪ್ರಸನ್ನಕುಮಾರ್‌ಗೆ ಟಿಕೆಟ್ ತಪ್ಪಿಸಿದ್ದಕ್ಕೆ ಪ್ರತಿಯಾಗಿ ಕಾಗೋಡು ವಿರುದ್ಧ ಸಾಗರದಲ್ಲಿ ಈಶ್ವರಪ್ಪ ಬಿಜೆಪಿಯಿಂದ ಡಮ್ಮಿಯೊಬ್ಬನನ್ನು ಹಾಕಲೇಬೇಕಲ್ಲವೆ? ಸಾಗರಕ್ಕೆ ಬಿಜೆಪಿಯಿಂದ ಯಾರಾಗುತ್ತಾರೆಂಬುದಷ್ಟೇ ಸದ್ಯ ಉಳಿಕೆಯ ಪ್ರಶ್ನೆ.

ಶಿವಮೊಗ್ಗದ ಮೂರು ಪಕ್ಷಗಳ ಮೂವರು ದಿಗ್ಗಜರ ಮಧ್ಯೆ ಒಳ ಒಪ್ಪಂದವೆಂಬುದು ಹೀಗೂ ಉಂಟೆ?


ರಾಜ್ಯ ಕೆಪಿಸಿಸಿಯ ಪದಾಧಿಕಾರಿಗಳನ್ನಾಗಿ ...ಾಗಲೇ ಅದು ಸಾಬೀತಾಗಿತ್ತು. ಈಗ ಟಿಕೆಟ್ ...ವಿಷಯದಲ್ಲೂ ಇದೇ ಪರಮೇಶ್ವರ್ ಪಟಾಲಮ್ಮು ...ಯಿತು. ಈ ಪೈಕಿ ವೇಣುಗೋಪಾಲ್ ಎಂಬ ...ಶ್ವರ್ ಛೇಲಾ ಒಬ್ಬನಂತು ತಾನೇ ಟಿಕೆಟ್ ...ತ್ತೇನೆಂದು ಕಂಡಕಂಡವರನ್ನೆಲ್ಲ ಕಟ್ಟಿಕೊಂಡು ...ಡಾಡಿದ. ಮೂಲತಃ ಕೋಲಾರದ ಕೆ.ಹೆಚ್. ...ಪ್ಪನವರ ಭಟ್ಟಂಗಿಯಂತಿದ್ದ ವೇಣುಗೋಪಾಲ್ ... ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷನಾಗಿದ್ದ ...ಯಲ್ಲಿ ಹಿಂದುಳಿದವನಾದರೂ ಡೀಲು ...ಲ್ಲಿ ನಿಷ್ಣಾತನ. ಅದೇನೆಂದು ಪರಮೇಶ್ವರ್ ಈತನನ್ನು ...ಮ ಹಚ್ಚಿಕೊಂಡರೋ ಗೊತ್ತಿಲ್ಲ. ಬಹುಶಃ ಅದು ...ರ್‌ರ ದೌರ್ಬಲ್ಯವೂ ಇದ್ದೀತು. ಇದು ಕೆಪಿಸಿಸಿ ...ದಲ್ಲಿ ಎಂಥಾ ಹಾವಳಿಯೆಬ್ಬಿಸಿತೆಂದರೆ; ...ಗೋಪಾಲನೇ ಪರಮೇಶ್ವರ್‌ರ ಅಧಿಕೃತ ಏಜೆಂಟ್, ... ಟಿಕೆಟ್ ಬೇಕೆಂದರೆ ಈತನನ್ನು ಹಿಡಕೊಂಡರೆ ...ತ ಹೇಳಿದ ಹಾಗೇ ಪರಮೇಶ್ವರ್ ಕೇಳುತ್ತಾರೆ; ... ಟಿಕೆಟ್ ಆಕಾಂಕ್ಷಿಗಳ ವಲಯದಲ್ಲೊಂದು ...ತೂ ವ್ಯಾಪಿಸಿಬಿಟ್ಟಿತು.

...ನ್ನೊಂದೆಡೆ, ಲಕ್ಷ-ಕೋಟಿಗಳ ಲೆಕ್ಕದಲ್ಲಿ ಲಂಚ ...ದರೂ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಬೇಕೆಂದು ಹಠಕ್ಕೆ ...ಯಲ್ ಎಸ್ಟೇಟ್ ಖದೀಮರು, ನೆಲಗಳ್ಳರು, ರೊಕ್ಕಸ್ಥ ...ಗಳ ಗುಂಪೊಂದು ವೇಣುಗೋಪಾಲನನ್ನು ...ದು ಲಾಬಿಗಿಳಿಯಿತು. ಈ ಪೈಕಿ ಕುಖ್ಯಾತ ನೆಲಗಳ್ಳ ...ಣ್ಣನ ಛೇಲಾ ಯುಬಿ ವೆಂಕಟೇಶನೆಂಬ ಕುಬೇರನೂ ...ಬಾನ್ಯತಾ ಟೆಕ್‌ಪಾರ್ಕ್ ಮತ್ತದರ ಧಣಿ ರೆಡ್ಡಿ ... ಸೇವೆಗೆ ನಿಂತೇ ಕುಬೇರನಾದ ಯು.ಬಿ. ...ನಿಗೆ ಪದ್ಮನಾಭನಗರ ಅಥವಾ ಜಯನಗರದಿಂದ ... ಅಭ್ಯರ್ಥಿಯಾಗುವಾಸೆ. ಕಳೆದೆರಡು ತಿಂಗಳಿಂದ ...ಜಯನಗರಕ್ಕೆ ಅಧಿಕೃತ ಅಭ್ಯರ್ಥಿಯೆಂಬಂತೆ ...ಗೋಪಾಲನನ್ನು ಕಟ್ಟಿಕೊಂಡು ಓಡಾಡಿದ. ಇದು ...ಕಾಂಗ್ರೆಸ್ ಕಾರ್ಯಕರ್ತರನ್ನು ಕೆರಳಿಸಿತು. ಪರಮೇಶ್ವರ್‌ಗೆ ...ಗೋಪಾಲನ ಮೂಲಕ ದುಡ್ಡು ಕೊಟ್ಟರೆ ಯಾರು ಬೇಕಾದರೂ ಟಿಕೆಟ್ ಗಿಟ್ಟಿಸಬಹುದೆಂಬ ಸುದ್ದಿ ಮತ್ತಷ್ಟು ದಟ್ಟವಾಯಿತು.

ಇದೇ ಹೊತ್ತಿಗೆ ಜಿ.ಸಿ. ಚಂದ್ರಶೇಖರ್ ಎಂಬ ಮತ್ತೊಬ್ಬ ಪರಮೇಶ್ವರ್ ಶಿಷ್ಯ ತಾನೇ ಬೆಂಗಳೂರು ದಕ್ಷಿಣದ ಕಾಂಗ್ರೆಸ್ ಅಭ್ಯರ್ಥಿಯೆಂದು ಪೋಜು ಕೊಟ್ಟ. ಅಲ್ಲಿಗೆ ಮಾಜಿ ಸಂಸದೆ ತೇಜಸ್ವಿನಿ ಬೇರೆ ಕಣ್ಣಿಟ್ಟಾಗಿತ್ತು. ಚಂದ್ರಶೇಖರ್‌ನನ್ನು ಪರಮೇಶ್ವರ್ ಜೊತೆ ಹಾಕಿಕೊಂಡು ಸುತ್ತಾಡಿದ್ದನ್ನು ಕಂಡಿದ್ದೇ 'ಪರಮೇಶ್ವರ್ ಕಾಂಗ್ರೆಸ್ ಟಿಕೆಟ್ಟುಗಳನ್ನು ಹರಾಜಿಗಿಟ್ಟಿದ್ದಾರೆ' ಎಂದು ತೇಜಸ್ವಿನಿ ಶಿಷ್ಯರೂ ದೂರಿದ್ದಾರೆ.

ಇದಲ್ಲದೆ ಬಸವರಾಜು ಎಂಬ ಮತ್ತೊಬ್ಬ ಪರಮೇಶ್ವರ್ ಛೇಲಾ, ಜೊತೆಗೆ ಜಯಸಿಂಹನೆಂಬ ಬ್ರಾಹ್ಮಣರ ಸಂಘದ ಆಸಾಮಿಯೊಬ್ಬನೂ ಪರಮೇಶ್ವರ್ ಶಿಷ್ಯರೆಂದೇ ಹೇಳಿಕೊಂಡು ಟಿಕೆಟ್ ದಂಧೆಗಿಳಿದಿದ್ದಾರೆ. ಮಹದೇವಪುರಕ್ಕೆ ಲಿಂಬಾವಳಿ ವಿರುದ್ಧ ಬಂಡಾಯ ಸಾಹಿತಿ ಎಲ್. ಹನುಮಂತಯ್ಯನವರ ಹೆಸರು ಕೇಳಿಬರುತ್ತಿರುವಾಗಲೇ ಪರಮೇಶ್ವರ್ ಶಿಷ್ಯ ವೇಣುಗೋಪಾಲ 50 ಲಕ್ಷಕ್ಕೆ ಎ.ಸಿ. ಶ್ರೀನಿವಾಸ್ ಎಂಬ ರಿಯಲ್ ಎಸ್ಟೇಟ್ ಆಸಾಮಿಯ ಪರ ಡೀಲು ಕುದುರಿಸಿದ್ದಾನೆಂಬ ಪುಕಾರೆದ್ದಿದೆ. ಕೆ.ಆರ್. ಪುರಂ. ಕ್ಷೇತ್ರಕ್ಕೆ ಭೈರತಿ ಬಸವರಾಜು ಎಂಬ ಮತ್ತೊಬ್ಬ ನೆಲಗಳ್ಳ, ಹೆಬ್ಬಾಳಕ್ಕೆ ಮಾಜಿ ಕೌನ್ಸಿಲರ್ ರಾಜಣ್ಣ, ರಾಜರಾಜೇಶ್ವರಿ ನಗರಕ್ಕೆ ಕೃಷ್ಣಮೂರ್ತಿ; ಇತ್ಯಾದಿ ಯಾರ್‍ಯಾರು ಕಾಸು ಕೊಟ್ಟು ಕಾಂಗ್ರೆಸ್ ಟಿಕೆಟ್ ಖರೀದಿಗಿಳಿದಿದ್ದರೋ ಅವರೆಲ್ಲ ಪರಮೇಶ್ವರ್ ಛೇಲಾ ವೇಣುಗೋಪಾಲನ ಮೂಲಕವೇ ಡೀಲಿಗಿಳಿದಿದ್ದಾರೆಂಬ ಪುಕಾರೆದ್ದಿದೆ.

ಸಹಜವಾಗೇ ಪರಮೇಶ್ವರ್ ಮತ್ತವರ ಛೇಲಾಗಳ ವಿರುದ್ಧ ಕೆಲ ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತರು ಸಿದ್ದರಾಮಯ್ಯನವರ ಬಳಿ ದೂರಿಕೊಂಡಿದ್ದಾರೆ. ಅದೇ ರೀತಿ ರಾಹುಲ್ ಮತ್ತು ಎಐಸಿಸಿ ಪದಾಧಿಕಾರಿಗಳಿಗೂ ಕಾಂಗ್ರೆಸ್ ಟಿಕೆಟ್ ಮಾರಾಟಕ್ಕಿಟ್ಟ ಬಗ್ಗೆ ದೂರು ಹೋಗಿದೆ. ಇದು ಕೆಪಿಸಿಸಿಯ ಎಲೆಕ್ಷನ್ ಕಮಿಟಿ ಮತ್ತು ಆನಂತರದ ಸ್ಕ್ರೀನಿಂಗ್ ಕಮಿಟಿ ಸಭೆಗಳಲ್ಲೂ ಪ್ರತಿಧ್ವನಿಸಿ. ಹೆಬ್ಬಾಳಕ್ಕೆ ಮಾಜಿ ಮಂತ್ರಿ ರೇವಣ್ಣ, ಮೈಸೂರಿನ ಕೃಷ್ಣರಾಜಕ್ಕೆ ಸೋಮಶೇಖರ್, ಮೈಸೂರಿನ ತನ್ವೀರ್‌ಸೇಠ್ ವಿರುದ್ಧ ರಿಜ್ವಾನ್; ಇತ್ಯಾದಿ ತಮ್ಮದೇ ಬೆಂಬಲಿಗ ಪರವಾಗಿ ಸಿದ್ದು ಪಟ್ಟು ಹಿಡಿದದ್ದುಂಟು.



ಅದೇ ರೀತಿ ಪರಮೇಶ್ವರ್ ಕೂಡ ತನ್ನ ಪರಿಚಿತರು, ಬೆಂಬಲಿಗರ ಪರ ವಹಿಸಿ ಮಾತಾಡಿದ್ದೂ ಉಂಟು. ಹಾಗೆಂದ ಮಾತ್ರಕ್ಕೆ ಅದು ಕಿತ್ತಾಡುವ ಮಟ್ಟಕ್ಕಾಗಲಿ, ಜಗಳದ ಹಂತಕ್ಕಾಗಲಿ ಮುಟ್ಟಲು ಸಾಧ್ಯವೇ ಇಲ್ಲ. ಏಕೆಂದರೆ ಯಾರೆಷ್ಟೇ ಒತ್ತಡ, ಪ್ರಭಾವ ತಂದರೂ ಅದನ್ನು ಅಂತಿಮವಾಗಿ ನಿರ್ಧರಿಸುವುದು ಕಾಂಗ್ರೆಸ್ ಹೈಕಮಾಂಡ್ ಮತ್ತು ಸೋನಿಯಾ ಮೇಡಮ್!

ಏನೇ ಸ್ಕ್ರೀನಿಂಗ್ ಕಮಿಟಿ, ಎಲೆಕ್ಷನ್ ಕಮಿಟಿಗಳಿದ್ದರೂ ಹೈಕಮಾಂಡ್ ಟಿಕೆಟ್ಟಿಗೆ ಮಾನದಂಡವಾಗಿ ಬಳಸುವುದು ಇಂಟಲಿಜೆನ್ಸ್ ವರದಿಯನ್ನು. ಈಗಾಗಲೇ ಹೈಕಮಾಂಡ್ ಮೂರು ಹಂತದಲ್ಲಿ ಇಂಟಲಿಜೆನ್ಸ್ ವರದಿಯನ್ನು ಪಡೆದಾಗಿದೆ. ಕೆಜೆಪಿ ಹುಟ್ಟುವುದಕ್ಕೂ ಮುನ್ನ, ಕೆಜೆಪಿ ಮತ್ತು ಬಿಎಸ್‌ಆರ್ ಕಾಂಗ್ರೆಸ್‌ಗಳ ಉದ್ಭವದ ನಂತರ ಮತ್ತು ಚುನಾವಣೆ ಘೋಷಣೆಯಾದ ನಂತರ ವಿವಿಧ ಹಂತಗಳಲ್ಲಿ ಆಯಾ ಕ್ಷೇತ್ರಗಳ ಪರಿಸ್ಥಿತಿ ಮತ್ತು ಬೆಳವಣಿಗೆಗೆ ತಕ್ಕಂತೆ ಇಂಟಲಿಜೆನ್ಸ್ ವರದಿಗಳನ್ನು ಮುಂದಿಟ್ಟುಕೊಂಡೇ ಹೈಕಮಾಂಡ್ ಅಖಾಡಕ್ಕಿಳಿದಿದೆ.

ಸಿದ್ದು ಮತ್ತು ಪರಮೇಶ್ವರ್ ಏನೇ ಪಟ್ಟಿಗಳನ್ನು ಆಯ್ಕೆ ಮಾಡಿಕೊಟ್ಟರೂ ಅದು ಹೈಕಮಾಂಡ್ ಬಳಿಯಿರುವ ಇಂಟಲಿಜೆನ್ಸ್ ವರದಿಗೆ ತಾಳೆಯಾಗಬೇಕಷ್ಟೆ. ಇದರ ಹೊರತಾಗಿಯೂ ತಮ್ಮ ಬೆಂಬಲಿಗರಿಗೆ ಟಿಕೆಟ್ ಕೊಡಿಸಬೇಕೆಂದರೆ ಹೆಚ್ಚೆಂದರೆ ಅರ್ಧ ಡಜನ್ನಷ್ಟೆ. ಅದಕ್ಕೂ ಮೀರಿ ಸೋಲುವ ಅಭ್ಯರ್ಥಿಗಳಿಗೆ ಸಿದ್ದುವಾಗಲಿ, ಪರಮೇಶ್ವರ್ ಆಗಲಿ ಟಿಕೆಟ್ ಕೊಡಿಸುವುದು ಸಾಧ್ಯವೇ ಇಲ್ಲ.

ಹೀಗಿರುವಾಗ ಸಿದ್ದು ಮತ್ತು ಪರಮೇಶ್ವರ್ ಟಿಕೆಟ್ ಹಂಚಿಕೆ ವಿಷಯದಲ್ಲಿ ಕಿತ್ತಾಡಿಕೊಂಡರೆಂಬುದಕ್ಕೆ ಯಾವ ಅರ್ಥವೂ ಇಲ್ಲ, ಆಧಾರವೂ ಇಲ್ಲ. ಹಾಗಿದ್ದೂ ಕೆಲ ಹಿತಾಸಕ್ತಿಗಳಿಗೆ ಸಿದ್ದು ಮತ್ತು ಪರಮೇಶ್ವರ್ ಮಧ್ಯೆ ಘರ್ಷಣೆ ಹುಟ್ಟಿ ಹಾಕುವುದರಲ್ಲೇ ವಿಪರೀತ ಆಸಕ್ತಿ. ಏಕೆಂದರೆ ಕರ್ನಾಟಕ ರಾಜಕಾರಣದಲ್ಲಿ ಅರಸು ಕಾಲದ ಸಾಮಾಜಿಕ ಸನ್ನಿವೇಶವೊಂದು ಸದ್ದಿಲ್ಲದೆ ವ್ಯಾಪಿಸುತ್ತಿದೆ. ದಲಿತರು, ಹಿಂದುಳಿದವರು, ಅಲ್ಪಸಂಖ್ಯಾತರೆಲ್ಲ ಮೇಲ್ಜಾತಿ ಅಟ್ಟಹಾಸದ ವಿರುದ್ಧ ಒಂದಾಗತೊಡಗಿದ್ದಾರೆ. ಪ್ರತ್ಯಕ್ಷವೋ ಪರೋಕ್ಷವೋ 'ಅಹಿಂದ'ದ ಗಾಳಿ ದಿನೇ ದಿನೇ ಬಲವಾಗತೊಡಗಿದೆ. ಇದನ್ನು ಸಹಿಸದ ಹಿತಾಸಕ್ತಿಗಳಿಗೆ ಸಿದ್ದು ಮತ್ತು ಪರಮೇಶ್ವರ್ ಕಿತ್ತಾಡಿದರಂತೆ, ಜಗಳವಂತೆ, ಬೈದಾಡಿಕೊಂಡರಂತೆ ಎಂಬ ವದಂತಿ ಹಬ್ಬಿಸುವುದರಲ್ಲೇ ಲಾಭವಿದೆ.

ಏಕೆಂದರೆ ಅಹಿಂದ ವರ್ಗ ಒಗ್ಗಟ್ಟಾಯಿತೆಂದರೆ ಅದು ಮೇಲ್ಜಾತಿಗಳ ಪಕ್ಷಗಳ ಬುಡಕ್ಕೆ ಬೆಂಕಿ ಬಿದ್ದಂತಾಗುತ್ತದೆ.

● ರಾ. ಸೋಮನಾಥ್

...ಲಹಂಕ: ಗಂಟಿಗಾನಹಳ್ಳಿಗೂ ...ಶ್ವನಾಥ್‌ಗೂ ಏನು ವ್ಯತ್ಯಾಸ?



ಯಲಹಂಕ ಶಾಸಕ ವಿಶ್ವನಾಥ್ ವಿರುದ್ಧ ಈ ಬಾರಿ ...ತರೂ ಗೆಲುವು ಗ್ಯಾರಂಟಿಯೆಂಬುದು ಅಲ್ಲಿನ ...ೇಶದ ರೀತಿ. ವಿಶ್ವನಾಥ್ ಮಾಡಿಕೊಂಡ ...ಉ ಮತ್ತು ಸ್ವಯಂಕೃತಾಪರಾಧಗಳೇ ಅವರ ವಿರುದ್ಧ ...ಅಭ್ಯರ್ಥಿಯೊಬ್ಬನನ್ನು ನಿರಾಯಾಸವಾಗಿ ಗೆಲ್ಲಿಸಿ... ಆದರೆ ಕಾಂಗ್ರೆಸ್ಸಿನಿಂದ ಗಂಟಿಗಾನಹಳ್ಳಿ ಕೃಷ್ಣಪ್ಪನೆಂಬ ...ಪಾಳೇಗಾರನಿಗೋ ಮುತ್ತುಗದಹಳ್ಳಿ ...ಬಿ ಕೃಷ್ಣನೆಂಬ ರಿಯಲ್ ಎಸ್ಟೇಟ್ ...ಗೋ ಟಿಕೆಟ್ಟು ಕೊಟ್ಟರೆಂದರೆ ...ರಿಗಿಂತಲೂ ಹಾಲೀ ಶಾಸಕ ...ರೇ ನೂರು ಪಾಲು ವಾಸಿಯೆಂಬಂತೆ ... ಹಾಕುತ್ತಿದ್ದಾರೆ.

...ಂದರೆ ದೊಡ್ಡ ಬಳ್ಳಾಪುರದ ಮಾಜಿ ...ಗಂಟಿಗಾನಹಳ್ಳಿ ಕೃಷ್ಣಪ್ಪನಾಗಲಿ, ಮತ್ತೊಬ್ಬ ... ಟಿಕೆಟ್ ಆಕಾಂಕ್ಷಿ ಗೋಪಾಲ ...ಲಿ ಹಾಲೀ ಶಾಸಕ ವಿಶ್ವನಾಥ್‌ಗಿಂತ ...ರೀತಿಯಲ್ಲೂ ಭಿನ್ನವೆನಿಸುವುದಿಲ್ಲ.



ಗೋಪಿನಾಥ್

...ದಲು ಕಾಂಗ್ರೆಸ್ಸಿನಲ್ಲಿದ್ದು ಒಂದಲ್ಲ ಮೂರು ಬಾರಿ ...ಬಳ್ಳಾಪುರಕ್ಕೆ ಕಾಂಗ್ರೆಸ್ ಟಿಕೆಟ್ಟಿನಿಂದ ನಿಂತಾಗಲೂ ...ಗೆಲ್ಲಲಾಗಲಿಲ್ಲ. ಆ ನಂತರ ಜೆಡಿಎಸ್‌ಗೆ ಬಂದು ... ಸಲ್ಲದೆ ಕೊನೆಗೆ ಬಿಜೆಪಿಯಿಂದ ನಿಂತು ...ಬಳ್ಳಾಪುರಕ್ಕೆ ಶಾಸಕನಾದ ಗಂಟಿಗಾನಹಳ್ಳಿಗೀಗ ಎಂಬತ್ತರ ವೃದ್ಧಾಪ್ಯ. ಕಣ್ಣು ಮಬ್ಬಾಗಿ ಕಿವಿ ಮಂದವಾದರೂ ನಾಗರಿಕ ಲಕ್ಷಣಗಳು ಮೈಗೂಡಲೇ ಇಲ್ಲ. ಅದೇ ಪಾಳೇಗಾರಿ ದವಲತ್ತು. ಇನ್ನು ಗೋಪಾಲಕೃಷ್ಣ ತೋಳ್ಬಲ ಮತ್ತು ರಿಯಲ್ ಎಸ್ಟೇಟ್ ಪಾಂಡಿತ್ಯದಲ್ಲಿ ಶಾಸಕ ವಿಶ್ವನಾಥ್‌ಗೆ ಸರಿಸಾಟಿಯಾಗಿ ನಿಲ್ಲಬಲ್ಲ! ಆದರೆ ಯಲಹಂಕದ ಜನ ಬಯಸುವುದು ನೆಮ್ಮದಿ ಮತ್ತು ಶಾಂತಿಯನ್ನು. ಇಲ್ಲಿನ ಬಹುಸಂಖ್ಯಾತ ವಕ್ಕಲಿಗರಿಗೊಬ್ಬ ಸಜ್ಜನ ಮತ್ತು ನಾಗರಿಕ ಅಭ್ಯರ್ಥಿ ಸಿಕ್ಕರೆ ಕಣ್ಣು ಮುಚ್ಚಿ ಓಟು ಹಾಕುತ್ತಾರೆ. ಇಂಥದೊಂದು ನಿರ್ಧಾರಕ್ಕೆ ಯಲಹಂಕ ಜನಸಾಮಾನ್ಯರು ಬರುವುದಕ್ಕೂ ಕಾರಣವಿದೆ. ಅದು ಮಾಜಿ ಶಾಸಕ ಸೂರ್ಯನಾರಾಯಣ ಗೌಡರ ಮಗ ಎಸ್.ಗೋಪಿನಾಥ್!

ಯಲಹಂಕ ಕ್ಷೇತ್ರ ಪರಿಶಿಷ್ಟ ಮೀಸಲಾತಿಗೆ ಒಳಪಡುವುದಕ್ಕೂ ಮುನ್ನ ಅಂದರೆ 1972ರಿಂದ 1977ರವರೆಗೆ ಕಾಂಗ್ರೆಸ್ಸಿನಿಂದ ಗೆದ್ದು ಶಾಸಕರಾಗಿದ್ದ ಎ.ಎಸ್. ಸೂರ್ಯನಾರಾಯಣ ಗೌಡರು ಇವತ್ತು ಬದುಕಿಲ್ಲ. ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಆ ಕಾಲಕ್ಕೆ ರಾಷ್ಟ್ರಕವಿ ಕುವೆಂಪು ಸಹಪಾಠಿಯಾಗಿದ್ದ ಸೂರ್ಯನಾರಾಯಣ ಗೌಡರು ಸ್ವಾತಂತ್ರ್ಯ ಹೋರಾಟದ ಮೂಲಕವೇ ಕಾಂಗ್ರೆಸ್ಸಿಗೆ ಕಾಲಿಟ್ಟವರು. ಜಾತಿಯಲ್ಲಿ ವಕ್ಕಲಿಗರಾಗಿದ್ದರೂ ಕಾಂಗ್ರೆಸ್ ಆದರ್ಶಕ್ಕನುಗುಣವಾಗಿ ಶಾಸಕಾಂಗದ ಪರಿಶಿಷ್ಟ ಜಾತಿ-ಪರಿಶಿಷ್ಟ ಬುಡಕಟ್ಟುಗಳ ಕಲ್ಯಾಣ ಸಮಿತಿಯ ಸದಸ್ಯರಾಗಿ ದೇಶಾದ್ಯಂತ ಅಧ್ಯಯನ ನಡೆಸಿ ಬಂದವರು. ಅರಸು ಮುಖ್ಯಮಂತ್ರಿಯಾಗಿದ್ದ ಕಾಲಕ್ಕೇ ಕಾಂಗ್ರೆಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರಾಗಿದ್ದ ಸೂರ್ಯನಾರಾಯಣ ಗೌಡ ಇವತ್ತಿನ ಯಲಹಂಕದ ಅಚ್ಚು ಮತ್ತು ಗಾಲಿ ಕಾರ್ಖಾನೆಯ ಸ್ಥಾಪನೆಯ ಹಿಂದಿನ ಕಾರಣ ಪುರುಷ. ಜಾಲಹಳ್ಳಿ ಪಕ್ಕದ ಕುವೆಂಪು ನಗರ ಬಡಾವಣೆಯನ್ನು ಹುಟ್ಟುಹಾಕಿದ್ದೇ ನಾಗವಾರದ ವಡ್ಡರಪಾಳ್ಯ ಸಾಣೆಗುರುವನಹಳ್ಳಿ ಸಂಜೀವ್‌ನಗರದ ಕೋತಿ ಹೊಸಳ್ಳಿ ಹರಿಜನ ಕಾಲೋನಿ; ಇತ್ಯಾದಿ ಬಡಾವಣೆಗಳೆಲ್ಲ ಶಾಸಕ ಸೂರ್ಯನಾರಾಯಣಗೌಡರು ವಿತರಿಸಿದ ಉಚಿತ ನಿವೇಶನಗಳ ಫಲವಾಗಿಯೇ ಹುಟ್ಟಿಕೊಂಡವು. ಅವತ್ತು ಹೆಸರಘಟ್ಟ ಜೂನಿಯರ್ ಕಾಲೇಜ್ ಮತ್ತು ಜಾಲಹಳ್ಳಿಯ ಸರ್ಕಾರಿ ಪ್ರೌಢಶಾಲೆಗಳನ್ನು ಸೂರ್ಯನಾರಾಯಣ ಗೌಡರು ಸ್ಥಾಪಿಸದಿದ್ದರೆ ಇವತ್ತಿನ ಬಹುತೇಕ ವಿದ್ಯಾವಂತರು ಅವರನ್ನು ಸ್ಮರಿಸುತ್ತಲೇ ಇರಲಿಲ್ಲ.

ಅರಸು ನಾಯಕತ್ವವನ್ನು ಒಪ್ಪಿಯೂ ಅವರ ಹುಳುಕನ್ನೂ ವಿಮರ್ಶಿಸುವಷ್ಟು ನೈತಿಕತೆಯಿದ್ದ ಸೂರ್ಯನಾರಾಯಣ ಗೌಡ ಸ್ವಂತದ್ದೊಂದು ಮನೆಯನ್ನೂ ಮಾಡಿಕೊಳ್ಳಲಿಲ್ಲ. ಕೊನೆತನಕ ಕಾಂಗ್ರೆಸ್ ಸೇವೆಯಲ್ಲೇ ಉಳಿದರು. ಬಡತನವನ್ನೇ ಅನುಭವಿಸಿದರು. ಈಗ ಅವರ ಪುತ್ರ ಗೋಪಿನಾಥ್ ತಂದೆಯ ಮಾರ್ಗದಲ್ಲೇ ಅಖಾಡಕ್ಕಿಳಿದಿದ್ದಾರೆ. ಇಂಜಿನಿಯರಿಂಗ್ ಪದವೀಧರ. ಪರಿಸರ ಹೋರಾಟಗಳ ಮೂಲಕವೇ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾಗಿದ್ದವರು. ಜೊತೆಗೆ ಕರ್ನಾಟಕ ರೈತರ ಅಭಿವೃದ್ಧಿ ಸಂಘಟನೆಯೆಂಬ ತಮ್ಮದೇ ಸಂಘಟನೆಯನ್ನೂ ಸ್ಥಾಪಿಸಿದ್ದಾರೆ. ಕಳೆದ ನಾಲ್ಕೈದು ವರ್ಷಗಳಿಂದ ಬಿಜೆಪಿ ಶಾಸಕ ವಿಶ್ವನಾಥ್





ಸೂರ್ಯನಾರಾಯಣ ಗೌಡ

ಗೂಂಡಾಗಿರಿಯ ವಿರುದ್ಧ ಹೋರಾಡಿಕೊಂಡೇ ಬಂದ ಗೋಪಿನಾಥ್ ಬಗ್ಗೆ ಯಲಹಂಕದ ಮತದಾರರಲ್ಲಿ ವಿಶೇಷ ಅಕ್ಕರೆಯೇನೋ ಇದೆ. ಆದರೆ ಗಂಟಿಗಾನಹಳ್ಳಿ ಕೃಷ್ಣಪ್ಪ ಮತ್ತು ಗೋಪಾಲಕೃಷ್ಣರಂತೆ ಟಿಕೆಟ್ಟಿಗಾಗಿ ದುಡ್ಡು ಸುರಿಯುವಷ್ಟು ಶಕ್ತಿಯಿಲ್ಲ.

ಒಂದು ಮೂಲದ ಪ್ರಕಾರ ಗಂಟಿಗಾನಹಳ್ಳಿ ಕೃಷ್ಣಪ್ಪ ಈಗಾಗಲೇ ಕೇಂದ್ರ ನಾಯಕರೊಬ್ಬರಿಗೆ ಟಿಕೆಟ್ಟಿಗೆಂದು 50 ಲಕ್ಷ ಕೊಟ್ಟಿದ್ದಾರೆಂಬ ವದಂತಿಯಿದೆ. ಸಜ್ಜನ ಮತ್ತು ಸುಸಂಸ್ಕೃತ ಗೋಪಿನಾಥ್ ಮುಂದೆ ಗಂಟಿಗಾನಹಳ್ಳಿಯಾಗಲಿ, ಗೋಪಾಲಕೃಷ್ಣರಾಗಲಿ ಹಾಲೀ ಶಾಸಕ ವಿಶ್ವನಾಥ್‌ಗಿಂತ ಹೇಗೆ ಭಿನ್ನವಾಗಿ ಕಾಣಲು ಸಾಧ್ಯ. ಹಣ ಮತ್ತು ತೋಳ್ಬಲವೊಂದೇ ಟಿಕೆಟ್ಟಿಗೆ ಮಾನದಂಡವಾಗುವುದಾದರೆ ಬಿಜೆಪಿಗೂ ಕಾಂಗ್ರೆಸ್ಸಿಗೂ ಏನು ವ್ಯತ್ಯಾಸ ಬಂತು? ●

...ಗೆ ಸಲ್ಲದ ಅಲ್ಲಂ ರಾಜಾಜಿನಗರಕ್ಕೆ ಬಂದು ಮಾಡುವುದೇನು?


...ಳ್ಳಾರಿಯ ಗಣಿರೆಡ್ಡಿಗಳ ಮುಂದೆ ಹೆಣಗಲಾಗದೆ ಅಲ್ಲಂ ವೀರಭದ್ರಪ್ಪ ...ರಿಗೆ ವಲಸೆ ಬರುತ್ತಿದ್ದಾರಂತೆ. ಸದ್ಯ ರಾಜಾಜಿನಗರಕ್ಕೆ ಅವರೇ ಅಭ್ಯರ್ಥಿಯಂತೆ. ಅಲ್ಲಂ ಕೈಬಿಟ್ಟು ತನಗೇ ಟಿಕೆಟ್ ಕೊಡುವಂತೆ ಕಾಂಗ್ರೆಸ್ ನಾಯಕಿ ರಾಣಿ ಸತೀಶ್ ಕೂಡ ಹಠಕ್ಕೆ ಬಿದ್ದಿದ್ದಾರಂತೆ. ...ಡ. ಎ.ಎಸ್. ಆರಾಧ್ಯ, ಮಂಜುಳಾ ನಾಯ್ಡು ಹೀಗೆ ...ನಗರವನ್ನೇ ನಂಬಿಕೊಂಡು ಆ ಕಾಲದಿಂದಲೂ ಕಾಂಗ್ರೆಸ್ ...ಸ್ಸೇ ಮಾಡಿಕೊಂಡು ಬಂದವರ ಆಸೆ-ಆಕಾಂಕ್ಷೆಗಳ ಪಟ್ಟಿ ದೊಡ್ಡದಿದೆ.




...ಗಳೂರು ನಗರದಲ್ಲಿ ಲಿಂಗಾಯತರ ಕಾಂಗ್ರೆಸ್ ಪ್ರಾತಿನಿಧ್ಯಕ್ಕೊಂದು ... ಕಲ್ಪಿಸಲೇಬೇಕೆಂದಿದ್ದರೆ ಅದೆಷ್ಟು ಮಂದಿ ಸ್ಥಳೀಯ ಲಿಂಗಾಯತರಿಲ್ಲ. ಆ ...ದಲೂ ಸೋಮಣ್ಣನಿಗೆ ಪರ್ಯಾಯವಾಗಿ ಕಾಂಗ್ರೆಸ್ ಬಾವುಟ ಹಾರಿಸಿಕೊಂಡೇ ...ಯುವ ಕಾಂಗ್ರೆಸ್ ಮುಖಂಡನಾಗಿದ್ದ ಎ.ಎಸ್. ಆರಾಧ್ಯನಿಗಿಂತ ಬೇಕೆ? ಕಳೆದ ಚುನಾವಣೆಯಲ್ಲೂ ಆರಾಧ್ಯನ ದುಡಿಮೆಗೆ ಕಾಂಗ್ರೆಸ್ ನ್ಯಾಯ ಕಲ್ಪಿಸಲಿಲ್ಲ. ಚುನಾವಣೆಯಲ್ಲೂ ಆರಾಧ್ಯನನ್ನು ಪರಿಗಣಿಸಲಿಲ್ಲ, ಹಾಗೊಮ್ಮೆ ವಕ್ಕಲಿಗರಿಗೆ ರಾಜಾಜಿನಗರದಲ್ಲಿ ಸ್ಥಾನ ಕಲ್ಪಿಸಬೇಕೆಂದರೆ ಸ್ಥಳೀಯರೇ ಆದ ತಿಮ್ಮೇಗೌಡರಿದ್ದಾರೆ. ಇನ್ನು ಮಂಜುಳಾ ನಾಯ್ಡು ಕೂಡ ಸ್ಥಳೀಯಳಲ್ಲ.

ಲಿಂಗಾಯತರಿಗೆ ಕೊಡಲೇಬೇಕು ಅಂತಿದ್ದರೆ ನಮ್ಮವನೇ ಆದ ಆರಾಧ್ಯ ಇರುವಾಗ ಬಳ್ಳಾರಿಯ ಅಲ್ಲಂ ವೀರಭದ್ರಪ್ಪ ಆಗಲಿ, ಇನ್ನೆಲ್ಲಿಂದಲೋ ಬಂದ ರಾಣಿ ಸತೀಶ್ ಆಗಲಿ ರಾಜಾಜಿನಗರಕ್ಕೆ ಬಂದು ಮಾಡುವುದಾದರೂ ಏನು? ಯಾರ್‍ಯಾರಿಗೋ ರಾಜಕೀಯ ಪುನರ್ವಸತಿ ಕಲ್ಪಿಸಲು ನಾವೇಕೆ ತ್ಯಾಗ ಮಾಡಬೇಕು? ರಾಜಾಜಿನಗರವನ್ನು ಲಿಂಗಾಯತರಿಗೇ ಒಪ್ಪಿಸುವುದಾದರೆ ಆರಾಧ್ಯ ಹೊರತಾಗಿ ಬೇರೆ ಯಾರು ಬಂದರೂ ಸೋಲಿಗೆ ನಮ್ಮನ್ನು ಹೊಣೆ ಮಾಡಬೇಡಿ ಎಂದು ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರು ಹಠಕ್ಕೆ ಬಿದ್ದಿದ್ದಾರೆ. ತವರೂರು ಬಳ್ಳಾರಿಯಲ್ಲಿ ಹೆಣಗಲಾಗದ ಅಲ್ಲಂ ರಾಜಾಜಿನಗರಕ್ಕೆ ಬಂದರೂ ಅಷ್ಟೇ, ರಾಜಧಾನಿಯಾದರೂ ಅಷ್ಟೇ!

ಯಾರ್‍ಯಾರಿಗೋ ಪುನರ್ವಸತಿ ಕಲ್ಪಿಸಲು ಹೋಗಿ ಕಾಂಗ್ರೆಸ್ ನಾಯಕರು ಪರೋಕ್ಷವಾಗಿ ಬಿಜೆಪಿಗೆ ನೆರವಾಗುವುದು ಹೀಗೇನಾ?






ಬಚ್ಚೇಗೌಡ ನಂದೀಶ್ ರೆಡ್ಡಿ ಸತೀಶ್ ರೆಡ್ಡಿ ಸುರೇಶ್ ಗೌಡ

ಬಿಜೆಪಿ ಭ್ರಷ್ಟರ ಫೈನಲ್ ರೌಂಡ್ ಪಕ್ಷಾಂತರದ ವಿರುದ್ಧ...

ಸಿದ್ದು ಮತ್ತು ಪರಮೇಶ್ವರ್ ಮಧ್ಯೆ ಬಿರುಕೆಂದು ಪುಕಾರೇಳಲು ಕಾರಣವಾದ ಮತ್ತೊಂದು ಘಟನೆಯೆಂದರೆ-ಅದು ಬಿಜೆಪಿ ಶಾಸಕರ ಫೈನಲ್ ರೌಂಡ್ ಪಕ್ಷಾಂತರ ಯತ್ನ!

ಇನ್ನೇನು ಚುನಾವಣೆ ಘೋಷಣೆಯಾಗುತ್ತಿದ್ದಂತೆಯೇ ಹೊಸಕೋಟೆಯ ದೈತ್ಯ ಬಚ್ಚೇಗೌಡರ ನೇತೃತ್ವದ 21 ಮಂದಿ ಬಿಜೆಪಿ ಶಾಸಕರು ಕಾಂಗ್ರೆಸ್ಸಿಗೆ ನೆಗೆಯಲು ಅಣಿಯಾದರು. ಯಲಹಂಕ ಶಾಸಕ ವಿಶ್ವನಾಥ್, ಕೃಷ್ಣರಾಜಪುರದಿಂದ ನಂದೀಶ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ದೊಡ್ಡಬಳ್ಳಾಪುರದ ಜಾಲಪ್ಪ ಪುತ್ರ ನರಸಿಂಹಸ್ವಾಮಿ, ತುಮಕೂರು ಗ್ರಾಮಾಂತರ ಶಾಸಕ ಸುರೇಶ್ ಗೌಡ, ಶಿವನಗೌಡ ನಾಯಕ್ ಇತ್ಯಾದಿ ಬಿಜೆಪಿಯ 21 ಮಂದಿ ಶಾಸಕರು ಬಚ್ಚೇಗೌಡರ ನೇತೃತ್ವದಲ್ಲಿ ಕಾಂಗ್ರೆಸ್ಸಿಗೆ ಹಾರಲು ಸಕಲ ಸಿದ್ಧತೆಗಳೂ ನಡೆದಿತ್ತು.

ಒಂದು ಹಂತದಲ್ಲಿ ಗಾಂಧಿನಗರದ ಶಾಸಕ ದಿನೇಶ್ ಗುಂಡೂರಾವ್ ಕೂಡ ಪಾಲಿಕೆ ಬೋಗಸ್ ಬಿಲ್ ಹಗರಣದಲ್ಲಿದ್ದ ಬೆಂಗಳೂರಿನ ಬಿಜೆಪಿ ಶಾಸಕರನ್ನು ಕಾಂಗ್ರೆಸ್ ಕರೆತರುವತ್ತ ಅತೀವ ಆಸಕ್ತಿ ವಹಿಸಿದ್ದರು. ಕೆಪಿಸಿಸಿ ಅಧ್ಯಕ್ಷರಾಗಿ ಪರಮೇಶ್ವರ್ ಈ ಬಗ್ಗೆ ದಿಟ್ಟ ನಿರ್ಧಾರ ಪ್ರಕಟಿಸಬೇಕಿತ್ತು, ಎಷ್ಟೆಂದರೂ ಅಧಿಕಾರದ ಆಸೆ, ಬಹುಮತ ಬಾರದೆಂಬ ಅಳುಕು. ಆಗಿದ್ದಾಗಲಿ ಎಂದು ಮೆದುವಾಗಿಬಿಟ್ಟರು.

ಆದರೆ ಸಿದ್ದು ಮಾತ್ರ 'ಅಲ್ರೀ... ಇಂಥವರನ್ನೆಲ್ಲ ನಮ್ಮ ಪಾರ್ಟಿಗೆ ಸೇರಿಸಿಕೊಂಡ್ರೆ ಜನ ಯಾಕ್ರಿ ಕಾಂಗ್ರೆಸ್ಸಿಗೆ ಓಟು ಕೊಡಬೇಕು? ಬಿಜೆಪಿಗೂ ಕಾಂಗ್ರೆಸ್ಸಿಗೂ ಏನು ವ್ಯತ್ಯಾಸ ಬಂತು' ಎಂದು ಕಡ್ಡಿಮುರಿದಂತೆ ಹೇಳಿಬಿಟ್ಟರು. ಹೈಕಮಾಂಡ್ ಅಭಿಪ್ರಾಯ ಕೂಡ ಸಿದ್ದು ವಾದವನ್ನೇ ಎತ್ತಿಹಿಡಿದಿತ್ತು. ಅಲ್ಲಿಗೆ ಬಿಜೆಪಿಯ ಭ್ರಷ್ಟರ ಅಂತಿಮ ಹಂತದ ಪಕ್ಷಾಂತರ ಯತ್ನಕ್ಕೆ ಸಿದ್ದು ಅಡ್ಡಗಾಲಿಟ್ಟಂತಾಗಿತ್ತು. ಇದು ಸಿದ್ದು ಮತ್ತು ಪರಮೇಶ್ವರ್ ನಡುವಿನ ಭಿನ್ನಾಭಿಪ್ರಾಯವಷ್ಟೇ. ಆದರೂ ಇದು ಸಲ್ಲದ ಗಾಳಿಸುದ್ದಿಯನ್ನು ಹುಟ್ಟು ಹಾಕಿತ್ತು.

ಸರ್ ಸಿ.ವಿ.ರಾಮನ್‌ನಗರ: ಬಿಜೆಪಿ ಗುಲಾಮನಿಗೆ ಕಾಂಗ್ರೆಸ್ ಟಿಕೆಟ್?

ಸರ್ ಸಿ.ವಿ. ರಾಮನ್‌ನಗರದ ಹಾಲೀ ಬಿಜೆಪಿ ಶಾಸಕ ರಘು ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯನ್ನು ನಿರ್ಧರಿಸುವವರ್‍ಯಾರು?

ಕಾಂಗ್ರೆಸ್ ಹೈಕಮಾಂಡ್ ಅಥವಾ ಕೆಪಿಸಿಸಿ ನಾಯಕರೆಂದೇ ತಾನೇ ಪ್ರತಿಯೊಬ್ಬರ ನಿರೀಕ್ಷೆ!



ಆದರೆ ಹಾಲೀ ಬಿಜೆಪಿ ಶಾಸಕರೇ ತನಗೆ ಬೇಕಾದವನೊಬ್ಬ, ತನ್ನ ಗೆಲುವಿಗೆ ಸಹಕರಿಸುವವನೊಬ್ಬನನ್ನು ಕಾಂಗ್ರೆಸ್ ಅಭ್ಯರ್ಥಿಯಾಗಿ ಹಾಕಿಸಿಕೊಂಡರೆ ಹೇಗಿರುತ್ತೆ?

ಸದ್ಯ ಸರ್ ಸಿ.ವಿ. ರಾಮನ್‌ನಗರಕ್ಕೆ ಕಾಂಗ್ರೆಸ್ ಟಿಕೆಟ್‌ಗಾಗಿ ಕ್ಯೂ ನಿಂತವರ ಪೈಕಿ ಚಲವಾದಿ ನಾರಾಯಣ ಸ್ವಾಮಿ ಎಂಬ ದಲಿತ ನಾಯಕನಿಗೆ ಖರ್ಗೆ ಸಾಹೇಬರ ಶ್ರೀರಕ್ಷೆಯಾದರೆ ಗೌತಮ್ ಎಂಬ ಯುವ ನಾಯಕನಿಗೆ ಮಾಜಿ ಮೇಯರ್ ವಿಜಯ್‌ಕುಮಾರ್ ಮಗನೆಂಬ ಹಣೆಪಟ್ಟಿಯಿದೆ. ತಿಪ್ಪಸಂದ್ರದ ಶ್ರೀನಿವಾಸ್ ಎಂಬ ಮತ್ತೊಬ್ಬ ಕಾಂಗ್ರೆಸ್ ಮುಖಂಡನನ್ನು ಮಾಜಿ ಸಂಸದ ಸಾಂಗ್ಲಿಯಾನ ಛೂಬಿಟ್ಟಿದ್ದಾರೆ. ಆದರೆ ಪಿ. ರಮೇಶ್ ಎಂಬ ಸೋಕಾಲ್ಡ್ 'ಸಿದ್ದು' ಅಭಿಮಾನಿಯನ್ನು ದುಡ್ಡುಕಾಸು ಕೊಟ್ಟು ಕಾಂಗ್ರೆಸ್ ಟಿಕೆಟ್ಟಿಗೆ ಅರ್ಜಿ ಹಾಕಿಸಿರುವುದು ಖುದ್ದು ಹಾಲಿ ಬಿಜೆಪಿ ಶಾಸಕ ರಘು!



ರಮೇಶ್

ಕಳೆದೊಂದು ವರ್ಷದಿಂದ ಸಿ.ವಿ. ರಾಮನ್‌ನಗರಕ್ಕೆ ಏಕಾಏಕಿ ವಕ್ಕರಿಸಿದರೆ ಸೋಕಾಲ್ಡ್ ಕಾಂಗ್ರೆಸ್ ನಾಯಕ ಪಿ.ರಮೇಶ್‌ಗೆ ಬಿಜೆಪಿ ಶಾಸಕ ರಘುವೇ ಗಾಡ್‌ಫಾದರ್ ಎಂಬ ಬಗ್ಗೆ ಅಲ್ಲಿನ ಯಾವೊಬ್ಬ ಪುಢಾರಿಗೂ ಅನುಮಾನಗಳಿಲ್ಲ. ರಘುವನ್ನು ಮುಂದಿಟ್ಟುಕೊಂಡೇ ಅಲಸೂರಿನ ಎರಡೂವರೆ ಎಕರೆ ದಲಿತರ ಜಮೀನ... ದೋಚಿ ಕುಬೇರನಾದ ರಮೇಶ್ ಮೂಲ... ತುಮಕೂರಿನವನು. ಇಲ್ಲಿಗೆ ಹತ್ತು ವರ್ಷದ ಹಿ... ನಿಗೂಢವಾಗಿ ಕೊಲೆಯಾದ ಕಾರ್ಗೋ ಮೂರ್ತಿ ಎಂ... ರೆಕ್ಟಿಫೈಡ್ ಸ್ಪಿರಿಟ್ ಕಳ್ಳ ಸಾಗಾಣಿಕೆದಾರನಿಗೆ ಅ... ಅನುಯಾಯಿಯಾಗಿದ್ದ. ಆತನ ಗರಡಿಯಲ್ಲೇ ಪ... ಕಾಲಕ್ರಮೇಣ ಸ್ಪಿರಿಟ್ ಸ್ಮಗ್ಲಿಂಗ್‌ಗೆ ಕೈಯಿ... ಒಂದಲ್ಲ ಮೂರು ಬಾರಿ ಜೈಲು ಕಂಡ.

ಕಾರ್ಗೋ ಮೂರ್ತಿಯ ತರುವಾಯ ಸ್ಪಿರಿ... ಸ್ಮಗ್ಲಿಂಗ್ ಖಯಾಲಿಯನ್ನೆಲ್ಲ ತಂದ... ಬೆಂಗಳೂರಿನಲ್ಲಿ ಲ್ಯಾಂಡ್ ಡೀಲಿಗಿಳಿ... ಯಾವ್ಯಾವುದೋ ಜಮೀನಿಗೆ ಕಾಂಪೌಂಡ್ ಎ... ನಕಲಿ ದಾಖಲೆ ಸೃಷ್ಟಿಸಿ ಯಾರ್‍ಯಾರಿಗೋ ಟೋಪಿ ಇ... ಅಲಸೂರಿನಲ್ಲಿ ಲಪಟಾಯಿಸಿದ ಎರಡೂವರೆ ಎಕರೆ ದಲಿತ... ಭೂಮಿಯ ರೊಕ್ಕದ ಒಂದು ಪಾಲನ್ನು ಶಾಸಕ ರಘು... ಪಾದಕ್ಕಿಟ್ಟು ಋಣ ತೀರಿಸಿದ್ದ. ಆದೇ ಋಣಾನುಬಂಧ... ಫಲವಾಗಿ ಈಗ ಮತ್ತೆ ರಘು ಬಿಜೆಪಿಯಿಂ... ಗೆದ್ದು ಶಾಸಕನಾಗಬೇಕೆಂದರೆ ರಮೇಶ್ ಕಾಂಗ್ರೆ... ಅಭ್ಯರ್ಥಿಯಾಗಲೇಬೇಕು. ತನ್ನದೇ ಛೇಲ... ಒಬ್ಬ ತನ್ನೆದುರು ಕಾಂಗ್ರೆಸ್ ಅಭ್ಯರ್ಥಿಯಾ... ನಿಂತು ಸಹಕರಿಸುತ್ತಾನೆಂದರೆ ಅದಕ್ಕೊಂದ... ಒಂದೆರಡು ಕೋಟಿ ಬಿಸಾಡಲು ಶಾಸ... ರಘುವಿಗೇನು ಕಷ್ಟ?

ಯಾವುದಕ್ಕೂ ಕಾಂಗ್ರೆಸ್ ನಾಯ... ಸಿದ್ದರಾಮಯ್ಯ ಹುಷಾರಾಗುವುದೊಳಿತು... ಕಾಂಗ್ರೆಸ್ ಹೈಕಮಾಂಡ್ ಯಾಮಾರಿತೆಂದರೆ ಸರ್ ಸಿ.ವಿ. ರಾಮನ್‌ನಗರ ಶಾಶ್ವತವಾಗಿ ಕಾಂಗ್ರೆಸ್ ಕೈಬಿಟ್ಟಂತೆಯೆ...

ಬಿಜೆಪಿ ಆಫೀಸಲ್ಲೇ ಬಿಜೆಪಿ ಗೆಲ್ಲಲ್ಲ!

ಎಲೆಕ್ಷನ್ ಬಿಟ್ಸ್

ಹೊರನೋಟಕ್ಕೆ ಬಿಜೆಪಿ ನಾಯಕರು ವಿಜಯ ಸಂಕಲ್ಪ ಯಾತ್ರೆ, ಮಣ್ಣು ಮಸಿ ಅಂತಾ ಏನೇ ಲಾಗಾ ಹಾಕುತ್ತಿದ್ದರೂ ಬೆಂಗಳೂರಿನ ಬಿಜೆಪಿ ಪಾರ್ಟಿ ಆಫೀಸಲ್ಲಿ ಕಾಣುವ ದೃಶ್ಯವೇ ಬೇರೆ. ಈ ಆಫೀಸಲ್ಲೇ ಕೆಲಸ ಮಾಡುತ್ತಿರುವ ಪತ್ರಿಕೆಯ ಪರಿಚಿತರೊಬ್ಬರು ಹೇಳಿದಂತೆ ಅಲ್ಲಿ 'ಈ ಸಾರಿ ನಮ್ಮ ಪಾರ್ಟಿ ಗೆಲ್ಲಲ್ಲ ಬಿಡಿ' ಅನ್ನುವ ಮಾತನ್ನೇ ಎಲ್ಲರೂ ಆಡುತ್ತಿದ್ದಾರಂತೆ. ಇನ್ನೂ ಮಜಾ ಏನೆಂದರೆ 'ಕಾಂಗ್ರೆಸ್‌ನಿಂದ ಯಾರು ಮುಖ್ಯಮಂತ್ರಿಯಾದರೆ ಬೆಟರ್' ಅಂತಲೂ ಅಲ್ಲಿ ನಿತ್ಯ ಚರ್ಚೆಯಾಗುತ್ತಿದೆ.

ಅನೇಕ ಚೆಡ್ಡಿಗಳಿಗೆ 'ಎಸ್.ಎಂ. ಕೃಷ್ಣ ಸಿಎಂ ಆದರೆ ಒಳ್ಳೇದು' ಅಂತಲೂ ಬಯಕೆ ಇದೆಯಂತೆ.

ಯಾಕೆಂದರೆ,

- ಉಡುಪಿ ಕೃಷ್ಣ ದೇವಾಲಯವನ್ನು ಬ್ರಾಹ್ಮಣರಿಗೆ ಬಿಟ್ಟುಕೊಟ್ಟಿದ್ದು, ಬಾಬಾಬುಡನ್‌ಗಿರಿ ವಿವಾದವಾದಾಗ ಸೆಕ್ಯುಲರ್‌ವಾದಿಗಳನ್ನು ಬಂಧಿಸಿ, ಭಜರಂಗಿಗಳಿಗೆ ಬೆಂಬಲ ನೀಡಿದ್ದು, ಪೇಜಾವರ ಸ್ವಾಮೀನ ಮನೆಗೆ ಕರೆಸಿ ಹೋಮ ಮಾಡಿಸಿದ್ದು, ಪೇಜಾವರರ ಶಿಷ್ಯೆ ಉಮಾಭಾರತಿ ವಿರುದ್ಧ ಹುಬ್ಬಳ್ಳಿಯ ನ್ಯಾಯಾಲಯದ ಮುಂದೆ ಇದ್ದ ಕೇಸನ್ನು ರದ್ದುಗೊಳಿಸಿದ್ದು... ಇದೇ ಕೃಷ್ಣ ತಾನೆ?

5 ಸಾವಿರ ಕೊಟ್ಟವನ ಹಿಂದೆ 50 ಸಾವಿರ ಕೊಡುವವ ಬಂದು ನಿಂತರೆ...?


ಇದು ನಡೆದದ್ದು ಬೆಂಗಳೂರಿನ ಯಶವಂತಪುರ ವಿಧಾನಸಭಾ ಏರಿಯಾದಲ್ಲಿ. ಇಲ್ಲಿ ಈ ಬಾರಿ ಜೆಡಿಎಸ್‌ನಿಂದ ಜವರೇಗೌಡ ಎಂಬುವವರು ಸ್ಪರ್ಧಿಸಲಿದ್ದಾರೆ. ಈತ ಚುನಾವಣೆಗೆ ಸ್ಪರ್ಧಿಸುವಾಗ ಘೋಷಣೆ ಮಾಡಲಿರುವ ಆಸ್ತಿ ಮೌಲ್ಯ ಎಷ್ಟೆಂದು ಊಹಿಸುವಿರಾ?

250 ಕೋಟಿ ರೂಪಾಯಿ ಎಂಬ ಊಹಾಪೋಹಗಳಿವೆ.

ಅದಿರಲಿ, ಮೊನ್ನೆ ಕಾಂಗ್ರೆಸ್ ಅಭ್ಯರ್ಥಿಯ ಕಡೆಯವರೊಬ್ಬರು ಕೊಂಚ ಚಿಕ್ಕ ಸೈಜಿನ ಲೋಕಲ್ ಲೀಡರ್ ಒಬ್ಬನನ್ನು ಕಂಡು ಮುಂದಿನ ಎಲೆಕ್ಷನ್‌ನಲ್ಲಿ ಕಾಂಗ್ರೆ ಪರವಾಗಿ ಕೆಲಸ ಮಾಡುವಂತೆ ಪುಸಿ ಹೊಡೆಯುತ್ತಾ ಅಮೋಘ ಐದು ಸಾವಿರ ರೂಪಾಯಿ ಆತನ ಕೈಗೆ ಕೊಟ್ಟನಂತೆ. ಆದರೆ ಆ ಮನುಷ್ಯ ಐದು ಸಾವಿರದತ್ತ ಕಣ್ಣೆತ್ತಿಯೂ ನೋಡದೆ ಬಂದಿದ್ದವನ ಬೆನ್ನ ಹಿಂದೆಯೇ ನಿಂತಿದ್ದ ಇನ್ನೊಬ್ಬನತ್ತ ನೋಡುತ್ತಿದ್ದನಂತೆ.

ಆತನ ಕೈಲಿ ಐವತ್ತು ಸಾವಿರವಿತ್ತು. ಆತ ಜವರೇಗೌಡನ ಭಂಟನಾಗಿದ್ದ. ಈ ದೃಶ್ಯ ನೋಡಿದ ಕಾಂಗ್ರೆಸವನು 'ಸದ್ಯ ನನ್ ಐದು ಸಾವಿರ ನನ್ನ ಕೈಲೇ ಉಳಿತಲ್ಲ ಸಾಕು' ಅಂತ್ಹೇಳಿ ಜಾಗ ಖಾಲಿ ಮಾಡಿದನಂತೆ.

ಒಂದು ಸ್ಪಷ್ಟೀಕರಣ ವೀರಭದ್ರಯ್ಯನ ವರದಿ




ಇದೊಂದು ಪುಟ್ಟ ಪ್ರಮಾದ. ಕಳೆದ ಸಂಚಿಕೆಯಲ್ಲಿ ಪ್ರಕಟವಾದ 'JDSಗೆ IAS ವೀರಭದ್ರಯ್ಯನ ಕಳ್ಳ ದುಡ್ಡು' ಎಂಬ ವರದಿ ಯೊಂದಿಗೆ ಪ್ರಕಟವಾಗಿರುವ ಫೋಟೋಗಳ ಪೈಕಿ ಮಾಗಡಿ ರಸ್ತೆಯ ಟೋಲ್‌ಗೇಟ್ ಬಳಿಯ ಶಾಪಿಂಗ್ ಕಾಂಪ್ಲೆಕ್ಸ್ ಕೂಡಾ ಇತ್ತು. ವಾಸ್ತವವಾಗಿ ಇದು ಮುಹಮ್ಮದ್ ಎಂಬುವವರಿಗೆ ಸೇರಿದ್ದು ಕಣ್‌ತಪ್ಪಿನಿಂದಾಗಿ ಹೀಗಾಗಿದೆ. ಉಳಿದಂತೆ ಇತರ ಪ್ರಕಟಿತ ಆಸ್ತಿಗಳ ಫೋಟೋಗಳು ವೀರಭದ್ರಯ್ಯನ ಕುಟುಂಬದವರದ್ದೆ ಆಗಿವೆ.

ಹರಪ್ಪನಹಳ್ಳಿ: ಯಾರ ಲೆಕ್ಕಾಚಾರ ಗೆಲ್ಲುತ್ತೇ?

ಹರಪನಹಳ್ಳಿ ಮತಕ್ಷೇತ್ರವನ್ನು ಇಲ್ಲಿನ ಶಾಸಕ ಮತ್ತು ಮಂತ್ರಿ ಕರುಣಾಕರ ರೆಡ್ಡಿ ಮರೆತುಹೋಗಿದ್ದನೋ ಅಥವಾ ಕ್ಷೇತ್ರದ ಮತದಾರನೇ ಆತನನ್ನು ಮರೆತಿದ್ದರೋ ಗೊತ್ತಿಲ್ಲ. ಆದರೆ ಒಟ್ಟಾರೆಯಾಗಿ ಇಲ್ಲಿ ರೆಡ್ಡಿಗೆ ಸೋಲು ಕಟ್ಟಿಟ್ಟ ಬುತ್ತಿಯಂತಾಗಿದೆ. ಯಾಕೆಂದರೆ ಐದು ವರ್ಷಗಳ ಹಿಂದೆ ಇಲ್ಲಿಂದ ಕರುಣಾಕರನನ್ನು ಗೆಲ್ಲಿಸಿದ್ದ ರಾಜಕೀಯ ವಾತಾವರಣ ಈಗಿಲ್ಲ.

ಹರಪನಹಳ್ಳಿ ಕ್ಷೇತ್ರದ ಚಿಗಟೇರಿ ಭಾಗದ ಮತದಾರರು ದಿವಂಗತ ಎಂ.ಪಿ.ಪ್ರಕಾಶರನ್ನು ಬೆಂಬಲಿಸುತ್ತಲೇ ಬಂದಿದ್ದರು. ಕಳೆದ ಬಾರಿಯೂ ಪ್ರಕಾಶರನ್ನು ಬೆಂಬಲಿಸಿದ್ದರಾದರೂ ರೆಡ್ಡಿಯನ್ನು ಹರಪನಹಳ್ಳಿ ಪಟ್ಟಣ ಗೆಲ್ಲಿಸಿತ್ತು.



ಹರಪನಹಳ್ಳಿ ದಾವಣಗೆರೆ ಜಿಲ್ಲೆಗೆ ಒಳಪಡುವ ಮುನ್ನ ಅದು ಬಳ್ಳಾರಿ ಜಿಲ್ಲೆಯಲ್ಲಿತ್ತು. ಪ್ರಕಾಶರು ಮಂತ್ರಿ ಆದಾಗಲೆಲ್ಲ ಅವರು ಬಳ್ಳಾರಿ ಜಿಲ್ಲಾ ಉಸ್ತುವಾರಿಯನ್ನೂ ವಹಿಸುತ್ತಿದ್ದರು. ಅವರ ಅಧಿಕಾರದ ಅವಧಿಯಲ್ಲಿ ಇಲ್ಲಿ ಪ್ರಭಾವಿಗಳಾದ ಪಂಚಮಸಾಲಿ ಲಿಂಗಾಯತ ಸಮುದಾಯದ ಯಾವ ನಾಯಕರೂ ಬೆಳೆಯಲಿಲ್ಲ. ಆ ಕಾರಣಕ್ಕೇ 2008ರ ಚುನಾವಣೆಯಲ್ಲಿ ಪಂಚಮಸಾಲಿ ಲಿಂಗಾಯತರು ಪ್ರಕಾಶರನ್ನು ಮಾಜಿ ಮಾಡುವ ಹಠದಲ್ಲಿ ವಲಸಿಗ ಕರುಣಾಕರನ ಕೈಹಿಡಿದಿದ್ದರು. ಬರುವ ಚುನಾವಣೆಯಲ್ಲಿ ಬಿಜೆಪಿಯಿಂದ ಮಂತ್ರಿ ಕರುಣಾಕರ ರೆಡ್ಡಿ, ಕಾಂಗ್ರೆಸ್‌ನಿಂದ ಎಂ.ಪಿ.ರವೀಂದ್ರ, ಕೆಜೆಪಿಯಿಂದ ಅರಸೀಕೆರೆ ಕೊಟ್ರೇಶ, ಬಿಎಸ್‌ಆರ್ ಕಾಂಗ್ರೆಸ್‌ನಿಂದ ಶಿರಾಜ್ ಶೇಖ್ ಸ್ಪರ್ಧಿಸುವುದು ಬಹುತೇಕ ಗ್ಯಾರಂಟಿಯಾಗಿದೆ.

ಎಂ.ಪಿ.ರವೀಂದ್ರ



ಇವರು ಎಂ.ಪಿ.ಪ್ರಕಾಶರ ಏಕೈಕ ಸುಪುತ್ರ. ಹಡಗಲಿ ರಾಜಕಾರಣದಲ್ಲಿ ಸದಾ ತಂದೆಯ ಬೆನ್ನ ಹಿಂದಿದ್ದರೂ ಇನ್ನೂ ಪ್ರಬುದ್ಧತೆಯನ್ನು ಬೆಳೆಸಿಕೊಂಡಿಲ್ಲ. ಆದರೂ ರವೀಂದ್ರರಿಗೆ ತಂದೆ ಪ್ರಕಾಶರ ನಾಮಬಲ ಮತ್ತು ಜನಪ್ರಿಯತೆ ಶ್ರೀರಕ್ಷೆಯಂತಿವೆ. ಕಳೆದ ಬಾರಿ ಪ್ರಕಾಶರನ್ನು ಸೋಲಿಸಿದ್ದ ಮತದಾರರು ಈಗ ಅನುಕಂಪ ಹುಟ್ಟಿ ರವೀಂದ್ರರ ಕೈಹಿಡಿದರೆ ಕ್ಷೇತ್ರದ ಚಿತ್ರಣವೇ ಬೇರೆಯಾಗುತ್ತದೆ.

ಶಿರಾಜ್ ಶೇಖ್

ಶಿರಾಜ್ ಶೇಖ್ ಬಳ್ಳಾರಿ ಜಿಲ್ಲೆಯಿಂದ ಹರಪನಹಳ್ಳಿಗೆ ವಲಸೆ ಬಂದಿರುವಾತ. ಬಿಜೆಪಿ ತೊರೆದ ಶ್ರೀರಾಮುಲು ಹೊಸ ಪಾರ್ಟಿ ಕಟ್ಟಿದಾಗ ಮಂತ್ರಿ ಕರುಣಾಕರ ರೆಡ್ಡಿ ಬಿಜೆಪಿಯಲ್ಲೇ ಉಳಿದಿದ್ದು, ಮಿತ್ರ ಜನಾರ್ದನ ರೆಡ್ಡಿ ಗ... ಹಗರಣದಲ್ಲಿ ಜೈಲು ಪಾಲಾದರೂ ಆತನ ಅಣ್ಣ ಕರುಣಾಕ... ಅಧಿಕಾರಕ್ಕಂಟಿಕೊಂಡಿದ್ದರ ಬಗ್ಗೆ ಶ್ರೀರಾಮುಲುಗೆ ಸಿಟ್ಟಿ... ಐದಾರು ತಿಂಗಳ ಹಿಂದೆ ಹರಪನಹಳ್ಳಿಯಲ್ಲಿ ಬಿಎಸ್‌ಆರ್... ಪಾರ್ಟಿಯ ಸಮಾವೇಶವೊಂದರಲ್ಲಿ ಶ್ರೀರಾಮುಲ... ಕರುಣಾಕರನ ವಿರುದ್ಧ ಸಣ್ಣ ಹುಡುಗನನ್ನು ನಿಲ್ಲಿಸಿ ಆತನನ್ನು ಸೋಲಿಸುತ್ತೇನೆಂದು ಆಕ್ರೋಶ ವ್ಯಕ್ತಪಡಿಸಿದ್ದರು. ಆ ಮಾತನ್ನು ಹರಪನಹಳ್ಳಿಯ ಮತದಾರರಿರಲಿ, ಖುದ್ದು ಕರುಣಾಕ... ರೆಡ್ಡಿಯೂ ಮರೆತಿರಲಿಕ್ಕಿಲ್ಲ. ಶ್ರೀರಾಮುಲುವಿನ ಪಾರ್ಟಿ... ಇಲ್ಲಿನ ಮುಸ್ಲಿಮರು, ನಾಯಕರು, ದಲಿತರ ಮತಗಳ... ಒಲಿಯುವ ವಾತಾವರಣ ಇದೆ. ಶ್ರೀರಾಮುಲು ನಾಯ... ಸಮುದಾಯ ದವನಾದ್ದರಿಂದ ಕ್ಷೇತ್ರ... ಬಹುಸಂಖ್ಯಾತ ಮತಗಳಲ್ಲೊಂದಾದ ... ಸಮುದಾಯ ಬೆಂಬಲ ಶಿರಾಜ್ ಶೇಖ್‌ರಿ... ಸಿಗುವ ಸಾಧ್ಯತೆಯನ್ನು ಅಲ್ಲಗಳೆಯುವಂತಿ...

ಅರಸೀಕೆರೆ ಕೊಟ್ರೇಶ


ಪಡ್ಡೆ ಹುಡುಗರ ಜೊತೆ ಪುಟಾ... ರಾಜಕಾರಣ ಮಾಡಿಕೊಂಡಿದ್ದ ಅರಸೀಕೆ... ಕೊಟ್ರೇಶ ಪಳಗಿದ ರಾಜಕಾರಣಿ ಅಲ್ಲ. ಈತ... ಹೆಸರನ್ನು ಅದ್ಯಾರು ಕೆಜೆಪಿ ಪಾರ್ಟಿಯ ಚಕ್ರವರ್ತಿ ಯಡ್ಡಿ... ರೆಕಮಂಡ್ ಮಾಡಿದರೋ ಭಗವಂತನೇ ಬಲ್ಲ. ಕೆಜೆಪಿಯ... ಅಭ್ಯರ್ಥಿ ಯಾಗಲು ಕೊಟ್ರೇಶನಿಗೆ ಇರುವ ಏಕೈಕ 'ಅರ್ಹತೆ'... ಆತ ಪಂಚಮಸಾಲಿ ಲಿಂಗಾಯತ ಸಮುದಾಯದವನ... ಎನ್ನುವುದು. ಹರಪನಹಳ್ಳಿಯಲ್ಲಿ ಪಂಚಮಸಾ... ಲಿಂಗಾಯತರ 60 ಸಾವಿರ ಮತಗಳಿದ್ದು ಅವುಗಳ ಮೇ... ಕಣ್ಣಿಟ್ಟೇ ಈ ಕೊಟ್ರೇಶನನ್ನು ಯಡ್ಡಿ ಚುನಾವಣ... ಕಣಕ್ಕಿಳಿಸಲಿದ್ದಾರೆ.

ಒಂದು ವೇಳೆ ಪಂಚಮಸಾಲಿ ಲಿಂಗಾಯತರು ಕೊಟ್ರೇಶನನ್ನು ಗೆಲ್ಲಿಸಲೇಬೇಕು, ಇದು 'ತಮ... ಸಮುದಾಯದ ಪ್ರತಿಷ್ಠೆಯ ಪ್ರಶ್ನೆ ಎಂದು ಆತನನ್ನು ಬೆಂಬಲಿಸಿದರೆ ರವೀಂದ್ರ, ಕರುಣಾಕರ, ಶಿರಾಜ... ಶೇಖ್‌ರ ಸೋಲೇ ಕರುಣಾಜನಕವಾಗುತ್ತದೆ. ಆದರೆ ಅದು ಅಸಾಧ್ಯದ ಮಾತು. ಯಾಕೆಂದರೆ ಪಂಚಮಸಾಲಿಗಳಲ್ಲೇ ಹಳೆ ತಲೆಮಾರಿನ ಹಿರಿಯರಿದ್ದಾರೆ. ಅವರಲ್ಲಿ ಯಾರಾದರೂ ಪಕ್ಷೇತರವಾಗಿ ನಾಮಪತ್ರ ಸಲ್ಲಿಸಿದರೂ ಕೆಜೆಪಿಯ ಲೆಕ್ಕಾಚಾರಗಳು ತಲೆಕೆಳಗಾಗುವುದು ಗ್ಯಾರಂಟಿ. ಇನ್ನು ಕ್ಷೇತ್ರದಲ್ಲಿರುವ ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಹಾಗು ಅಲ್ಪಸಂಖ್ಯಾತರು ಬಿಎಸ್‌ಆರ್ ಪಾರ್ಟಿಯತ್ತ ಮುಖ ಮಾಡಿದರೆ ಚುನಾವಣೆಯಲ್ಲಿ ಅಚ್ಚರಿಯ ಫಲಿತಾಂಶ ಹೊರಬರಬಹುದು...

● ಟಿ.ಎನ್.ಷಣ್ಮುಖ...

ಮದ್ದೂರು: ಒಂದಾದ ಬೀಗರು, ಯಾರ ಬುರುಡೆಗೆ ಬಿಸಿನೀರು?

ಬೀಗರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ತ್ತು ಮಾಜಿ ಶಾಸಕ ಡಿ.ಸಿ.ತಮ್ಮಣ್ಣ ಒಂದಾಗಿದ್ದಾರೆ. ಗಾಗಿ ಈ ಬಾರಿಯ ಮದ್ದೂರು ವಿಧಾನಸಭಾ ಕ್ಷೇತ್ರದಲ್ಲಿ ಗರ ಆಟ' ಕುತೂಹಲ ಮೂಡಿಸಿದೆ.



ಕುಟುಂಬ ರಾಜಕಾರಣಕ್ಕೆ ಹೆಸರುವಾಸಿಯಾದ ವೇಗೌಡ ತಮ್ಮ ಬೀಗರಾದ ತಮ್ಮಣ್ಣನವರನ್ನು ತಮ್ಮ ಕ್ಕೆ ಸೇರ್ಪಡೆ ಮಾಡಿಕೊಳ್ಳುವ ಮೂಲಕ ಪಕ್ಷನಿಷ್ಠೆ ನಾ ಸಿದ್ದರಾಜುರು ಅವರು ಕಾಂಗ್ರೆಸ್‌ನತ್ತ 'ಕೈ' ಚುವಂತೆ ಮಾಡಲಾಗಿದೆ.

"ನಮ್ಮ ಕುಟುಂಬದಲ್ಲಿರುವ ಬಿರುಕನ್ನು ಪಡಿಸಿಕೊಳ್ಳುವ ಭಾಗವಾಗಿ ಡಿ.ಸಿ.ತಮ್ಮಣ್ಣನವರನ್ನು ಮ್ಮ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡಿದ್ದೇನೆ. ಸಿದ್ದರಾಜು ಎಗೆ ನಮ್ಮ ಕುಟುಂಬ ಕಾರಣವಲ್ಲ, ಆತನ ಸಾವಿಗೆ ಕುಡಿತವೇ ಕಾರಣ" ನ್ನುವ ಮೂಲಕ ಜೆಡಿಎಸ್ ನಾಯಕ ಹೆಚ್.ಡಿ.ಕುಮಾರಸ್ವಾಮಿ ಸೋದರಿಯಂತಿದ್ದ ನಾರನ್ನು ಕುಟುಂಬದಿಂದ ಹೊರಹಾಕಿ ತಮ್ಮಣ್ಣನವರನ್ನು ತಮ್ಮ ಟುಂಬದೊಳಗೆ ಸೇರಿಸಿಕೊಂಡಿದ್ದಾರೆ.

ತಮ್ಮಣ್ಣ ಜೆಡಿಎಸ್‌ಗೆ ಬರಲು ಕಳೆದೊಂದು ವರ್ಷದಿಂದ ಹಾತೊರೆಯುತ್ತಲೇ ದ್ದರು. ಅವರು ದೈಹಿಕವಾಗಿ ಬಿಜೆಪಿಯಲ್ಲಿದ್ದರೂ ಅವರ ಮನಸ್ಸು ತಾನೆಂದು ಎಸ್ ಸೇರುವೆನೋ ಎಂದು ಹಂಬಲಿಸುತ್ತಿತ್ತು. ಅದಕ್ಕೆ ಸರಿಯಾಗಿ ಗೌಡರ ಟುಂಬದಲ್ಲಿ ಮಾತುಕತೆ ನಡೆದು ಅವರನ್ನು ಸೇರಿಸಿಕೊಳ್ಳಲು ನಿರ್ಧರಿಸಲಾಯಿತು. ವ ತಿಂಗಳು ಹಾಲಿ ಜೆಡಿಎಸ್ ಶಾಸಕಿ ಕಲ್ಪನಾ ಸಿದ್ದರಾಜು ಹಾಗೂ ಅವರ ಬೆಂಬಲಿಗರು ಕಪ್ಪುಬಾವುಟಗಳನ್ನು ಪ್ರದರ್ಶಿಸಿ ವಿರೋಧ ವ್ಯಕ್ತಪಡಿಸಿದರೂ ತಮ್ಮಣ್ಣ ಜೆಡಿಎಸ್ ಸೇರಿಯೇಬಿಟ್ಟರು.

ಇದಾದನಂತರ ಎದುರಾದ ಪುರಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಬಿ ಫಾರಂಗಾಗಿ ಕಲ್ಪನಾ ಹಾಗು ತಮ್ಮಣ್ಣನವರ ನಡುವೆ ದೊಡ್ಡ ಹೋರಾಟವೇ ನಡೆಯಿತು. ಈ ಎಲ್ಲಾ ಬೆಳವಣಿಗೆಗಳಿಂದ ಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ತಮ್ಮಣ್ಣನವರಿಗೇ ಎಂಬುದು ಗ್ಯಾರಂಟಿ ಆಗಿತ್ತು.

ಆರ್ಥಿಕ ದೈತ್ಯ ತಮ್ಮಣ್ಣ

ಕಿರುಗಾವಲು ಹಾಗೂ ಮದ್ದೂರಿನಿಂದ ತಲಾ ಒಂದೊಂದು ಅವಧಿಗೆ ಶಾಸಕರಾಗಿದ್ದ ತಮ್ಮಣ್ಣನವರ ಆರ್ಥಿಕ ಶಕ್ತಿ ಇಡೀ ರಾಜ್ಯಕ್ಕೆ ಗೊತ್ತಿರುವಂತಹದ್ದು. ಕಾಂಗ್ರೆಸ್ ಮತ್ತು ಬಿಜೆಪಿ ಪಕ್ಷಗಳೆರಡನ್ನೂ ಸುತ್ತಿ ಬಂದಿರುವ ತಮ್ಮಣ್ಣ ಜೆಡಿಎಸ್‌ಗೆ ಬಂದರೆ ಆರ್ಥಿಕವಾಗಿ ಚೈತನ್ಯ ತುಂಬುತ್ತಾರೆ; ಜೊತೆಗೆ ಮಳವಳ್ಳಿ ಕ್ಷೇತ್ರದ ಕಿರುಗಾವಲು ಹೋಬಳಿ ಹಾಗೂ ನಾಗಮಂಗಲ ಕ್ಷೇತ್ರದ ಕೊಪ್ಪ ಹೋಬಳಿಯ ಮೇಲೆ ಅವರು ಹಿಡಿತ ಹೊಂದಿರುವುದೂ ಜೆಡಿಎಸ್‌ಗೆ ನೆರವಾಗುತ್ತದೆಂಬ ದೃಷ್ಟಿಯಿಂದ ಸಂಸದ ಚಲುವರಾಯಸ್ವಾಮಿ ಹಾಗೂ ಜಿಲ್ಲಾಧ್ಯಕ್ಷ ಡಿ.ರಮೇಶ್ ಕೂಡ ತಮ್ಮಣ್ಣನವರ ಸೇರ್ಪಡೆಗೆ ತಲೆದೂಗಿದ್ದು, ಆ ಮೂಲಕ 'ಸೋದರಿ' ಕಲ್ಪನರ ಬೆನ್ನಿಗೆ ಚೂರಿ ಹಾಕಿದ್ದು ಈಗ ಬಹಿರಂಗವಾಗಿದೆ.



ಕಾಂಗ್ರೆಸ್‌ನತ್ತ ಕಲ್ಪನಾ ಚಿತ್ತ!

ಕಳೆದ ಕೆಲದಿನಗಳಿಂದ ಒಂದು ಕಡೆ ತಮ್ಮ ಬೆಂಬಲಿಗರು ಹಾಗೂ ಪುಟ ಸಿದ್ದರಾಜು ಅಭಿಮಾನಿಗಳು ನಡೆಸುತ್ತಿರುವ ಸಭೆಗಳ ಮೂಲಕ ಜೆಡಿಎಸ್ ವರಿಷ್ಠರ ಮೇಲೆ ಒತ್ತಡ ಹೇರುವ ತಂತ್ರ ಅನುಸರಿಸುತ್ತಲೇ, ಮತ್ತೊಂದೆಡೆ ಕಾಂಗ್ರೆಸ್‌ನತ್ತ ಕಲ್ಪನಾ ಸಿದ್ದರಾಜು ಕೈಚಾಚಿದ್ದಾರೆ. ಈಗಾಗಲೇ ಎಸ್.ಎಂ.ಕೃಷ್ಣ ಸೇರಿದಂತೆ ಕಾಂಗ್ರೆಸ್‌ನ ಕೆಲ ಮುಖಂಡರ ಬಳಿ ಗುಪ್ತ ಮಾತುಕತೆ ಕೂಡ ನಡೆದಿದೆ. ಕಾಂಗ್ರೆಸ್ ಹೈಕಮಾಂಡ್ ತಮಗೆ ಗ್ರೀನ್‌ಸಿಗ್ನಲ್ ನೀಡಿದರೆ ತಮ್ಮಣ್ಣರನ್ನು ಒಂದು ಕೈ ನೋಡೇ ಬಿಡೋಣ ಎನ್ನುವ ಬೆಂಬಲಿಗರ ಒತ್ತಾಯಕ್ಕೆ ಕಲ್ಪನಾ ಸಿದ್ದರಾಜು ಮಣಿದಿದ್ದಾರೆ.


ಈ ಮಧ್ಯೆ ತಮ್ಮಣ್ಣರನ್ನು ಸೋಲಿಸುವುದೇ ತಮ್ಮ ಏಕೈಕ ಗುರಿ ಎಂಬಂತಾಡುವ ಕಾಂಗ್ರೆಸ್‌ನ ಹಿರಿಯ ನಾಯಕ ಜಿ.ಮಾದೇಗೌಡ ಹಾಗೂ ಅವರ ಮಗ ಮಧು ಕೂಡ ಕಾಂಗ್ರೆಸ್ ನಾಯಕರು ಒಪ್ಪಿದರೆ ಕಲ್ಪನಾ ಸಿದ್ದರಾಜು ಪರ ಕೆಲಸ ಮಾಡಲು ನಿರ್ಧರಿಸಿದ್ದಾರೆನ್ನಲಾಗಿದೆ.

ಬೀಗರಾದ ದೇವೇಗೌಡ-ಡಿ.ಸಿ.ತಮ್ಮಣ್ಣ ಕೈ ಜೋಡಿಸಿರುವುದರಿಂದ ಈ ಬಾರಿ ಮದ್ದೂರು ವಿಧಾನಸಭಾಕ್ಷೇತ್ರ ಪ್ರತಿಷ್ಠೆಯ ಕಣವಾಗಿದೆ. ಕಲ್ಪನಾ ಸಿದ್ದರಾಜುರನ್ನು ಕಡೆಗಣಿಸಿದ ಕಾರಣಕ್ಕೆ ಮತದಾರನ ಮುನಿಸು ಯಾರತ್ತ ತಿರುಗುವುದೋ ಕಾದುನೋಡಬೇಕಿದೆ.

ಮಂಡ್ಯ: ಯಾರ 'ಕೈ'ಗೆ ಕಾಂಗ್ರೆಸ್ ಟಿಕೆಟ್?

ಈ ಬಾರಿಯ ಚುನಾವಣೆಯಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದ ತ್ತಿರ ಬರುವುದು ಬಹುತೇಕ ಖಚಿತವಾಗಿದೆ. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಟ್ ಪಡೆದು, ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸಿ, ಗೆದ್ದು, ಮಂತ್ರಿ ಗುವ ಕನಸು ಕಾಣುತ್ತಿದ್ದ ಅಂಬರೀಷ್‌ಗೆ ದೊಡ್ಡ ಶಾಕ್ ಆಗಿದೆ.

ತಾನು ಮಂಡ್ಯದ ಟಿಕೆಟ್ ಕೇಳಿದರೆ ಯಾರೂ ಅಡ್ಡಿ ಡಿಸಲಾರರು ಎಂದುಕೊಂಡಿದ್ದ ಅಂಬಿಗೆ ಕಾಂಗ್ರೆಸ್ ಮುಖಂಡರ ವಿರೋಧ ನುಂಗಲಾಗದ ತುತ್ತಾಗಿದೆ. ಇತ್ತೀಚೆಗೆ ಸೂರಿನ ಖಾಸಗಿ ಹೋಟೆಲ್ ಒಂದರಲ್ಲಿ ತಂಗಿದ್ದ ಬರೀಶ್‌ರನ್ನು ಭೇಟಿ ಮಾಡಿದ ಸುಮಾರು 14 ಮಂದಿ ತನ ನಗರಸಭಾ ಸದಸ್ಯರು ಹಾಗೂ 20ಕ್ಕೂ ಹೆಚ್ಚು ಯ ಕಾಂಗ್ರೆಸ್ ಮುಖಂಡರು "ಅಂಬರೀಶ್‌ರವರೇ, ವು ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಸ್ಪರ್ಧಿಸುವುದು ಡ. ನಿಮ್ಮ ಬದಲಿಗೆ ಮಾಜಿ ಸಚಿವ, ಹಾಲಿ ಕಾಂಗ್ರೆಸ್ ಲ್ಲಾಧ್ಯಕ್ಷ ಆತ್ಮಾನಂದರಿಗೆ ಟಿಕೆಟ್ ಬಿಟ್ಟುಕೊಡಿ" ಎಂದು ನವಾಗಿಯೇ ಹೇಳಿದ್ದಾರೆ. ಇದರಿಂದ ಅಂಬಿಗೆ ಶಾಕ್ ದರೂ "ಹೈಕಮಾಂಡ್ ಸೂಚಿಸಿದ ಸ್ಥಳದಿಂದ ಸ್ಪರ್ಧಿಸುತ್ತೇನೆ" ದಷ್ಟೇ ಹೇಳಿ ಅವರನ್ನೆಲ್ಲ ಸಾಗಹಾಕಿದ್ದಾರೆ.




ಆನಂತರ ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ನಿವಾಸಕ್ಕೆ ತೆರಳಿದ ಗುಂಪು "ದಯವಿಟ್ಟು ಅಂಬಿ ಬದಲು ಆತ್ಮಾನಂದರಿಗೆ ಟಿಕೆಟ್ ಡಿಸಿ" ಎಂದು ದುಂಬಾಲು ಬಿದ್ದಿದೆ. ಇದಕ್ಕೆ ಪ್ರತಿಕ್ರಿಯಿಸಿದ ಎಸ್.ಎಂ.ಕೃಷ್ಣ ವಿಚಾರದಲ್ಲಿ ನಾನು ಹೆಲ್ಪ್‌ಲೆಸ್" ಎಂದು ಹಪಹಪಿಸಿದ್ದಾರೆ.

ಶ್ರೀರಂಗಪಟ್ಟಣದಿಂದ ಮತ್ತೆ ಅಂಬಿ ಸ್ಪರ್ಧಿಸಿದರೆ ರವೀಂದ್ರ ಶ್ರೀಕಂಠಯ್ಯ ರಿಗೆ ಮತ್ತೆ ಪೆಟ್ಟುಕೊಡುವ ಸಾಧ್ಯತೆಗಳೇ ಅಧಿಕವಾದ್ದರಿಂದ ಅಂಬಿಯ ಂಗಿ ಪಡೆ "ಮಂಡ್ಯ ಕ್ಷೇತ್ರದಿಂದ ನೀವು ಸ್ಪರ್ಧಿಸುವುದೇ ಸೇಫ್" ಎಂದು ರ ತಲೆಕೆಡಿಸಿದ್ದರು. ಈ ಕಾರಣಕ್ಕೇ ಮಂಡ್ಯ ವಿಧಾನಸಭಾ ಕ್ಷೇತ್ರದ ಮೇಲೆ ಟ್ಟು ಕಳೆದ ಜನವರಿಯಲ್ಲಿ 1 ಕೋಟಿ ರೂ. ಖರ್ಚು ಮಾಡಿ 'ಅಂಬಿ ಲ್ಡ್ ಕಪ್ ಕಬಡ್ಡಿ' ಎಂಬ ಕ್ರೀಡಾ ಸ್ಪರ್ಧೆಯನ್ನು ಭರ್ಜರಿಯಾಗಿ ಮಾಡಲಾಗಿತ್ತು.

ಆದರೆ ಈಗ ನೋಡಿದರೆ ಅಂಬಿಗೆ ಮಂಡ್ಯದ ಟಿಕೆಟ್ ನೀಡಬಾರದೆಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ದಿನನಿತ್ಯ ಕಾಂಗ್ರೆಸ್ ವರಿಷ್ಠರಿಗೆ ದುಂಬಾಲು ಬೀಳುತ್ತಿದ್ದಾರೆ. ಅವರ ಇಂತಹ ವಿರೋಧವನ್ನು ಕಂಡು ಅಂಬಿ ಭಟ್ಟಂಗಿಗಳು ವಿಚಲಿತರಾಗಿದ್ದಾರೆ. ಅಂಬಿ ಎಂಎಲ್‌ಎ ಆದರೆ ತಾವು ದರ್ಬಾರ್ ನಡೆಸಬಹುದೆನ್ನುವ ಅವರ ಆಸೆಗೂ ಈ ಬೆಳವಣಿಗೆ ತಣ್ಣೀರೆರಚಿದೆ.

ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷ ಅತ್ಯಧಿಕ ಸ್ಥಾನಗಳನ್ನು ಗೆದ್ದು ಜಯಭೇರಿ ಬಾರಿಸಿದೆ. ಮಂಡ್ಯ ನಗರಸಭೆಯಲ್ಲಿ ಜಾತ್ಯತೀತ ದಳದ ಪಾರುಪತ್ಯಕ್ಕೆ ತಡೆ ಹಾಕಿ ಕಾಂಗ್ರೆಸ್ 15 ಸ್ಥಾನಗಳನ್ನು ಗೆದ್ದುಕೊಂಡಿದೆ. ತಾವು ಈ ಚುನಾವಣೆಗಳಿಗೆ ತಮ್ಮ ಕೈಯಿಂದ ಬಂಡವಾಳ ಹಾಕದಿದ್ದರೂ ಸಹಜವಾಗಿಯೇ ಈ ಗೆಲುವು ಜಿಲ್ಲಾಧ್ಯಕ್ಷ ಆತ್ಮಾನಂದರಿಗೆ ಸಂತಸ ತಂದಿದೆ. ಮಾತ್ರವಲ್ಲ ತಾವು ನಾಲ್ಕನೇ ಬಾರಿಗೆ ಗೆದ್ದು ಶಾಸಕನಾಗುವ ಬಯಕೆಗೆ ಪುಷ್ಟಿ ನೀಡಿದೆ. ಆತ್ಮಾನಂದರಿಗೆ ಈ ಬಾರಿ ಟಿಕೆಟ್ ಸಿಗದಿದ್ದರೆ ಅವರ ರಾಜಕೀಯ ಜೀವನ ಅಂತ್ಯಗೊಂಡಂತೆ. ಹಾಗಾಗಿಯೇ ತಮ್ಮ ಬೆಂಬಲಿಗರ ಮೂಲಕ ಒತ್ತಡ ತಂತ್ರ ಹೇರುವ ಕಾರ್ಯವನ್ನು ಮಾಡಿಸುತ್ತಿದ್ದಾರೆ.



ಪ್ರಸ್ತುತ ವಿಧಾನಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಲ್ಲಿ ಜೆಡಿಎಸ್ ಮತ್ತು ಕಾಂಗ್ರೆಸ್ ನಡುವೆ ನೇರವಾದ ಪೈಪೋಟಿ ನಡೆಯಲಿದೆ. ದಳದಿಂದ ಹಾಲಿ ಶಾಸಕ ಎಂ.ಶ್ರೀನಿವಾಸ್ ಮೂರನೇ ಬಾರಿಗೆ ಸ್ಪರ್ಧಿಸುತ್ತಿದ್ದಾರೆ. ಕಳೆದ ಎರಡು ಅವಧಿಗೆ ಶಾಸಕರಾಗಿರುವ ಶ್ರೀನಿವಾಸ್ ಜನಸಾಮಾನ್ಯರಿಗೆ ಸುಲಭವಾಗಿ ಸಿಗುವ ಆಸಾಮಿ. ಆದರೆ ಅಂಬರೀಶ್ ವಿಚಾರದಲ್ಲಿ ಹಾಗೆ ಹೇಳುವಂತಿಲ್ಲ. ಅಂಬರೀಶ್ ದರ್ಶನಕ್ಕಾಗಿ ಅವರ ಮನೆ ಬಾಗಿಲು ಕಾಯುವ ಭಯದಿಂದಲೇ ತತ್ತರಿಸಿಹೋಗಿರುವ ಕಾಂಗ್ರೆಸ್ ಮುಖಂಡರು ಆತ್ಮಾನಂದರಿಗೇ ಟಿಕೆಟ್ ಕೊಡಿ ಎಂದು ಬೊಬ್ಬೆ ಹಾಕುತ್ತಿದ್ದಾರೆ.

ಸಿನಿಮಾ ನಟ ಅಂಬರೀಶ್‌ರನ್ನು 'ಮಂಡ್ಯದ ಗಂಡು' ಎಂದು ತಲೆಯ ಮೇಲೆ ಹೊತ್ತು ಮೂರು ಬಾರಿ ಸಂಸತ್ತಿಗೆ ಕಳುಹಿಸಿದ ಕೀರ್ತಿ ಮಂಡ್ಯ ಜಿಲ್ಲೆಯದ್ದು. ರಾಜ್ಯದ ಬಲಿಷ್ಠ ಒಕ್ಕಲಿಗ ಜನಾಂಗದ ಪ್ರಬಲ ನಾಯಕನಾಗಿ ಅಂಬಿ ಬೆಳೆಯಬಹುದಾಗಿತ್ತು. ಆದರೆ ರೇಸು, ಇಸ್ಪೀಟು, ಗಾಲ್ಫ್ ಕ್ರಿಕೆಟ್ ಎಂದು ಶೋಕಿತನದಲ್ಲೇ ಮೈಮರೆತ ಅಂಬಿಯನ್ನು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಮತದಾರರು ಮೊದಲ ಬಾರಿಗೆ ಸೋಲಿಸುವ ಮೂಲಕ ಎಚ್ಚರಿಕೆಯನ್ನು ಕೊಟ್ಟಿದ್ದರು. ಆದರೆ ಆಗಲೂ ತನ್ನ ತಪ್ಪು ತಿದ್ದಿಕೊಳ್ಳದ ಅಂಬಿಯನ್ನು ನಂತರದ ಸಂಸತ್ ಚುನಾವಣೆಯಲ್ಲೂ ಸೋಲಿಸಿದ್ದರು.

ಚಿತ್ರರಂಗದ ಜನಪ್ರಿಯತೆ, ಜನತೆ ನೀಡಿದ ಜನನಾಯಕ ಪಟ್ಟದ ಮೂಲಕ ಇಷ್ಟೊತ್ತಿಗಾಗಲೇ ಮುಖ್ಯಮಂತ್ರಿ ಸ್ಥಾನಕ್ಕೆ ಪೈಪೋಟಿ ನೀಡಬೇಕಿದ್ದ ಅಂಬಿ ಈಗ ಎಂಎಲ್‌ಎ ಟಿಕೆಟ್‌ಗೂ ಈ ಪರಿಯ ವಿರೋಧ ಎದುರಿಸಬೇಕಾಗಿ ಬಂದಿದ್ದು ವಿಪರ್ಯಾಸವಲ್ಲದೆ ಇನ್ನೇನು?

ಮಳವಳ್ಳಿ: ನರೇಂದ್ರಸ್ವಾಮಿಗೆ ಕಾಂಗ್ರೆಸ್ ಟಿಕೆಟ್

ಕಾಂಗ್ರೆಸ್ ಹೈಕಮಾಂಡ್ ಮುಂದೆ ನರೇಂದ್ರಸ್ವಾಮಿಗೆ ಟಿಕೆಟ್ ನೀಡಬಾರದೆಂದು ಮಾಜಿ ಶಾಸಕಿ ಮಲ್ಲಾಜಮ್ಮ ಎಷ್ಟೇ ಬಾಯಿ ಬಡಿದುಕೊಂಡರೂ ಮಳವಳ್ಳಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ನರೇಂದ್ರಸ್ವಾಮಿಗೆ ಖಚಿತವಾಗಿದೆ. ಕಾಂಗ್ರೆಸ್‌ನ ನಾಯಕರೇ ತಮ್ಮ ಪಕ್ಷಕ್ಕೆ ನರೇಂದ್ರಸ್ವಾಮಿಯನ್ನು ಬರಮಾಡಿಕೊಂಡಿರುವಾಗ ಮಲ್ಲಾಜಮ್ಮ, ಡಾ.ಮೂರ್ತಿ, ಯಮದೂರು ಸಿದ್ದರಾಜು ಅವರ ವಿರೋಧ ಲೆಕ್ಕಕ್ಕಿಲ್ಲದಂತಾಗಿದೆ.



ಕಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಯಮದೂರು ಸಿದ್ದರಾಜುಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿದ್ದರಿಂದ ಮತ್ತೋರ್ವ ಕಾಂಗ್ರೆಸ್ ನಾಯಕ ಸಿದ್ದರಾಮಯ್ಯನವರ ಕಟ್ಟಾ ಬೆಂಬಲಿಗರೆಂದೇ ಗುರುತಿಸಿಕೊಂಡಿರುವ ನರೇಂದ್ರಸ್ವಾಮಿ ವಿಧಿ ಇಲ್ಲದೆ ಪಕ್ಷೇತರನಾಗಿ ಸ್ಪರ್ಧಿಸಿದ್ದರು. ಅದಕ್ಕೂ ಮುನ್ನ ಎರಡು ಬಾರಿ ಸೋತಿದ್ದ ನರೇಂದ್ರಸ್ವಾಮಿಗೆ ಕಾಂಗ್ರೆಸ್ 'ಕೈ' ಕೊಟ್ಟರೂ ಕ್ಷೇತ್ರದ ಮತದಾರ ಮಾತ್ರ 'ಕೈ' ಬಿಡಲಿಲ್ಲ. ಸಿದ್ದರಾಮಯ್ಯನವರ ಆಶೀರ್ವಾದದಿಂದ ಪಕ್ಷೇತರನಾಗಿ ಕಣಕ್ಕಿಳಿದ ನರೇಂದ್ರಸ್ವಾಮಿಗೆ ಗೆಲುವನ್ನು ತಂದು ಕೊಟ್ಟಿದ್ದ ಮತದಾರರು, ಅಧಿಕೃತ ಕಾಂಗ್ರೆಸ್ ಅಭ್ಯರ್ಥಿ ಯಮದೂರು ಸಿದ್ದರಾಜು ಅವರು ಠೇವಣಿ ಕಳೆದುಕೊಳ್ಳುವಂತೆ ಮಾಡಿದ್ದರು.


ಗೆದ್ದು ಶಾಸಕನಾಗಿ, ಬದಲಾದ ರಾಜಕೀಯ ಬೆಳವಣಿಗೆಯಲ್ಲಿ ಸಚಿವರಾಗಿ, ನಂತರ ಅದನ್ನು ಕಳೆದುಕೊಂಡು, ಕೊನೆಗೆ ಶಾಸಕ ಸ್ಥಾನದಿಂದ ಅನರ್ಹಗೊಂಡು, ಕಾನೂನು ಹೋರಾಟ ಮೂಲಕ ಅದನ್ನು ಮತ್ತೆ ದಕ್ಕಿಸಿಕೊಂಡವರು ನರೇಂದ್ರಸ್ವಾಮಿ.

ಈಗ ಅವರು ಅಧಿಕೃತ ಕಾಂಗ್ರೆಸ್ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿಯಲಿದ್ದಾರೆ. ಮತದಾರ ಪ್ರಭು ಎಂತಹ ತೀರ್ಪು ನೀಡುತ್ತಾರೆ ನೋಡಬೇಕು.

ಬಹಳ ಅಭಿವೃದ್ಧಿ ಹೊಂದಿದ ರಾಜ್ಯವೆಂದು ಹೆಸರು ಪಡೆದ ಗುಜರಾತ್‌ನ ರಾಜಧಾನಿ ಅಹಮದಾಬಾದ್‌ನ ಅಭಿವೃದ್ಧಿ ಕಣ್ಣಿಗೆ ಹೊಡೆಯತೊಡಗಿತು. ಬೀದಿಯ ಇಕ್ಕೆಲಗಳ ಕಾಲುಹಾದಿಯಲ್ಲಿ ಬಟ್ಟೆ ಹಾಸಿಕೊಂಡು ಮಲಗಿದ್ದ ಸ್ತ್ರೀ ಪುರುಷರೆಲ್ಲರೂ ಮೇಲೆದ್ದು ತಾವು ಮಲಗಿದ್ದ ಚಾದರ ಮತ್ತು ಬಟ್ಟೆಗಳನ್ನು ಮಡಚುವ ಗಡಿಬಿಡಿಯಲ್ಲಿದ್ದರು. ಅಲ್ಲಲ್ಲಿ ಮಹಿಳೆಯರು ಒಲೆ ಹೂಡಿ ಬೆಂಕಿ ಹೊತ್ತಿಸಿ ಬೆಳಗ್ಗಿನ ಆಹಾರ ಬೇಯಿಸಿಕೊಳ್ಳತೊಡಗಿದ್ದರು.

● ಸಾರಾ ಅಬೂಬಕ್ಕರ್

'ಅಭಿವೃದ್ಧಿ' ಹೊಂದಿರುವ ಮೋದಿಯ ರಾಜ್ಯದಲ್ಲಿ ಒಂದು ಪಯಣ



ನಮ್ಮ ಕೆಲವು ಲೇಖಕಿಯರು ಹಾಗೂ ಕೆಲವು ಮಹಿಳೆಯರು ಗುಜರಾತ್‌ಗೆ ಒಂದು ಪ್ರವಾಸ ಕಾರ್ಯಕ್ರಮ ಕೈಗೊಂಡಾಗ ಇಂತಹ ಕಾರ್ಯಕ್ರಮಗಳಲ್ಲಿ ಎಂದೂ ಪಾಲ್ಗೊಳ್ಳದಿದ್ದ ನಾನೂ ಕೂಡಾ ಆಸಕ್ತಳಾದೆ. ಕಳೆದ ಹತ್ತು ವರ್ಷಗಳಿಂದಲೂ ಗುಜರಾತಿನ ಕುರಿತು ಸಾಕಷ್ಟು ಕೇಳಿಯೂ ಓದಿಯೂ ಇದ್ದ ನನಗೆ ಧರ್ಮದ ಹೆಸರಿನಲ್ಲಿ ಮನುಷ್ಯರನ್ನು ಜೀವಂತವಾಗಿ ಬೆಂಕಿಗೆಸೆದು, ಗರ್ಭಿಣಿಯ ಹೊಟ್ಟೆ ಸೀಳಿ, ಜೀವಂತ ಶಿಶುವನ್ನು ತ್ರಿಶೂಲದಲ್ಲಿ ಎತ್ತಿಕೊಂಡು ಆ ಮಗುವನ್ನೂ ಆ ತಾಯಿಯನ್ನೂ ಜೀವಂತ ದಹಿಸಿದ ಆ ಅಮಾನವೀಯ ಮನುಷ್ಯರ ನಾಡಿನಲ್ಲಿ ಈಗಲೂ ಈ ಮತಾಂಧತೆ ಇದೆಯೇ ಎಂಬ ಕುರಿತ ಆಸಕ್ತಿಯೂ ನಾನು ಈ ಪ್ರವಾಸದಲ್ಲಿ ಪಾಲ್ಗೊಳ್ಳುವಂತೆ ಮಾಡಿತು. ಮುಖ್ಯಮಂತ್ರಿ ಮೋದಿಯ ಗುಜರಾತ್ ಬಹಳ ಅಭಿವೃದ್ಧಿ ಹೊಂದಿದೆ ಎಂದೂ, ಗುಜರಾತ್ ಒಂದು ಮಾದರಿ ರಾಜ್ಯವಾಗಿದೆಯೆಂದೂ ಭಾಷಣಗಳ ವರದಿ ಓದಿ ಅಂತಹ ಒಂದು ರಾಜ್ಯದಲ್ಲಿ ಕೆಲವು ದಿನ ಪ್ರವಾಸ ಮಾಡಿ ನನ್ನ ಕುತೂಹಲ ತಣಿಸಿಕೊಳ್ಳಲು ನಾನು ಈ ಪ್ರವಾಸಕ್ಕೆ ಸಿದ್ಧಳಾದೆ. ಗಾಂಧೀಜಿಯ ಕರ್ಮಭೂಮಿ ಸಾಬರಮತೀ ಆಶ್ರಮವೂ ನನ್ನನ್ನು ಆಕರ್ಷಿಸುತ್ತಿತ್ತು.

ಕೇರಳ ಮತ್ತು ನಮ್ಮ ಕರಾವಳಿ ಜಿಲ್ಲೆಗಳಲ್ಲಿ ಹಗಲಿನ ರೈಲು ಪ್ರಯಾಣವೆಂದರೆ ಅದರ ಸೊಗಸೇ ಚೇತೋಹಾರಿಯಾಗಿರುತ್ತದೆ. ಕಾಸರಗೋಡು ಮತ್ತು ಉಡುಪಿ ಜಿಲ್ಲೆಗಳ ಮಧ್ಯೆ ಹದಿನಾಲ್ಕು ನದಿಗಳು ಯಾವಾಗಲೂ ಸಾಗರದ ನೀರಿನಿಂದ ತುಂಬಿ ಹರಿಯುತ್ತಿದ್ದು ಸೂರ್ಯನ ಬಿಸಿಲಿಗೆ ಫಳಫಳನೆ ಹೊಳೆಯುತ್ತಿರುತ್ತವೆ. ಹಸಿರು ಹೊಲಗದ್ದೆಗಳು, ತೆಂಗುಕಂಗುಗಳ ತೋಟಗಳು ಇನ್ನಿತರ ಮರಗಳಿಂದು ಕಣ್ಮನ ತಣಿಸುವ ಹಸಿರು ಹೊದ್ದ ನೆಲ; ದೂರದಲ್ಲಿ ಪಶ್ಚಿಮಘಟ್ಟಗಳ ಸಾಲು. ಅಲ್ಲಲ್ಲಿ ಗುಡ್ಡಗಳನ್ನು ಕೊರೆದು ಸುರಂಗ ಮಾಡಿ ಮೈಲುದ್ದ ನಿರ್ಮಿಸಿದ ರೈಲು ಹಾದಿಗಳು. ಉತ್ತರದ ಗೋವಾದವರೆಗೂ ಇದೇ ದೃಶ್ಯ. ಗೋವಾ ದಾಟಿದ ಬಳಿಕ ಹಸಿರು, ನೀರು ಮಾಯವಾಗತೊಡಗಿ ಖಾಲಿ ನೆಲ ನಮಗೆದುರಾಗತೊಡಗುತ್ತದೆ. ಮಂಗಳೂರಿನಿಂದ ಹೊರಟ 24 ಗಂಟೆಗಳ ಬಳಿಕ ಅಹಮದಾಬಾದ್ ಸೇರಿ ಬೆಳಗಿನ ಏಳು ಗಂಟೆಗೆ ರೈಲು ನಿಲ್ದಾಣದಿಂದ ಹೊರಬಂದೆವು.

ನಿಲ್ದಾಣದಿಂದ ಹೊರಬಂದೊಡನೆ ಬಹಳ ಅಭಿವೃದ್ಧಿ ಹೊಂದಿದ ರಾಜ್ಯವೆಂದು ಹೆಸರು ಪಡೆದ ಗುಜರಾತ್‌ನ ರಾಜಧಾನಿ ಅಹಮದಾಬಾದ್‌ನ ಅಭಿವೃದ್ಧಿ ಕಣ್ಣಿಗೆ ಹೊಡೆಯತೊಡಗಿತು. ಬೀದಿಯ ಇಕ್ಕೆಲಗಳ ಕಾಲುಹಾದಿಯಲ್ಲಿ ಬಟ್ಟೆ ಹಾಸಿಕೊಂಡು ಮಲಗಿದ್ದ ಸ್ತ್ರೀ ಪುರುಷರೆಲ್ಲರೂ ಮೇಲೆದ್ದು ತಾವು ಮಲಗಿದ್ದ ಚಾದರ ಮತ್ತು ಬಟ್ಟೆಗಳನ್ನು ಮಡಚುವ ಗಡಿಬಿಡಿಯಲ್ಲಿದ್ದರು. ಅಲ್ಲಲ್ಲಿ ಮಹಿಳೆಯರು ಒಲೆ ಹೂಡಿ ಬೆಂಕಿ ಹೊತ್ತಿಸಿ ಬೆಳಗ್ಗಿನ ಆಹಾರ ಬೇಯಿಸಿಕೊಳ್ಳತೊಡಗಿದ್ದರು. ಪುರುಷರು ಐದು ಲೀಟರ್ ಪ್ಲಾಸ್ಟಿಕ್ ಕ್ಯಾನ್‌ನಲ್ಲಿ ದೂರದಿಂದ ನೀರು ತಂದಿಡುತ್ತಿದ್ದರು. ಮಕ್ಕಳು, ದೊಡ್ಡವರೆಲ್ಲರೂ ಮುಖ ತೊಳೆದುಕೊಳ್ಳಲು ಹಾಗೂ ಅಡುಗೆ, ಇನ್ನಿತರ ಎಲ್ಲಾ ಕೆಲಸಗಳಿಗಾಗಿ ಈ ನೀರನ್ನು ಉಪಯೋಗಿಸುತ್ತಿದ್ದರು. ಈ ಜನರ ಬಡತನ ಕಣ್ಣಿಗೆ ರಾಚುತ್ತಿತ್ತು, ಚಿಕ್ಕ ಮಕ್ಕಳು ತೆವಳುತ್ತಾ ಅಲ್ಲೇ ಮಲ, ಮೂತ್ರ ವಿಸರ್ಜನೆ ಮಾಡುತ್ತಿದ್ದವು. ತಾಯಂದಿರು ಅದನ್ನು ಕಾಗದದ ಚೂರಿನಿಂದ ಒರೆಸಿ ತೆಗೆಯುತ್ತಿದ್ದರು. ನಾವು ಬೆಳಗಿನ ಏಳು ಗಂಟೆಗೆ ಬಸ್ಸಿನಲ್ಲಿ ನಮ್ಮ ಪ್ರಯಾಣ ಹೊರಟಾಗ ಗುಜರಾತಿನ ರಸ್ತೆಗಳ ಪಕ್ಕಗಳಲ್ಲಿ ಕಂಡುಬರುತ್ತಿದ್ದುದು ಇದೇ ದೃಶ್ಯವಾಗಿತ್ತು.

ಗಾಂಧೀಜಿಯ ಸಾಬರಮತಿ ಆಶ್ರಮ ಅಹಮದಾಬಾದಿನಿಂದ ಏಳು ಕಿಲೋಮೀಟರ್ ದೂರದಲ್ಲಿದೆ. ಸ್ವಾತಂತ್ರ್ಯ ಹೋರಾಟಕ್ಕಾಗಿ ಗಾಂಧೀಜಿ ಅಲ್ಲಿ ನೆಲೆಸಿ ಯಾವುದೇ ಐಷಾರಾಮಿ ಬದುಕನ್ನು ನಿರಾಕರಿಸಿ ತೀರಾ ಸರಳವಾಗಿ ಬದುಕಿದರು. ಕಸ್ತೂರಿ ಬಾ ಅವರೂ ಗಂಡನೊಡನೆ ಹೆಜ್ಜೆ ಹಾಕಿದರು. ಇಬ್ಬರಿಗೂ ತೀರಾ ಸರಳವಾದ ಒಂದೊಂದು ಕೋಣೆಗಳು. ಒಂದು ಕೋಣೆಯಲ್ಲಿ ವೃದ್ಧ ಗಾಂಧೀಜಿಯ ಬಳಿ ಕುಳಿತ ಪುಟ್ಟ ಹುಡುಗಿ ಇಂದಿರಾಪ್ರಿಯದರ್ಶಿನಿಯ ಭಾವಚಿತ್ರ. ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಅವರ ಅನುಯಾಯಿ ಅಬ್ದುಲ್ ಕಲಾಂ ಆಜಾದ್, ಗಡಿನಾಡ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್, ರಾಜ ಗೋಪಾಲಾಚಾರಿ, ಜವಾಹರಲಾಲ್ ನೆಹರೂ ಮುಂತಾದವರಿದ್ದ ಬೃಹತ್ ಫೋಟೋ ನೋಡುತ್ತಿದ್ದಂತೆ ನಮ್ಮ ಪ್ರವಾಸದ ವ್ಯವಸ್ಥಾಪಕರು ಅವಸರಿಸತೊಡಗಿದರು. "ಸ್ವಾಮಿ ನಾರಾಯಣ ದೇವಸ್ಥಾನದ ಬಾಗಿಲು ಹಾಕುವ ಮೊದಲು ಅಲ್ಲಿಗೆ ಹೋಗೋಣ ಬನ್ನಿ" ಎನ್ನತೊಡಗಿದನು. ಆಶ್ರಮದೊಳಗಿನ ಪುಸ್ತಕದ ಕೋಣೆ, ಗಾಂಧೀಜಿಯ ಕುರಿತ ಪುಸ್ತಕಗಳು ಇವು ಯಾವುದನ್ನೂ ಸಮನಾಗಿ ನೋಡಲು ಸಾಧ್ಯವಾಗಲಿಲ್ಲ. ಒಂದು ಇಡೀ ದಿನ ನೋಡಲು ವಿಷಯಗಳಿದ್ದ ಅಲ್ಲಿ ನಮಗೆ ದೊರೆತದ್ದು ಕೇವಲ ಒಂದು ಗಂಟೆಯೂ ಅಲ್ಲ. ದೂರದಲ್ಲಿ ಸಾಬರಮತಿ ಹರಿಯುತ್ತಿದ್ದಳು. ವ್ಯವಸ್ಥಾಪಕರು ಗಾಂಧೀ ಆಶ್ರಮಕ್ಕಿಂತ ಸ್ವಾಮಿ ನಾರಾಯಣ ದೇವಸ್ಥಾನವನ್ನು ಮಹಿಳೆಯರಿಗೆ ತೋರಿಸಲು ಉತ್ಸುಕರಾಗಿದ್ದರು!

ಮರುದಿನ ಪಶ್ಚಿಮ ತೀರದ ದ್ವಾರಕಾಗೆ ಹೊರಟೆವು. 450 ಕಿಲೋಮೀಟರ್ ದೂರದ ಪ್ರಯಾಣ. ಈ ಹಾದಿಯಲ್ಲಿ ಒಂದೆರಡು ನಗರಗಳು, ಕೆಲವು ಚಿಕ್ಕ ಚಿಕ್ಕ ಪಟ್ಟಣಗಳು. ಎಲ್ಲಿ ನೋಡಿದರೂ ಖಾಲಿ ಮೈದಾನದಂತಹ ಜಾಗ. ನೀರಿನ ಸೌಕರ್ಯವಿದ್ದಲ್ಲಿ ಕೃಷಿ. ತೆಂಗಿನ ಮರಗಳಂತೂ ಇಲ್ಲವೇ ಇಲ್ಲ, ಇಂತಹ ಧಾರಾಳ ಖಾಲಿ ಭೂಮಿ ಇರುವುದರಿಂದಲೇ ಮೋದಿ ಕೈಗಾರಿಕೋದ್ಯಮಿಗಳಿಗೆ ಬೇಕಾದಷ್ಟು ಭೂಮಿ ನೀಡಿ ಅವರನ್ನು ಗುಜರಾತಿಗೆ ಕರೆಸಿಕೊಳ್ಳುತ್ತಿದ್ದಾರೇನೊ! ಗುಜರಾತ್ ಅಭಿವೃದ್ಧಿ ಹೊಂದುತ್ತಿದೆ ಎಂದು ಹೇಳಿಕೊಳ್ಳುತ್ತಿದ್ದರೂ ಇಂತಹ ದೂರ ಪ್ರಯಾಣಗಳಲ್ಲಿ ಮಹಿಳೆಯರಿಗಾಗಿ ದಾರಿಯ ಲ್ಲೆಲ್ಲಿಯೂ ಶೌಚಾಲಯ ಇಲ್ಲವೇ ಇಲ್ಲ! ಪಂಜಾಬಿ ಡಾಬಾ ದಲ್ಲಿ ಮಧ್ಯಾಹ್ನ ಊಟಕ್ಕೆ ಸೌಕರ್ಯ ಮಾಡಿಕೊಂಡರೂ; ಸಮನಾದ ಶೌಚಾಲಯ ವ್ಯವಸ್ಥೆ ಇಲ್ಲದೆ ಮಹಿಳೆಯರು ಪರದಾಡುವಂತಾಯಿತು.

ಈ ಸಂದರ್ಭದಲ್ಲಿ ನನಗೆ ಅಮೆರಿಕಾ ನೆನಪಾಗುತ್ತಿದೆ. ಅಲ್ಲಿ ಎಷ್ಟು ದೂರದ ಪ್ರಯಾಣದಲ್ಲೂ ಪ್ರಕೃತಿಯ ಕರೆಗೆ ತೊಂದರೆ ಇಲ್ಲ; 100 ಕಿಲೋಮೀಟರಿಗೊಂದಾದ 'rest room' ಎಂಬ ಸೌಕರ್ಯ ಇದ್ದೇ ಇದೆ. ಪ್ರತಿ ಪೆಟ್ರೋಲ್ ಪಂಪ್ ಸ್ಟೇಷನ್ನಿನಲ್ಲೂ 'ವಿಶ್ರಾಂತ ಕೊಠಡಿ' ಇರುವುದು ನಿರ್ಬಂಧವಾಗಿದೆ. ಹಾಗೂ ಅಲ್ಲಿ ಪ್ರಕೃತಿಯ ಕರೆಗಾಗಿ ಹಣ ವಸೂಲು ಮಾಡುವ ಪರಿಪಾಠವೇ ಇಲ್ಲ, ನಮ್ಮ ದೇಶದಲ್ಲಿ ಪ್ರಕೃತಿಯ ಕರೆ ಕೂಡಾ ಹಣ ಸಂಪಾದನೆಯ ಹಾದಿ ತಾನೇ?

ದ್ವಾರಕಾ ಎಂಬ ದೇವಾಲಯ ನಗರವು ಸಾಗರ ತೀರದಲ್ಲಿದೆ. ಇಲ್ಲಿ ನಾವಿಳಿದುಕೊಂಡಿದ್ದ ಹೋಟೇಲಿನಲ್ಲಿ ಸರಬರಾಜಾಗುತ್ತಿರುವುದು ಉಪ್ಪು ನೀರು. ದಿನನಿತ್ಯ ಇಷ್ಟೊಂದು ಪ್ರವಾಸಿಗರು ಬರುತ್ತಿರುವ ಈ ನಗರದಲ್ಲಿ ಕುಡಿಯಲು ಹಾಗೂ ಅಡುಗೆಗೆ ಬಾಟ್ಲಿ ನೀರನ್ನು ಕೊಂಡುಕೊಳ್ಳುತ್ತಾರೆ. ಸಾಗರದ ನೀರನ್ನು ಶುದ್ಧೀಕರಿಸಿ ಉಪಯೋಗಿಸಲು ಕೊಲ್ಲಿ ರಾಷ್ಟ್ರಗಳು ಎಂದೋ ಪ್ರಾರಂಭಿಸಿವೆ ಎಂದು ಕೇಳಿದ್ದೇವೆ. ಆದರೆ ನರೇಂದ್ರ ಮೋದಿಯ ಗುಜರಾತ್ ಇನ್ನೂ ಈ ತಾಂತ್ರಿಕತೆಗೆ ಮನಸ್ಸು ಮಾಡಿಲ್ಲ, ದ್ವಾರಕಾದ ಈ ಖ್ಯಾತ ದೇವಸ್ಥಾನಕ್ಕೆ ಹೋಗುವ ಹಾದಿ ಇಕ್ಕಟ್ಟಾಗಿದ್ದು ಹಂದಿ ಮತ್ತು ನಾಯಿಗಳು ರಾಜಾರೋಷವಾಗಿ ಓಡಾಡಿಕೊಂಡಿವೆ. ಸಂಧ್ಯಾ ಸಮಯದ ಪೂಜೆಗೆ ಜನಪ್ರವಾಹವೇ ಹರಿದು ಬರುತ್ತಿದೆ.

ಇಲ್ಲಿನ ಸೋಮನಾಥ ದೇವಾಲಯಕ್ಕೆ ಘಜನಿ ಮಹಮ್ಮದ್ 17 ಬಾರಿ ಭೇಟಿ ನೀಡಿದ್ದು ಇತಿಹಾಸವಾಗಿದೆ. ಆತ ಇನ್ನೂ ಹತ್ತಿಪ್ಪತ್ತು ಬಾರಿ ಬಂದು ಕೊಳ್ಳೆ ಹೊಡೆದಿದ್ದರೂ ಮುಗಿಯದಷ್ಟು ಚಿನ್ನಬೆಳ್ಳಿಗಳು ಈ ದೇವಸ್ಥಾನದಲ್ಲಿರಬಹುದೆನ್ನಿಸಿತು! ದೇವರಮೂರ್ತಿಯಿಂದಾರಂಭಿಸಿ ಮೂರ್ತಿಯ ಪೀಠದ ಸುತ್ತಲೂ ಇರುವ ಜಾಗಗಳಲ್ಲಿ, ಗರ್ಭಗುಡಿಯೊಳಗೆ ಎಲ್ಲೆಡೆಗಳಲ್ಲೂ ಚಿನ್ನದ ತಗಡನ್ನು ಹೊದಿಸಲಾಗಿದೆ. ಒಂದು ದೊಡ್ಡ ಇಡೀ ಕಂಬಕ್ಕೆ ಚಿನ್ನದ ತಗಡಿನ ಹೊದಿಕೆ; ಹಾಗೆಯೇ ಅದರ ಬಳಿ ಇರುವ ಇನ್ನೊಂದು ಕಂಬಕ್ಕೆ ಬೆಳ್ಳಿಯ ತಗಡಿನ ಹೊದಿಕೆಯನ್ನು ಹೊದಿಸಲಾಗಿದೆ. ಸಾಗರ ತೀರದ ಈ ದೇವಸ್ಥಾನಕ್ಕೆ ಘಜನಿ ಮಹಮ್ಮದ್ ತನ್ನ ಸೈನ್ಯದೊಡನೆ ಬಂದು ಕೊಳ್ಳೆ ಹೊಡೆದದ್ದರಲ್ಲಿ ಆಶ್ಚರ್ಯವೇನೂ ಇಲ್ಲ, ರಾಜರಾದವರಿಗೆ ಇಂತಹ ಸ್ಥಳದಲ್ಲಿ ಆಕ್ರಮಣ ಮಾಡುವುದು ಸುಲಭದ ಕೆಲಸವೇ ಆಗಿರಬಹುದು.

ಇಲ್ಲಿಯೂ ಕೂಡಾ ದೇವಸ್ಥಾನಕ್ಕೆ ಹೋಗುವ ಹಾದಿ ಇಕ್ಕಟ್ಟಾಗಿದ್ದು ಬಸ್ಸು ಕಾರುಗಳು ಹೋಗಲು ಸಾಧ್ಯವಿಲ್ಲ, ಹಾಗೆಯೇ ಬೀದಿಯಲ್ಲಿ ಹಂದಿ, ನಾಯಿಗಳು ಧಾರಾಳವಾಗಿ ಓಡಾಡಿಕೊಂಡಿವೆ. ಗುಜರಾತ್ ಬಹಳ ಅಭಿವೃದ್ಧಿ ಹೊಂದಿದೆ ಎನ್ನುವವರು ಗುಜರಾತಿನ ಈ ದೇವಸ್ಥಾನಗಳ ಊರು ಮತ್ತು ಅಹಮದಾಬಾದ್‌ಗೆ ಒಮ್ಮೆ ಭೇಟಿ ನೀಡಬೇಕು.

ಗಾಂಧೀಜಿಯ ಹುಟ್ಟೂರು ಪೋರ್‌ಬಂದರ್ ನೋಡುವುದು ಕೂಡಾ ನಮ್ಮ ಕಾರ್ಯಕ್ರಮದಲ್ಲಿತ್ತು. ಗಾಂಧೀಜಿ ಹುಟ್ಟಿದ ಕೋಣೆಯ ಮುಂದೆ ಒಂದು ಸ್ವಸ್ತಿಕ್ ಚಿಹ್ನೆ ಇತ್ತು, ಹಿಂದಿನ ಕಾಲದ ಮೂರು ಮಹಡಿಗಳ ದೊಡ್ಡದಾದ ಮನೆ ಇದಾಗಿದ್ದು ಇವರ ತಂದೆ ಕರಮಚಂದ್ ಗಾಂಧಿ ದಿವಾನರಾಗಿದ್ದರೆಂದು ನಮ್ಮೊಡನಿದ್ದವರೊಬ್ಬರೆಂದರು. ಒಂದು ಕೋಣೆಯ ಒಂದು ಕಪಾಟಿನೊಳಗೆ ಗಾಂಧೀಜಿಯ ಬದುಕಿನ ಒಂದೆರಡು ಘಟನೆಗಳ ಸುದ್ದಿಯನ್ನೊಳಗೊಂಡ ಒಂದು ಪತ್ರಿಕೆ ಇತ್ತು, ಕಪಾಟಿನ ಬಾಗಿಲಿನ ಹಿಂದೆ ಸಮನಾಗಿ ಓದಲಾಗದಂತೆ ಆ ಪತ್ರಿಕೆಯನ್ನು ಇಡಲಾಗಿತ್ತು, 1948ರ ಜನವರಿ 31ರ ಪತ್ರಿಕೆ ಅದಾಗಿರಬಹುದೆನ್ನಿಸಿತು. ಅದರ ಒಂದು ಸುದ್ದಿಯ ತಲೆಬರಹ ಹೀಗಿತ್ತು: "ಗುಂಡಿಕ್ಕಿದವನನ್ನು ಕೊಲ್ಲಬೇಡಿ ಎಂದರು". ಈ ಸುದ್ದಿಯನ್ನು ಜನರು ಸಮನಾಗಿ ಓದಲಾಗದಂತೆ ಈ ಪತ್ರಿಕೆಯನ್ನಿಡಲಾಗಿತ್ತು! ಗುಜರಾತಿನಲ್ಲಿ ಗಾಂಧೀಜಿ ಅಪ್ರಸ್ತುತರಾಗಿದ್ದಾರೆಯೇ?

ಗಾಂಧಿ ಹುಟ್ಟಿದ ನಾಡಿನಲ್ಲಿ ಅವರ ರಕ್ತಸಂಬಂಧಿಗಳ ಕುರಿತು ವಿವರಿಸುವವರು, ಅಂತಹ ಮಾರ್ಗದರ್ಶಿಗಳೂ ನಮ್ಮ ಕಣ್ಣಿಗೆ ಬೀಳಲಿಲ್ಲ, ಗಾಂಧೀಜಿ ಹುಟ್ಟಿದ ಮನೆಯವರೆಗೆ ಬಸ್ಸು, ಕಾರುಗಳು ಹೋಗುವುದಿಲ್ಲ, ಬಸ್ಸನ್ನು ಕೆಲವು ಕಿಲೋಮೀಟರ್‌ಗಳಷ್ಟು ದೂರ ನಿಲ್ಲಿಸುತ್ತಿದ್ದು ಅಲ್ಲಿಂದ ರಿಕ್ಷಾದಲ್ಲಿ ನಗರದೊಳಗೆ ಪ್ರವೇಶಿಸಿ ಬಳಿಕ ಕೊಂಚ ದೂರ ನಡೆಯಬೇಕಾಯಿತು. ಗಾಂಧೀಜಿಯ ನಾಡಿನಲ್ಲಿ ಗಾಂಧೀಜಿಯನ್ನು ಹುಡುಕಬೇಕಾಯಿತು! ಇದರಿಂದೇನೂ ಆಶ್ಚರ್ಯಪಡಬೇಕಾಗಿಲ್ಲ, 78 ವರ್ಷದ ಮುದುಕ ಗಾಂಧೀಜಿ ಮೊಮ್ಮಕ್ಕಳ ಹೆಗಲ ಮೇಲೆ ಕೈಯಿಟ್ಟು ನೂರಾರು ಜನರ ನಡುವೆ ನಡೆದುಕೊಂಡು ಪ್ರಾರ್ಥನೆಗೆ ಹೋಗುವಾಗ ಅವರ ನಡುವಿನಿಂದ ನಾಥೂರಾಂ ಗೋಡ್ಸೆ ಎಂಬುವನು ಬಂದು ಗುಂಡಿಟ್ಟು ಅವರ ಹತ್ಯೆ ಮಾಡಿದನು. ಮಾತ್ರವಲ್ಲ ಬಳಿಕ ಆತನೆಂದೂ ತನ್ನ ಕೃತ್ಯಕ್ಕಾಗಿ ಪಶ್ಚಾತ್ತಾಪ ಪಡ[...] ಆತ ಮಾಡಿದ್ದು ಸರಿ ಎನ್ನುವವರು, ಆತನನ್ನು ವೈಭವೀಕ[...]ವವರು ಇಂದು ಅಧಿಕಗೊಳ್ಳುತ್ತಿದ್ದಾರೆ. ಈ ಕೃತ್ಯ ಈಗಾಗ[...] ಜನರ ಮನದಾಳದಿಂದ ಮರೆಯಾಗುತ್ತಿದೆಯೇ?

ಗುಜರಾತಿನಲ್ಲಿ ಪ್ರಖ್ಯಾತವಾದ ಆನಂದ್ ಹಾ[...] ಡೈರಿಯನ್ನಾಗಲಿ, 10 ವರ್ಷಗಳ ಹಿಂದೆ ಸಾಮೂಹಿ[...] ನರಮೇಧ ನಡೆದ ನರೋಡಾ ಪಾಟಿಯಾವನ್ನಾ[...] ನೋಡುವ ಕಾರ್ಯಕ್ರಮ ಈ ಪ್ರವಾಸದಲ್ಲಿರಲಿಲ್ಲ, ಹಲವ[...] ದೇವಸ್ಥಾನಗಳು ಮತ್ತು ಒಂದೆರಡು ಜೈನ ದೇವಾಲ[...]ಗಳನ್ನೂ ಸಂದರ್ಶಿಸಿದೆವು. ಮೌಂಟ್ ಅಬುವಿಗೆ ಹೋ[...] ಒಂದು ರಾತ್ರಿ ಅಲ್ಲಿನ ಗಡಗುಟ್ಟುವ ಚಳಿಯನ್ನೂ ಅನುಭ[...]ದೆವು. ಅಲ್ಲಿನ ದಿಲವಾರಾ ಜೈನ ದೇವಾಲಯ ದೊಳ[...] ಅಮೃತಶಿಲೆಯ ಕೆತ್ತನೆಗಳನ್ನು ನೋಡಿ ಆಶ್ಚರ್ಯ ಚಕಿತ[...] 500, 600 ವರ್ಷಗಳ ಹಿಂದೆ ಈ ಬೆಟ್ಟದ ಮೇಲೆ [...] ಶಿಲೆಗಳನ್ನು ಕೊಂಡೊಯ್ದದ್ದು ಈ ಕೆತ್ತನೆಗಳನ್ನು [...] ಸುಂದರವಾಗಿ ಜೋಡಿಸಿದ್ದು ಅದ್ಭುತವಾಗಿತ್ತು, ಈ ಕೆತ್ತನೆ[...] ಮುಂದೆ ತಾಜ್‌ಮಹಲಿನ ಸೌಂದರ್ಯ ಏನೇನ[...] ಅಲ್ಲವೆನ್ನಿಸದಿರದು.

ಗಾಂಧೀಜಿಯ ನಾಡು, ಅವರು ದೇಶದ ಸ್ವಾತಂತ್ರ್ಯ[...] ನಡೆಸಿದ ಹೋರಾಟ, ಅವರ ತ್ಯಾಗ, ಮಾನವತಾವಾ[...] ಎಲ್ಲವನ್ನೂ ನೆನಪಿಗೆ ತರಬೇಕಾಗಿದ್ದ ಗುಜರಾತಿನ[...] ಗಾಂಧೀಜಿಯನ್ನು ಹುಡುಕಬೇಕಾಯಿತು. ಗುಜರಾತಿನಿಂ[...] ಹಿಂತಿರುಗುವಾಗ ಮನದಲ್ಲಿ ಉಳಿದದ್ದು ತಲೆ ಮೇಲೊಂ[...] ಸೂರು ಇಲ್ಲದೆ ಕುಡಿಯುವ ನೀರಿಗಾಗಿ ಪರದಾಡುತ್ತ[...] ಬೀದಿಬದಿಯ ಕಾಲುದಾರಿಯಲ್ಲಿ ಮಣ್ಣಿನ ಮೇಲೊಂ[...] ಬಟ್ಟೆ ಹಾಸಿ ತಂದೆ, ತಾಯಿ ಪುಟ್ಟ ಮಕ್ಕಳ ನೂರಾ[...] ಕುಟುಂಬಗಳು ಮಲಗುತ್ತಿದ್ದ ದೃಶ್ಯ; ಅಲ್ಲೇ ಬದಿಯ[...] ಒಲೆ ಉರಿಸಿ ಆಹಾರ ಬೇಯಿಸುವ ದೃಶ್ಯ; ದೇವಸ್ಥಾನಗಳ[...] ಸುತ್ತಿಸಲು ಪ್ರವಾಸಿಗಳನ್ನು ಕೊಂಡೊಯ್ಯುತ್ತಿರುವ ನೂರಾ[...] ಬಸ್ಸುಗಳು, ಎಲ್ಲಕ್ಕಿಂತ ಹೆಚ್ಚಾಗಿ ಗಾಂಧೀಜಿಯ ನಾಡಿನ[...] ಹತ್ತು ವರ್ಷಗಳ ಹಿಂದೆ ನಡೆದ ನರಮೇಧದ ನೆನಪುಗಳ[...]

* * * *

ಗುಜರಾತಿನಲ್ಲಿ ಕಾಣದ ಗಾಂಧಿಯನ್ನು ನಾ[...] ತಮಿಳುನಾಡಿನ ಚೆನ್ನೈನಲ್ಲಿ ಕಂಡೆ. ಫೆಬ್ರವರಿ 16 ಮ[...] 17ರಂದು 'ಹಿಂದೂ' ಪತ್ರಿಕೆ ವರ್ಷದ ಅತ್ಯುತ್ತಮ ಕೃ[...] ಪ್ರಶಸ್ತಿ ನೀಡುವಂತಹ ಒಂದು ಅಂತರಾಷ್ಟ್ರೀ[...] ಕಾರ್ಯಕ್ರಮವನ್ನು ಆಯೋಜಿಸಿಕೊಂಡಿತ್ತು. ಎ[...] ರಾಜ್ಯಗಳಿಂದ ಮಾತ್ರವಲ್ಲದೆ ವಿದೇಶಗಳಿಂದಲೂ ಲೇಖಕ[...] ಆಗಮಿಸಿದ್ದರು. ಕರ್ನಾಟಕದಿಂದ ನನ್ನನ್ನು ಮತ್ತ[...] ವೈದೇಹಿಯನ್ನು ಆಮಂತ್ರಿಸಲಾಗಿತ್ತು.

ಇದೊಂದು ವಿಶಿಷ್ಟ ಕಾರ್ಯಕ್ರಮವಾಗಿತ[...] ಕಾರ್ಯಕ್ರಮದ ಉದ್ಘಾಟನೆಯೇ ಹೃದಯಂಗಮವ[...] ಅರ್ಥಗರ್ಭಿತವೂ ಆಗಿತ್ತು. ಈ ಕಾರ್ಯಕ್ರಮವನ[...] ಉದ್ಘಾಟಿಸಿದವರು ಮಹಾತ್ಮಾ ಗಾಂಧಿ ಹಾಗ[...] ರಾಜಗೋಪಾಲಾಚಾರಿಯವರ ಮೊಮ್ಮಗ ಗೋಪಾಲಕ[...] ಗಾಂಧಿಯವರು. ಇವರು ಗಾಂಧೀಜಿ ಹಾಗ[...] ರಾಜಾಜಿಯವರ ನಡುವೆ ಓಡಾಡಿದ್ದ ಪತ್ರಗಳನ್ನು ಸಂಪಾದಿ[...] ಅತ್ಯುತ್ತಮ ಕೃತಿಯೊಂದನ್ನು ಪ್ರಕಟಿಸಿದ್ದಾರೆ. ಇವ[...] ಉದ್ಘಾಟನಾ ಭಾಷಣದ ಬಳಿಕ ಈ ಕೃತಿಯಿಂದ ಆ[...] ಪತ್ರಗಳನ್ನು ಖ್ಯಾತ ನಟ ರಾಹುಲ್ ಬೋ[...] ಗಾಂಧಿಯಾಗಿಯೂ, ಯೋಗ್ ಜಾಪಿ ರಾಜಗೋಪಾಲಾಚಾ[...]ಯಾಗಿಯೂ ವೇದಿಕೆಯ ಎರಡು ಭಾಗಗಳ[...] ಕುಳಿತುಕೊಂಡು ಓದಿದರು. ಅವರ ಹಿಂದೆ ಗಾಂಧೀ[...] ಹಾಗೂ ರಾಜಾಜಿಯ ದೊಡ್ಡ ಚಿತ್ರಗಳನ್ನು ತೂಗ[...] ಹಾಕಲಾಗಿತ್ತು, ಈ ಸ್ವಾತಂತ್ರ್ಯ ಹೋರಾಟಗಾರರಿಬ್ಬರ[...] ಪರಸ್ಪರರನ್ನು ದೂರಿದ್ದು, ಹೊಗಳಿದ್ದು, ಸಲಹೆ ನೀಡಿದ[...] ತಪ್ಪುಗಳನ್ನು ಎತ್ತಿ ತೋರಿದ್ದು, ಚುಚ್ಚಿದ್ದು, ಹಾಸ್ಯ ಮಾಡಿದ[...] ಎಲ್ಲವನ್ನೂ ಅಂದಂದಿನ ದಿನಾಂಕ ಹಾಕಿ ಓದಿದರು. ತುಂ[...] ತುಳುಕುತ್ತಿದ್ದ ಸಭಾಂಗಣ ಅತ್ಯಂತ ನಿಶ್ಶಬ್ಧವಾಗಿದ್ದು ಸಭಿಕ[...] ಈ ಪತ್ರದ ಓದಿನಲ್ಲಿ ಎಷ್ಟೊಂದು ಮಗ್ನರಾಗಿದ್ದರೆಂದ[...] ಅದು ಮುಗಿದ ಕೆಲವು ನಿಮಿಷಗಳವರೆಗೂ ಸ[...] ಮೌನದಿಂದ ಎಚ್ಚೆತ್ತುಗೊಳ್ಳಲಿಲ್ಲ, ಅದನ್ನು ರಾಹುಲ್ ಬೋ[...] ಈ ರೀತಿ ಕೊನೆಗೊಳಿಸಿದರು.

1948, ಜನವರಿ 30 ಸಂಜೆ 5.30 ಗಂಟೆಗೆ ಪಶ್ಚಿ[...] ಬಂಗಾಳದ ಗವರ್ನರ್ ಯಾವುದೋ ಕಾರ್ಯಕ್ರಮ[...] ಹೊರಟಿದ್ದರು. ಆಗ ದೆಹಲಿಯಿಂದ ಒಂದು ಫೋನ್‌ಕಾಲ್ ಬಂತು. ಅವರು ರಿಸೀವರ್ ಎತ್ತಿಕೊಂಡಾಗ ಮೆಸೇಜ್ ಬಂತು,

'ಬಾಪೂ ಅಸಾಸಿನೇಟೆಡ್'

ಕಾರ್ಯಕ್ರಮ ಕೊನೆಗೊಂಡ ಬಳಿಕ ಕೆಲವು ನಿಮಿ[...] ಸಭಾಂಗಣದಲ್ಲಿ ಸ್ಮಶಾನ ಮೌನ ಆವರಿಸಿತು. ಬಳಿ[...] ಕರತಾಡನ ಮೊಳಗಿತು. ಈ ಗುಂಗಿನಿಂದ ಹೊರಬರಲು ನಮಗೆ ಅರ್ಧ ಗಂಟೆಯೇ ಹಿಡಿದಿರಬಹುದೆನ್ನಿಸಿತು.

ಗುಜರಾತಿನಲ್ಲಿ ಕಾಣದ ಗಾಂಧಿಯನ್ನು ನಾನ[...] ತಮಿಳುನಾಡಿನ ಚೆನ್ನೈನಲ್ಲಿ ಕಂಡೆ.

ಇಂತಹ ಒಂದು ಅತ್ಯುತ್ತಮ ಕಾರ್ಯಕ್ರಮವನ್ನು ಸಂಘಟಿಸಿ ಅತ್ಯಂತ ಶಿಸ್ತಿನಿಂದ ನೆರವೇರಿಸಿದ 'ಹಿಂದೂ' ಪತ್ರಿಕೆಗೆ ನಮ್ಮ ಹೃತ್ಪೂರ್ವಕ ಅಭಿನಂದನೆಗಳು.

ಒಮ್ಮೆ ಕೆಲವು ಹುಡುಗ, ಹುಡುಗಿಯರ ಗುಂಪು ಕಾಡುಮೇಡಿನಲ್ಲಿ ಸುತ್ತುತ್ತಿತ್ತು. ಅವರು ಸಸ್ಯ ಸಂಗ್ರಹಣೆಗಾಗಿ ತಮ್ಮ ಗುರುಗಳೊಡನೆ ಬಂದಿದ್ದ ವಿದ್ಯಾರ್ಥಿಗಳು.

ಅವರು ಒಂದು ಗುಡ್ಡ ಪ್ರದೇಶದಲ್ಲಿ ಅತ್ತಿತ್ತ ನೋಡುತ್ತ ಸಾಗುತ್ತಿರುವಾಗ ವಿದ್ಯಾರ್ಥಿ ನಿಧಾನವಾಗಿ ಒಲ್ಲದ ಮನಸ್ಸಿನಿಂದ ಕಾಲೆಳೆದುಕೊಂಡು ತ್ತಿದ್ದ. ಅವನಿಗಾಗಲೇ ಬೆಳಗ್ಗೆ ತಿಂದ ತಿಂಡಿ ಕರಗಿಹೋಗಿ ಪುನಃ ಖಾಲಿಯಿಟ್ಟಿತ್ತು. ಗುರುಗಳು ಯಾಕಪ್ಪ ಹೀಗೆ ಎಳೆದಾಡಿಕೊಂಡು ತ್ತಿರುವೆ ಎಂದಾಗ ಅವನು ತಿಂಡಿ ಸಾಲಲಿಲ್ಲ ಎಂದು ಗೊಣಗುಟ್ಟಿದ. ಗಳು "ಹೋಗಲಿ, ಈ ಗಿಡವನ್ನು ನೋಡು, ಇದೇನು ಹೇಳು" ಗ, "ಅದೇನೊ ಗೊತ್ತಿಲ್ಲ" ಎಂಬ ಉದಾಸೀನದ ಉತ್ತರ. ಅದರ ನ್ನಾದರೂ ನೋಡಿ ಹೇಳು ಎಂದು ಗುರುಗಳು ಮತ್ತೆ ಹೇಳಿದಾಗ ವುದೊ ಹಕ್ಕಿ ರೆಕ್ಕೆ ಹರಡಿಕೊಂಡಂತೆ ಇದೆ" ಎಂಬ ಉತ್ತರ ಂಥ ಬಂದಿತು. ಹೋಗಲಿ, ಅದರ ವಾಸನೆ ಹೇಗಿದೆ ಎಂದು ಾಗ ವಿದ್ಯಾರ್ಥಿಯು ಒಂತರಾ ಸೆಂಟಿನ ವಾಸನೆ ಬರುತ್ತಿದೆ ಎಂದು ಸಿಟ್ಟುಗೊಂಡ ಗುರುಗಳು "ಏನಯ್ಯಾ ಸೈನ್ಸ್ ವಿದ್ಯಾರ್ಥಿಯಾದ ಸ್ವಲ್ಪ ಸೈಂಟಿಫಿಕ್ ಆಗಿ ವಿವರಿಸಲು ಬರುವುದಿಲ್ಲವೆ?" ಎನ್ನುತ್ತಿರುವಾಗ ು ಸುಮ್ಮನೆ ಕಣ್‌ಕಣ್ ಬಿಟ್ಟ. ಅವನ ಪಕ್ಕದಲ್ಲೇ ಇದ್ದ ಮತ್ತೊಬ್ಬ ರ್ಥಿ ಬಡಿದೆಬ್ಬಿಸಿದಂತೆ "ಅಯ್ಯೋ! ಇದು ಆರ್ಕಿಡ್!" ಎಂದು ಕೂಗಿಕೊಂಡ. ವರೆಗೆ ಹಸಿವಿನಿಂದ ಬೇರೇನೂ ಯೋಚಿಸಲು ಆಗದಿದ್ದವನು ತಲೆಗೆ ಕೊಟ್ಟಂತೆ ಚುರುಕಾಗಿ ಆ ಆರ್ಕಿಡ್ ಗಿಡವನ್ನು ಒಂದೇ ಏಟಿಗೆ ಕಿತ್ತು ಸಸ್ಯ ಸಂಗ್ರಹಣೆಯ ಚೀಲದೊಳಕ್ಕೆ ತುರುಕಿಕೊಂಡ.

ಇನ್ನೊಬ್ಬ ವಿದ್ಯಾರ್ಥಿಯ ಕೂಗನ್ನು ಕೇಳಿ ಅಲ್ಲಲ್ಲಿ ಚದುರಿದ್ದ ಉಳಿದ ರ್ಥಿಗಳು ಓಡಿಬಂದರು. ಆ ಆರ್ಕಿಡ್ ಆಗಲೇ ಆ ಆಲಸಿ ವಿದ್ಯಾರ್ಥಿಯ ಯೊಳಡಗಿತ್ತು. ಅವನು ಉಳಿದ ಹುಡುಗರಿಗೆ ಆರ್ಕಿಡನ್ನು ತೋರಿಸಲಿಲ್ಲ. ನನ್ನ ಲಾಲಿಪಾಪ್" ಎನ್ನುವ ಮಗುವಿನಂತೆ "ಇದನ್ನು ನಾನು ಮೊದಲು ದವನು ಇದು ನನ್ನದು" ಎಂದುಬಿಟ್ಟ. ಉಳಿದವರು ನಿರಾಶೆಗೊಂಡರು. ಗೆ ಗುರುಗಳು ಜೋರು ಮಾಡಿದಾಗ ವಿಧಿಯಿಲ್ಲದೆ ಆ ಆರ್ಕಿಡ್ ನ್ನು ಅವನು ತನ್ನ ಒಡನಾಡಿಗಳಿಗೆ ನೋಡಲು ಕೊಡಬೇಕಾಯಿತು. ವಿದ್ಯಾರ್ಥಿಗಳು ಆ ಹೂವನ್ನು ನೋಡಿ, ಇದೇ ಆರ್ಕಿಡ್‌ನ ಒಂದು ರಿ ತಮ್ಮ ಸಂಗ್ರಹಣೆಗೂ ಬೇಕಲ್ಲಾ ಎಂದು ಪರಿತಪಿಸಿ ಹುಡುಕಾಡ ಗಿದರು. ಆಸೆ ನಿರಾಸೆಗಳ ಸಂಭ್ರಮದಲ್ಲಿ ಕಿರುಚಾಡುತ್ತ ಒಬ್ಬರನೊಬ್ಬರು ಸುತ್ತ, ಅದೇ ಗಿಡ ತಮಗೂ ಸಿಕ್ಕಿದಾಗ ಕೇಕೆ ಹಾಕಿ ನಗುತ್ತ ಆರ್ಕಿಡ್‌ನ್ನು ತಮ್ಮ ಸಂಗ್ರಹಣೆಗೆ ಸೇರಿಸಿದರು. ಇದು ಬಿ.ಜಿ.ಎಲ್. ಸ್ವಾಮಿಯವರ ು ಹೊನ್ನು' ಗ್ರಂಥದಲ್ಲಿ ಉದ್ಧೃತವಾಗಿರುವ ಒಂದು ಪ್ರಸಂಗ.

ಆರ್ಕಿಡ್‌ಗಳು ಸಹಜವಾಗಿ ಬೆಳೆವ ರಮ್ಯಸ್ಥಾನಗಳ ಪ್ರಭಾವವೊ, ಆರ್ಕಿಡ್ ಗಳ ವಿಶೇಷ ರಚನೆ, ವರ್ಣ ವಿನ್ಯಾಸಗಳ ಅನನ್ಯತೆಯಿಂದಲೊ, ಸಸ್ಯಶಾಸ್ತ್ರದ ರ್ಥಿಗಳಿರಲಿ ಜನಸಾಮಾನ್ಯರೂ ಸಹ ಇವುಗಳ ಅಂದಚಂದ, ದುರ್ಗಮ ಗಳಿಂದ ಆಕರ್ಷಿತರಾಗಿ ಮರುಳಾಗುತ್ತಾರೆ.

ಮೇಲೆ ಹೇಳಿದ ಪ್ರಸಂಗದಲ್ಲಿ ವಿದ್ಯಾರ್ಥಿಗಳು ಕಿತ್ತಾಡುವಂತೆ ಮಾಡಿದ್ದು



ಶ್ವೇತಸುಂದರಿ ಹೆಬನೇರಿಯಾ

'ಹೆಬನೇರಿಯಾ ಸೂಸನ್ನೆ' ಎಂಬ ಶ್ವೇತವರ್ಣದ ಸುಂದರ ಆರ್ಕಿಡ್. ಸಾಮಾನ್ಯವಾಗಿ ಆರ್ಕಿಡ್‌ಗಳು ದೊಡ್ಡ ಮರಗಳ ಮೇಲೆ ಅಪ್ಪು ಸಸ್ಯಗಳಾಗಿ ಬೆಟ್ಟಗುಡ್ಡಗಳ ಕಾಡುಗಳಲ್ಲಿ ಕಾಣಸಿಗುತ್ತವೆ. ಆದರೆ ಹೆಬನೇರಿಯಾ ಅದೇ ಪರಿಸರದಲ್ಲಿ ಭೂಮಿಯಿಂದಲೇ ಅವತರಿಸುವ ತಕ್ಷಣವೇ ಕೈಗೆ ಸಿಗುವ ಆರ್ಕಿಡ್.

ಹೆಬನೇರಿಯಾಕ್ಕೆ ಹೆಬನೇರಿಯಾ ಸೂಸನ್ನೆ, ಪ್ಲಾಟಾಂತಿರ ಸೂಸನ್ನೆ, ಸೂಸನ್ ಆರ್ಕಿಡ್ ಎಂಬೆಲ್ಲಾ ವೈಜ್ಞಾನಿಕ ಹೆಸರುಗಳೊಡನೆ 'ಗೌರಿ ಹೂ' ಎಂಬ ಮುದ್ದಾದ ಕನ್ನಡದ ಹೆಸರೂ ಇದೆಯಂತೆ!

ಭೂಮಿಯಲ್ಲಿ ಹುಟ್ಟುವ ಹೆಬನೇರಿಯಾ ಆರ್ಕಿಡ್‌ಗೆ ನೆಲದೊಳಗೆ ಒಂದು ಗೆಡ್ಡೆಯಿದ್ದು ಅದರಿಂದ ಹೊರಟ ಕಾಂಡ ನೆಲದಿಂದ ಮೇಲಕ್ಕೆ ಬರುತ್ತದೆ. ನಾಲ್ಕಾರು ಹಸಿರು ಎಲೆಗಳ ನಡುವೆ ಶುಭ್ರಶ್ವೇತ ವರ್ಣದ ಐದಾರು ಹೂವುಗಳಿರುತ್ತವೆ. ಹೆಬನೇರಿಯಾದ ಎರಡು ದಳಗಳ ಅಂಚು ಸೀಳು ಸೀಳಾಗಿದ್ದು ಚಿಟ್ಟೆಯನ್ನು ಹೋಲುವುದರಿಂದ ಇದನ್ನು 'ಬಟರ್ ಫ್ಲೈ ಆರ್ಕಿಡ್' ಎಂದೂ ಕರೆಯುತ್ತಾರೆ. ಮತ್ತೊಂದು ದಳದಿಂದ ನೀಳವಾದ ಒಂದು ಮಕರಂದಭರಿತ ಚೀಲ ತೂಗುತ್ತಿರುತ್ತದೆ. ಶುಭ್ರತೆಯ ಸಂಕೇತವಾದ ಶ್ವೇತವರ್ಣ, ದಳಗಳ ವಿಶೇಷ ನಿರ್ಮಿತಿ, ವಿಚಿತ್ರ ರಚನೆಯಾದ ಮಕರಂದದ ಚೀಲ ಇವೆಲ್ಲಕ್ಕೂ ಮೆರುಗು ಕೊಟ್ಟಂತೆ ಹೂವಿನ ಸುವಾಸನೆ ಹೆಬನೇರಿಯಾವನ್ನು ಅಪ್ರತಿಮ ಪುಷ್ಪ ಸುಂದರಿಯನ್ನಾಗಿಸಿದೆ.

ಹೆಬನೇರಿಯಾ ಆರ್ಕಿಡ್‌ಗಳು ನಮ್ಮ ಪಶ್ಚಿಮಘಟ್ಟಗಳ ಬೆಟ್ಟಗಳ ನಡುವಣ ಬಯಲಿನಲ್ಲಿ ಆಗಸ್ಟ್, ಸೆಪ್ಟೆಂಬರ್ ತಿಂಗಳುಗಳಲ್ಲಿ ಕಾಣಸಿಗುತ್ತವೆ. ಕೊಡಗಿನ ಜನರ ಕೃಷಿಕಾರ್ಯದಲ್ಲಿ ಹೆಬನೇರಿಯಾ ಅರ್ಥಾತ್ ಗೌರಿ ಹೂವಿಗೆ ಒಂದು ವಿಶಿಷ್ಟ ಸ್ಥಾನ, ಪರಂಪರೆ ಇದೆ. ಕೊಡಗಿನಲ್ಲಿ ಗದ್ದೆ ನಾಟಿಯಾದ ಮೇಲೆ ನೇಗಿಲು ಪೂಜೆ, ಕೈಲ್ ಮುಹೂರ್ತದ ಆಯುಧ ಪೂಜೆಗೆ ಗೌರಿ ಹೂವು ಅಥವಾ ಹೆಬನೇರಿಯಾ ಬೇಕೇಬೇಕು. ಹೀಗೆ ಹೆಬನೇರಿಯಾ ಕೊಡಗಿನ ಕೃಷಿ ಸಂಸ್ಕೃತಿಯ ಒಂದು ಅಂಗವಾಗಿದೆ. ಕೊಡವರು ದೊಡ್ಡ ಹೂವನ್ನು ಬಿಡುವ ಹೆಬನೇರಿಯಾ ಪ್ರಬೇಧಕ್ಕೆ 'ಎಮ್ಮೆ ಮಲೆ' ಎಂದೂ, ಚಿಕ್ಕ ಹೆಬನೇರಿಯಾ ಹೂವನ್ನು ಬಿಡುವ ಹೆಬನೇರಿಯಾ ಪ್ರಬೇಧಕ್ಕೆ 'ಪಯ್ಯಮಲೆ' (ಹಸುವಿನ ಮೊಲೆ) ಎಂದೂ ಹೇಳುತ್ತಾರೆ. ಬಹುಶಃ ಈ ಮಕರಂದದ ನಳಿಕೆಗಳು ಎಮ್ಮೆ ಮತ್ತು ಹಸುವಿನ ಕೆಚ್ಚಲಿನ ಮೊಲೆಗಳನ್ನು ಹೋಲುವುದರಿಂದ ಈ ಹೆಸರುಗಳು ಬಂದಿರಬೇಕು. ಚಿಕ್ಕ ಮಕ್ಕಳು ಹೆಬನೇರಿಯಾ ಹೂಬಾಲಗಳನ್ನು ಚಿವುಟಿ ಅದರ ಮಕರಂದವನ್ನು ಹೀರುತ್ತಾರಂತೆ!

ನಮ್ಮ ದೇಶದ ಒಬ್ಬ ಪ್ರಮುಖ ಸಸ್ಯ ಕಲಾವಿದರಾಗಿದ್ದ ಓ.ಟಿ. ರವೀಂದ್ರನ್‌ರು ಸಹ ಹೆಬನೇರಿಯಾ ಆರ್ಕಿಡ್ ಪ್ರೇಮಿಯಾಗಿದ್ದರು. ಅವರು ಸಹ ಕೊಡೈಕನಾಲ್ ಬೆಟ್ಟಗಳ ಇಳಿಜಾರಿನಲ್ಲಿ ಹೆಬನೇರಿಯಾವನ್ನು ಹುಡುಕಿಕೊಂಡು ಅಲೆದು ಅವುಗಳನ್ನು ಚಿತ್ರಿಸಿದ್ದಾರೆ. ಒಮ್ಮೆ ಮೂಡಿಗೆರೆಯಲ್ಲಿ ಅವರೊಡನೆ ಹೆಬನೇರಿಯಾವನ್ನು ನೋಡುವ ಅವಕಾಶ ನನಗೆ ಸಿಕ್ಕಿತ್ತು. ಅದು ಇದ್ದ ಜಾಗದಲ್ಲಿ ಯಾವುದೊ ಕಟ್ಟಡ ನಿರ್ಮಾಣದ ಸನ್ನಾಹವಿತ್ತು. ಆದರಿಂದ ಹೆಬನೇರಿಯಾವನ್ನು ಇಲ್ಲಿ ಬಿಟ್ಟರೆ ನಾಶವಾಗುವುದೆಂದು ನಾವು ಅದನ್ನು ತಂದು ನಮ್ಮ ಸ್ನೇಹಿತರ ತೋಟದಲ್ಲಿ ನೆಟ್ಟೆವು. ಅದು ಮುಂದಿನ ವರ್ಷ ಹೂಬಿಟ್ಟು ಅನಂತರ ಮಾಯವಾಯಿತು! ಬಹುಶಃ ಅದರ ಸಹಜ ನೆಲೆಯಿಂದ ಒಕ್ಕಲೆಬ್ಬಿಸಿದ್ದರ ಪರಿಣಾಮವಿರಬೇಕು!

ಒಂದು ಪುಟ್ಟ ಆಸೆ. ಅದೇನು ಆರ್ಕಿಡ್‌ಗಳು ಬೆಟ್ಟ, ಕಾಡು, ಮೇಡುಗಳಲ್ಲಿ ಮಾತ್ರ ಇರಬೇಕು? ನಮ್ಮಲ್ಲಿ ಇರಬಾರದೆ ಎನಿಸುತ್ತಿತ್ತು. ನಮ್ಮ ಕೋರಿಕೆಯನ್ನು ಮನ್ನಿಸುವಂತೆ ಹೆಬನೇರಿಯಾ ಆರ್ಕಿಡ್ ಮೈಸೂರಿನಲ್ಲೂ ತನ್ನ ಸಹಜ ನೆಲೆಯಲ್ಲಿ ಮನೆ ಮಾಡಿದೆ ಎಂದು ನಮ್ಮ ಪ್ರೊಫೆಸರ್ ಸದಾನಂದ್‌ರವರು ಹೇಳಿದ್ದರು. ಇದುವರೆಗೆ ಗುಪ್ತ ಧನವಾಗಿ ನಮ್ಮೂರಿನಲ್ಲಿದ್ದ ಹೆಬನೇರಿಯಾದ ಅಸ್ತಿತ್ವಕ್ಕೆ ಈಗ ಧಕ್ಕೆ ಬಂದಿದೆ. ನಮ್ಮಲ್ಲಿ ಹೆಬನೇರಿಯಾ ಇರುವ ತಾವಿನಲ್ಲಿ ಅಭಿವೃದ್ಧಿಯ ಕಾಮಗಾರಿ ನಡೆಯಬಹುದಂತೆ. ಹಾಗಾದರೆ ನಮ್ಮೂರಿನ ಹೆಮ್ಮೆಯ ಒಂದು ಗುಪ್ತಧನ ಗುಪ್ತವಾಗೇ ಅಳಿದು ಹೋಗುತ್ತದೆ. ಇಂದಿನ ದಿನಗಳಲ್ಲಿ ಪಶ್ಚಿಮಘಟ್ಟಗಳನ್ನು ಉಳಿಸಿ, ವನಸಂಪತ್ತನ್ನು ಉಳಿಸಿ ಘೋಷಣೆಗಳದ್ದೇ ಕಾರುಬಾರು. ಇವು ಬರಿ ಘೋಷಣೆ ಮಾತ್ರವೆ? ಸಸ್ಯಗಳು ನಮ್ಮ ಮುತ್ತುರತ್ನಗಳಲ್ಲವೆ?



● ಪದ್ಮ ಶ್ರೀರಾಮ

ಪುಸ್ತಕ ವಿಮರ್ಶೆ

ವರದಕ್ಷಿಣೆಗೆ ಚಾಟಿಯೇಟು



ಪುಸ್ತಕದ ಹೆಸರು: ಮದುವೆ ಮಾರ್ಕೆಟ್
ಲೇಖಕರು: ಮರ್ಯಂ ಇಸ್ಮಾಯಿಲ್ ಉಳ್ಳಾಲಬೈಲ್
ಪುಟಗಳು: 72 ಬೆಲೆ: 40/-
ಪ್ರಕಾಶಕರು: ನಾಗಮಣಿ ಜಗನ್ನಾಥ್, ಛಾಯಾ ಸಾಹಿತ್ಯ, ವಿಜಯನಗರ, ಬೆಂಗಳೂರು-40. 8971227876/9448974425

ವರದಕ್ಷಿಣೆ ಎಂಬ ಅನಿಷ್ಟ ಪದ್ಧತಿಯ ವಿರುದ್ಧ ಮುಸ್ಲಿಂ ಸಮುದಾಯದೊಳಗೆ ವರಲ್ಲೂ ಕರಾವಳಿ ಕರ್ನಾಟಕದ ಬ್ಯಾರಿ ಮುಸ್ಲಿಂ ಸಮುದಾಯದೊಳಗೆ ಟ್ಟಿಕೊಂಡಷ್ಟು ಬಂಡಾಯದ ಧ್ವನಿಗಳು ಮತ್ತು ಜನಾಂದೋಲನಗಳು ಈ ಕರ್ನಾಟಕದ ಯಾವೊಂದು ಸಮುದಾಯದೊಳಗೂ ಹುಟ್ಟಿಕೊಂಡಿಲ್ಲ. ಸಮುದಾಯದ ವರದಕ್ಷಿಣೆ ವಿರೋಧೀ ಚಳವಳಿಗಳಿಗೆ ಸುಮಾರು 30 ಗಳ ಚರಿತ್ರೆಯಿದೆ. ಇಷ್ಟಾಗಿಯೂ ಪರಿಸ್ಥಿತಿಯಲ್ಲಿ ಹೇಳಿಕೊಳ್ಳುವಂತಹ ಾವಣೆಯಾಗಿಲ್ಲ ಎಂಬುದು ಖೇದಕರ.

ಂದು ಸಂತಸದ ವಿಚಾರ ಮತ್ತು ಆಶಾದಾಯಕ ಬೆಳವಣಿಗೆಯೇನೆಂದರೆ ಮಹಿಳೆಯರು ಪರ್ದಾದ ಮುಸುಕು ಸರಿಸಿ ವರದಕ್ಷಿಣೆ ವಿರೋಧೀ ಳಿಗಳ ಭಾಗವಾಗಿ ಬೀದಿಗೆ ಇಳಿಯುತ್ತಿದ್ದಾರೆ. ವರದಕ್ಷಿಣೆ ವಿರೋಧೀ ಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ. ಈ ನಿಟ್ಟಿನಲ್ಲಿ ಕರಾವಳಿ ಟಕದ ಪ್ರತಿಭಾವಂತ ಕತೆಗಾರ್ತಿಯರಲ್ಲೊಬ್ಬರಾದ ಮರ್ಯಂ ಇಸ್ಮಾಯಿಲ್ ಳಬೈಲ್‌ರವರು 'ಮದುವೆ ಮಾರ್ಕೆಟ್' ಎಂಬ ಸುಂದರ ಮತ್ತು ಉದಾತ್ತ ಸ ಸಾರುವ ನಾಟಕವೊಂದನ್ನು ರಚಿಸಿ ವರದಕ್ಷಿಣೆ ವಿರೋಧೀ ಆಂದೋಲನಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ. 2011ರ ಕರ್ನಾಟಕ ಬ್ಯಾರಿ ಅಕಾಡೆಮಿ ಪ್ರಶಸ್ತಿಗೆ ಭಾಜನವಾದ 'ಬೋಲೆ ಮುಂಬಲ' ನಾಟಕ ಓದುಗ ಸಮೂಹಕ್ಕೆ ತಲುಪಬೇಕೆಂಬ ಇರಾದೆಯಿಂದ ಸ್ವತಃ ಅವರೇ ಕನ್ನಡಕ್ಕೆ ಅನುವಾದಿಸಿದ್ದಾರೆ.

ಮಧ್ಯಮ ವರ್ಗದ ದಂಪತಿಯೊಂದು ತಮ್ಮ ವಿಕೃತ ಮಗಳನ್ನು ಮಾಡಿಸಿ ಕಳುಹಿಸುವ ನಿಟ್ಟಿನಲ್ಲಿ ಅನುಭವಿಸುವ ಯಾತನೆಯನ್ನು ಧಾತುವಾಗಿಸಿ ಕಟ್ಟಿದ ಈ ನಾಟಕದ ಆರಂಭದಲ್ಲಿ ಮೇಲ್ಮಧ್ಯಮ ವರ್ಗದ ವಿಲಾಸಿ ಬದುಕಿನ ಶೋಕಿತನವನ್ನು ಗೇಲಿ ಮಾಡುತ್ತಾ ಉಳ್ಳವರ ಡಾಂಭಿಕತೆಯನ್ನು, ಸಾಚಾ ಮುಖದ ಹಿಂದಿರುವ ಕಪಟತೆಯನ್ನು ಲೇಖಕಿ ಕಟು ವ್ಯಂಗ್ಯದಿಂದ ಚುಚ್ಚುತ್ತಾರೆ. ಇದು ಎಷ್ಟು ಪರಿಣಾಮಕಾರಿಯಾಗಿದೆಯೆಂದರೆ ಶೋಕಿಲಾಲ ಶ್ರೀಮಂತರು ಮತ್ತು ಮೇಲ್ಮಧ್ಯಮ ವರ್ಗದ ಮಂದಿ ಇದು ತಮಗೇ ನೀಡಿದ ಪೆಟ್ಟೆಂದು ಬೆನ್ನು ಮುಟ್ಟಿ ನೋಡಬೇಕು.

ಹೆಣ್ಣಿನ ಅಂತರಾಳದ ದುಗುಡವನ್ನು ಅತ್ಯಂತ ಮನೋಜ್ಞವಾಗಿ ಚಿತ್ರಿಸಿದ ಲೇಖಕಿ ತನ್ನ ಸ್ತ್ರೀ ಪರ ಕಾಳಜಿಯಲ್ಲಿ ಮೈಮರೆತು ಸ್ತ್ರೀ ಸಂವೇದನೆಯೆಂದರೆ ಅದು ಪುರುಷ ದ್ವೇಷದ ಅಭಿವ್ಯಕ್ತಿಯೆಂಬಂತೆ ಬಿಂಬಿಸುವ ತಪ್ಪು ಮಾಡುವುದಿಲ್ಲ.

ತಿಳಿ ಹಾಸ್ಯಮಯವಾಗಿ ನಿರೂಪಿತವಾದ ಈ ನಾಟಕದಲ್ಲಿ ಮದುವೆ ದಲ್ಲಾಳಿಗಳ ಧೂರ್ತತೆ, ಹೆಣ್ಣು ಹೆತ್ತವರ ಸಂಕಟವನ್ನು ಲೇಖಕಿ ಸುಂದರವಾಗಿ ಕಟ್ಟಿ ಕೊಟ್ಟಿದ್ದಾರೆ. ಜೊತೆಜೊತೆಗೇ ವರದಕ್ಷಿಣೆ ವಿರೋಧೀ ಆಂದೋಲನವೊಂದನ್ನು ರೂಪಿಸುವ ಬಗೆ, ಆಂದೋಲನದಲ್ಲಿ ಬರೇ ಹೆಣ್ಣು ಹೆತ್ತವರು ಮಾತ್ರ ಪಾಲ್ಗೊಳ್ಳುವುದು, ಗಂಡು ಹೆತ್ತವರು ಇದು ತಮಗೆ ಸಂಬಂಧಿಸಿದ್ದಲ್ಲ ಎಂಬ ದಿವ್ಯ ನಿರ್ಲಕ್ಷ್ಯ ತೋರುವುದು, ವರದಕ್ಷಿಣೆ ವಿರೋಧೀ ಸಭೆಯೊಂದರಲ್ಲಿ ಮುಖ್ಯ ಭಾಷಣ ಮಾಡಲು ಆಹ್ವಾನಿತನಾದ ನಾಲ್ಕು ಗಂಡು ಮಕ್ಕಳ ತಂದೆಯಾಗಿರುವ ಧನ ಪಿಶಾಚಿಯೊಬ್ಬನ ಪೀಕಲಾಟ, ಢೋಂಗಿ ಆದರ್ಶವಾದಿಗಳ ಅಸಲಿಯತ್ತು ಎಲ್ಲವನ್ನೂ ಸರಳವಾಗಿ ಲೇಖಕಿ ನಿರೂಪಿಸಿದ್ದಾರೆ.


ಒಮ್ಮೆ ಹಿಡಿದರೆ ಒಂದೇ ಏಟಿಗೆ ಓದಿ ಮುಗಿಸುವಂತೆ ಓದುಗನನ್ನು ಹಿಡಿದಿಡುವ ಶಕ್ತಿ ಈ ಕೃತಿಗಿದೆ. ನಾಟಕದ ಕೇಂದ್ರ ಪಾತ್ರಗಳಲ್ಲೊಂದಾದ ಯುವತಿಯೊಬ್ಬಳು ತನ್ನ ಧರ್ಮೀಯನಲ್ಲದ ಯುವಕನೊಂದಿಗೆ ಪರಾರಿಯಾಗುವ 'ನಾಟಕ' ರೂಪಿಸಿ ಮನೆಮಂದಿಯನ್ನು ಚಿಂತೆಗೆ ನೂಕಿದಾಗ ಪ್ರತ್ಯಕ್ಷವಾಗುವ ಧರ್ಮರಕ್ಷಕ ಮತ್ತು ಸ್ತ್ರೀ ರಕ್ಷಕ ನೈತಿಕ ಪೊಲೀಸರ ಅಟ್ಟಹಾಸವನ್ನು ಲೇಖಕಿ ತನ್ನ ಕಟುವ್ಯಂಗ್ಯದ ಉರಿ ಶೈಲಿಯಲ್ಲಿ ಚುಚ್ಚುವ ರೀತಿ ಅನನ್ಯವಾಗಿದೆ. ಇದರೊಂದಿಗೆ ತಮ್ಮೆಲ್ಲಾ ಧೂರ್ತತೆಗೆ ಧರ್ಮವನ್ನು ಗುರಾಣಿಯಾಗಿ ಬಳಸುವ ಮುಸ್ಲಿಂ ಶ್ರೀಮಂತ ವರ್ಗಕ್ಕೆ ಲೇಖಕಿ ಇಲ್ಲಿ ಬಲವಾಗಿ ಚಾಟಿ ಬೀಸಿದ್ದಾರೆ.

ಈಗಾಗಲೇ 'ಶೂನ್ಯ' ಮತ್ತು 'ನೋವು ನಲಿವು' ಎಂಬ ಎರಡು ಕಥಾ ಸಂಕಲನಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ನನ್ನ ಸಹೋದರಿ ಮರ್ಯಂರಲ್ಲಿ ಬೆಳೆಯುತ್ತಿರುವ ಗಟ್ಟಿ ಪ್ರತಿಭೆ ಸ್ಪಷ್ಟವಾಗಿ ಕಾಣುತ್ತಿದೆ. ಭಾಷೆಯ ವೈಭವೀಕರಣವಿಲ್ಲದೇ ಬರೆಯುವ ಮರ್ಯಂ ಈ ನಾಟಕ ಕೃತಿಯಲ್ಲಿ ಕೆಲವೆಡೆ ಸನ್ನಿವೇಶಗಳನ್ನು ಅಗತ್ಯಕ್ಕಿಂತ ತುಸು ಹಿಗ್ಗಿಸಿರುವುದು ಮತ್ತು ಕೆಲವೆಡೆ ತೀರಾ ಕುಗ್ಗಿಸಿರುವುದು ಒಂದು ಮಿತಿ. ಇದನ್ನು ಅಷ್ಟೊಂದು ಗಂಭೀರವಾಗಿ ಪರಿಗಣಿಸಬೇಕಿಲ್ಲ.

ಇಸ್ಲಾಮಿಗೆ ವರದಕ್ಷಿಣೆ ಎಂಬ ಪದವೇ ಅನ್ಯ. ಇಸ್ಲಾಮಿನಲ್ಲಿ ಅದಕ್ಕೆ ತದ್ವಿರುದ್ಧವಾದ ಮಹರ್ (ವಧುದಕ್ಷಿಣೆ) ಕಡ್ಡಾಯವೆನ್ನುವಾಗ ಕೆಲವು ಪುರೋಹಿತಶಾಹಿಗಳು ಸತ್ಯವನ್ನು ಮರೆಮಾಚುವುದನ್ನು ಲೇಖಕಿ ಧೈರ್ಯದಿಂದ ಹೇಳಬೇಕಿತ್ತು. ಒಂದೆರಡು ಮಿತಿಗಳ ಮಧ್ಯೆಯೂ ಸಾಮಾಜಿಕ ಕ್ರಾಂತಿಗೆ ಈ ನಾಟಕ ಒಂದು ಮಹತ್ವದ ಕೊಡುಗೆ. ನಿಸ್ಸಂಶಯವಾಗಿ ಅನಿಷ್ಟ ವರದಕ್ಷಿಣೆ ಪದ್ಧತಿಯೊಂದಿಗೆ ರಾಜಿ ಮಾಡಿಕೊಂಡಿರುವವರ ಎಚ್ಚರಿಸುವ ಶಕ್ತಿ ಈ ಕೃತಿಗೆ ಇದೆ.

● ಇಸ್ಮತ್ ಫಜೀರ್

ಎಂಥ ಸುಂದರ ತಾಣ!



ಒಂದು ಪ್ರಹಸನ

'ದಿನನಿತ್ಯದ ಕೆಲಸದ ಜಂಜಾಟ! ಟ್ರಾಫಿಕ್ ಜಾಮಿನ ರಂಪಾಟ! ಗಂಡ-ಹೆಂಡಿರು ಬಿಡುವಾಗಿ ಕೂತು ಮಾತಾಡಿದ್ದೀರಾ! ಮಕ್ಕಳನ್ನು ಮುದ್ದು ಮಾಡಿದ್ದೀರಾ! ಬದುಕು ಇರೋದೆ ಆರೆಘಳಿಗೆ! ಯಾಕೆ ವೇಸ್ಟ್ ಮಾಡ್ತೀರಿ ಸುಮ್ಮಗೆ! ಈಗಲೇ ಬೆಳೆಸಿ ಪಯಣ ಉಡುಪಿ ಜಿಲ್ಲೆಗೆ. ಬನ್ನಿ ಇಲ್ಲಿದೆ ಮನತಣಿಸುವ ಆಹಾ! ಸುಂದರ ತಾಣ!' ಇಂಥಾದ್ದೊಂದು ಬೋರ್ಡನ್ನು ಉಡುಪಿ ಜಿಲ್ಲಾಡಳಿತ ಹಾಕಿದರೆ, ಅದರಲ್ಲಿ ಉತ್ಪ್ರೇಕ್ಷೆ ಏನೂ ಇರಲ್ಲ ಬಿಡಿ. ಈ ಜಿಲ್ಲೆಯಲ್ಲಿ ಅಂಥ ಮನತಣಿಸುವ ತಾಣಗಳು ಬೇಜಾನಾಗಿವೆ. ಅಂಥಾ ಒಂದು ಸುಂದರ ತಾಣದ ಮನೋವಿಹಾರಕ್ಕೆ ನಿಮ್ಮನ್ನು ಕರೆದುಕೊಂಡು ಹೋಗ್ತೇನೆ.. ಆರ್ ಯು ರೆಡಿ? ಸ್ಟಡಿ, ಗೋ! ವೆಲ್ ಕಮ್ ಟು ಬೆಂಗ್ರೆ.


ಉಡುಪಿಯಿಂದ ಎಂಟು ಕಿಲೋಮೀಟರ್ ದೂರದಲ್ಲಿ ಕಣ್ಣೆದುರಿಗೇ ಮಂದಗಮನೆ ಸುವರ್ಣ ಅಬ್ಬರದ ಅರಬ್ಬಿಯನ್ನು ಅಲಂಗಿಸಿ ಕೂಡುವ ಅಪೂರ್ವತಾಣದಲ್ಲಿ ನೀವು ನಿಂತಿದ್ದೀರಿ. ಎಡಕ್ಕೆ ಅಬ್ಬರದ ಸಮುದ್ರ! ಎದುರು ನದಿ-ಸಾಗರ ಸಮಾಗಮ! ಬಲಕ್ಕೆ ಶಾಂತ ಸುವರ್ಣೆ! ಸುವರ್ಣೆ ಏನು ನಿರಾಭರಣೆಯಲ್ಲ ಎಂಬಂತೆ, ಅವಳ ಮೈಮೇಲೆ ಆಭರಣಗಳಂತೆ ಒಪ್ಪದಲ್ಲಿ ಅಲಂಕೃತವಾಗಿರುವ ಒಂಬತ್ತು ದ್ವೀಪಗಳು (ತುಳುವಿನಲ್ಲಿ ಕುದ್ರು ಅಂತಾರೆ). ನೂರಕ್ಕೆ ನೂರು ಪರ್ಸೆಂಟ್ ನೀವು ಮೂಕವಿಸ್ಮಿತರಾಗಿಬಿಡ್ತೀರ.


ನಿಮ್ಮ ಮನದ ರೀಲುರಂಗೀಲ ನಿಮಗರಿವಿಲ್ಲದೇ ತೆರೆದುಕೊಂಡು ಬಿಡುತ್ತೆ. 70 ಎಂ.ಎಂ. ಈಸ್ಟ್‌ಮನ್ ಕಲರ್ ಚಿತ್ರ ಹರಡಿಕೊಂಡುಬಿಡುತ್ತೆ! ಅಲ್ಲಿ ನೀವು ನಿಮ್ಮ ಜೊತೆಗಿರುವ ಸಂಸಾರವನ್ನು ಮರೆತು, ನಿಮ್ಮ ಜವಾನಿ ಜಮಾನದ ಪ್ರೇಮಿಯ ಜೊತೆ ಆ ಲೋಕೇಶನಲ್ಲಿ ಡ್ಯುಯೆಟ್ ಹಾಡ್ತ ಇರ್ತೀರ! - ಬೇಕಿದ್ರೆ ಬೆಟ್ ಕಟ್ತೇನೆ. ನಾನು ಎಷ್ಟಿದ್ರು ನಿಮ್ಮ ಗೈಡ್ ಅಲ್ವಾ!


ನಿಮ್ಮ ಡ್ಯುಯಟಿಗೆ ಬ್ರೇಕ್ ಹಾಕಿ ಹೇಳ್ತೇನೆ- 'ಮಹನೀಯರೇ, ಮಹಿಳೆಯರೇ! ನೀವು ನಿಂತಿರ್ತಕ್ಕಂಥ ತಾಣವೇನಿದೆ, ಇದು ನಯನಮನೋಹರ ಮಾತ್ರವಲ್ಲ, ಬುದ್ಧಿಗೂ ಆರೋಗ್ಯಕರ! ನೋಡಿ ನಿಮ್ಮ ಎದುರು ಇರೋ ಈ ನದಿ-ಸಾಗರ ಸಂಗಮದ ಆಚೆ ಒಂದು ಊರು ಕಾಣ್ತ

"ಹಲೋ! ಅಸ್ಸಲಾಂ ವಲೇಕುಮ್... ಬಾಸ್... ಟೂರಿಸ್ಟುಗಳನ್ನು ಬೆಂಗ್ರೆ ಟ್ರಿಪ್ಪಿಗೆ ಕರ್ಕಂಡು ಬಂದಿದ್ದೀನಿ... ಹೌದು ಬಾಸ್! ಹೋದ ವಾರವೇ ಕರ್ಕಂಡು ಬರ್ಬೇಕಿತ್ತು... ಆದ್ರೆ ಇಲ್ಲಿ ಟೆನ್ಷನ್ ಆಗ್ಬಿಟ್ಟಿತ್ತಲ್ಲ ಬಾಸ್... ಅರೇ ಇಸ್ಕಿ... ನಿಮ್ಗೆ ಗೊತ್ತಿಲ್ವಾ... ಮಾರ್ಚ 19ರಂದು ಸಂಜೆ 7 ಗಂಟೆ ಹೊತ್ತಿಗೆ, ಅಡ್ಡಬೆಂಗ್ರೆಯ ಮಸೀದಿ ಹತ್ರದ ಜಾವೇದನ ಮನೆಗೆ ಇಪ್ಪತ್ತು ಜನ ಭಜರಂಗದಳದವರು ಬಂದ್ರು. ತೋಟದ ತೆಂಗಿನ ಮರಕ್ಕೆ ಕಟ್ಟಿ ಹಾಕಿದ ದನದ ಕರು ತೋರ್ಸಿ 'ಏನೋ ನಿಂಗೆ ತಿನ್ನಾಕೆ ದನದ ಮಾಂಸನೇ ಆಗ್ಬೇಕ! ಟೊಮ್ಯಾಟೊ ಸಾರನ್ನ ಉಡ್ಕಂಡು ಬದುಕಾಕೆ ಆಗಲ್ವ!' ಅಂತ ದಬಾಯಿಸಿದ್ರು. ಮಲ್ಪೆ ಪೊಲೀಸ್ ಠಾಣೆಗೆ ಫೋನು ಮಾಡಿ 'ಕಡಿಯಾಕೆ ದನ ತಂದವ್ರೆ ಬನ್ನಿ ಇಲ್ಲಿ.' ಅಂತ ದೂರುಕೊಟ್ರು. ಸುದ್ದಿ ತಿಳಿದು ಹೊಡೆಯ 50-60 ಸಾಬರ ಹುಡುಗರು ಅಲ್ಲಿ ಜಮಾಯಿಸಿದ್ರು. ಅಷ್ಟೊತ್ತಿಗೆ ಮುಸ್ಲಿಮ್ ಒಕ್ಕೂಟದ ಹುಡುಗ ಹುಸೇನ್ ಇದ್ದಾನಲ್ಲ, ಅವ್ನು ಬಂದು, ಸಾಬರ ಹುಡುಗ್ರನ್ನೆಲ್ಲ ಸಮಾಧಾನ ಮಾಡಿ ಶಾಂತವಾಗಿರೋಕೆ ಹೇಳ್ದ. ಮಲ್ಪೆ ಎಸ್.ಐ., ಪ್ಯಾದೆಗಳ ಜೊತೆ ಬಂದು ದನ ಸೀಜ್ ಮಾಡ್ಕಂಡು, ಎಲ್ಲಾರು ಚದುರಿ ಅಂತ ಜೋರು ಮಾಡಿ ಕಳ್ಸಿದ್ರು. ಅಷ್ರಲ್ಲಾಗ್ಲೆ ಭಜರಂಗದಳದವ್ರು ಒಬ್ಬ ವಯಸ್ಸಾದವ್ರಿಗೆ ಪೆಟ್ಟು ಹಾಕಿದ್ರು ಬಾಸ್. ಹುಸೇನ್ ಎಸ್.ಪಿ.ಗೆ ಫೋನ್ ಮಾಡಿ ವಿಷಯ ತಿಳಿಸ್ದ. ಸ್ಟೋರಿ ಅಲ್ಲಿಗೆ ಮುಗಿಲಿಲ್ಲ, ಮರು ದಿವ್ಸ ಸನಮ್ ಬಾರ್ ಹತ್ರ-ಬ್ಯಾನರ್ ಕಟ್ಟಾ, ಇದ್ದ ಮು[...] ಸಾಬ್ರು ಹುಡುಗರಿಗೆ ಬೈಕಲ್ಲಿ ಬಂದು ಹೊಡೆದುಹೋ[...] ಇಷ್ಟು ಕತೆ ಆಗಿದೆ... ಏನ್ ಬಾಸ್... ಕೇಸು ಹಾಕಿ[...] ಅಂತ ಕೇಳ್ತೀರಾ! ಅಂಗಡಿ ಡ್ಯಾಮೇಜಿಗೆ, ಹುಡು[...] ಹೊಡೆದಿದ್ದಕ್ಕೆ ಕಂಪ್ಲೇಟ್ ಕೊಟ್ಟವ್ರೆ... ಕೇಸಾಗಿದಿ[...] ಗೊತ್ತಿಲ್ಲ, ಆದ್ರೆ ಮಲ್ಪೆ ಎಸ್.ಐ. ಮುಂಜಾಗ್ರತಾ [...] ಅಂತ ಹನ್ನೊಂದು ಜನ ಹಿಂದೂ ಹುಡುಗ್ರು, ಹನ್ನೊ[...] ಜನ ಮುಸ್ಲಿಮ್ ಹುಡುಗ್ರ ಮೇಲೆ 107 ಸೆಕ್ಷನ್ ಪ್ರ[...] ನೋಟಿಸ್ ಕೊಟ್ಟು, ತಾಶಿಲ್ದಾರ ಹತ್ರ ಕರೆಸಿ ಮುಚ[...] ಬಾಂಡು ಬರೆಸಿಕೊಂಡಿದಾರೆ. ಹುಸೇನ 'ಸಾಬ್ರು ಹು[...] ಮ್ಯಾಲ್ಯಾಕೆ ಕೇಸು ಹಾಕಿದ್ದೀರಿ? ಅದರಲ್ಲಿ ಐದಾರು [...] ಸ್ಥಳದಲ್ಲೇ ಇರಲಿಲ್ಲ, ಗಲಾಟೆಗೆ ಕಾಲು ಕೆರೆದು, ಹುಡು[...] ಸಮಾಧಾನದಿಂದ ಇರೋ ಹಂಗೆ ನೋಡ್ಕೊಂಡಿದ್ದೇ[...] ಅಂತ ಕೇಳಿದ್ರೆ 'ನಮಗೆಲ್ಲ ಗೊತ್ತದೆ... ಯಾರಾಮೇ[...] ಕೇಸು ಹಾಕ್ಬೇಕು ಅಂತ ನೀನು ಹೇಳೋದು ಬ[...] ಅಂತ ಡಿವೈಎಸ್ಪಿ ಗದರಿದ್ರಂತೆ ಬಾಸ್! ಹುಡುಗ್ರಿಗೆ ಕೆ[...] ನೋಟಿಸ್ ನಾನು ನೋಡಿದೆ. 'ರಾಜಕೀಯ ಲಾ[...] ದುರುದ್ದೇಶದಿಂದ ಕೋಮುಹಿಂಸೆ ನಡೆಸಿ ರಕ್ತಪಾತ ಗೈಯ[...] ಸಜ್ಜಾಗಿದ್ದರು' ಅಂತ ಬರೆದವ್ರೆ! ಇಷ್ಟಾಗಿದೆ. ಎ[...] ದಿವ್ಸದಿಂದ ಥಂಡ ಆಗಿದೆ...ಮುಂದೆ ಹೆಂಗೋ ಗೊ[...] ಬಾಸ್... ಟೂರಿಸ್ಟ್ ಕಾಯ್ತವ್ರೆ... ಖುದಾಫಿಸ್..."

ಸಾರಿ, ಲೇಡಿಸ್ ಅಂಡ್ ಜಂಟ್ಲ್‌ಮೆನ್... ಈಗ ನ[...] ಬಾರ್ಜಲ್ಲಿ ಐತಿಹಾಸಿಕ ಹಂಗಾರಕಟ್ಟೆ ಬಂದ[...] ಹೋಗೋಣವಾ! ಸುಂದರ ಕುದ್ರುಗಳನ್ನು ಹಾ[...] ಸಂಸ್ಕೃತಿಯನ್ನು ಸವಿಯೋಣವಾ!




ದಾಳಿಗೆ ಗುರಿಯಾದ ಜಾವೀದ್‌ನ ಮನೆ


ಕೋಡಿ ಬೆಂಗ್ರೆಯಲ್ಲಿ ಪೊಲೀಸರು

ಪಡುತೋನ್ಸೆ ಯಾನೆ ಹೂಡೆ ಎಂಬ ಪುಟ್ಟ ಊರಿದೆ. ಅಲ್ಲಿಂದ ಉತ್ತರಾಭಿಮುಖವಾಗಿ ಮೂರು ಕಿ.ಮೀ. ಹೋದರೆ ಗಕ್ಕನೇ ಒಂದು ಸ್ಥಳಕ್ಕೆ ಬರುತ್ತೀರಿ. ಹಾಯ್! ನಿಮ್ಮ ಕಣ್ಣನ್ನು ನೀವೇ ನಂಬದಷ್ಟೂ ನಯನ ಮನೋಹರವಾದ ಸೀನು ತೆರೆದುಕೊಳ್ಳುತ್ತದೆ. ವಾವ್! ನೀವು ಕಾಣೋದೇನು!- ಬಲ ಬದಿ ಶಾಂತವಾಗಿ, ಹರಿಯುತ್ತಿರುವ ಸುವರ್ಣ ನದಿ. ಎಡಬದಿ ಭೋರ್ಗರೆಯುವ ಅರಬ್ಬಿ ಸಮುದ್ರ. ನಡುವಿನ ಒಂದು ಕಿ.ಮೀ. ಅಗಲದ ಭೂಮಿಯ ಬಾಗಿಲಲ್ಲಿ ನೀವು ಬಾಯ್ದೆರೆದು ನಿಲ್ಲುವಿರಿ. ವೆಲ್ ಕಮ್ ಟು ಅಡ್ಡ ಬೆಂಗ್ರೆ. ಹಾಗೇ, ಸವಿಯುತ್ತಾ ನಿಧಾನಕ್ಕೆ ಐದು ಕಿ.ಮಿ. ಬನ್ನಿ. ಆಣೆ ಮಾಡ್ತೇನೆ ಕಣ್ರೆ ನಿಮಗೆ ದಣಿವೆ ಆಗೋದಿಲ್ಲ! ಎಡ ಬಲ ನೋಡ್ತಾ 'ವಹ್ವಾ.. ಹೌ ಬ್ಯುಟಿಫುಲ್..ವಾವ್! ಹೌ ಟಾಲ್ ಕೊಕೊನೆಟ್ ಟ್ರೀಸ್..' ಅಂತ ಬರ್ತಾ ಚಕ್ಕನೇ ನಿಂತುಬಿಡ್ತೀರ. ಗಕ್ಕನೇ ಭೂಮಿ ಕೊನೆಯಾಗುತ್ತದೆ. ನಿಮ್ಮ ಇದೆಯಲ್ವ-ಅದೇ ಸಾಸ್ತಾನ. ಈಚೆ ಬಲಬದಿಯಲ್ಲಿ ನೋಡಿ. ಸುವರ್ಣೆಯ ಆಚೆ ದಡದಲ್ಲಿ ಒಂದು ಹಳೆ ಬಂದರು ಕಾಣ್ತ ಇದೆಯಲ್ವ? ಅದೇ ಹಂಗಾರಕಟ್ಟೆ ಬಂದರು! ಈ ಬಂದರು ವಿಜಯನಗರ ಸಾಮ್ರಾಜ್ಯದ ಕಾಲದ್ದು. ಅರಬ್ಬಿ ವರ್ತಕರು ತಮ್ಮ ವ್ಯಾಪಾರ ಸರಕುಗಳನ್ನು ಹಡಗಿನಲ್ಲಿ ತಂದು, ಹಂಗಾರಕಟ್ಟೆ ಬಂದರಿನಲ್ಲಿ ಇಳಿಸಿ ಇಲ್ಲಿಂದ ವ್ಯವಹಾರ ಕುದುರಿಸೋರು. ಮತ್ತೆ ಈ ಹಂಗಾರಕಟ್ಟೆ, ಸಾಸ್ತಾನ, ಅದರ ಪಕ್ಕದಲ್ಲಿರೋ ಸಾಲಿಗ್ರಾಮ, ಕೋಟ-ಪ್ರದೇಶಗಳ ಜನರ ಬದುಕಿನಿಂದಲೇ ಶಿವರಾಮ ಕಾರಂತರ ಖ್ಯಾತ ಕಾದಂಬರಿಯ ಪಾತ್ರಗಳು ಎದ್ದು ಬಂದಿವೆ ಕಣ್ರೆ. ಅಂಥ ಸಂಸ್ಕೃತಿವಂತ ಪ್ರದೇಶದಲ್ಲಿ ತಾವೀಗ ಇದ್ದೀರಿ!' (ನನ್ನ ಮೊಬೈಲಿನ ರಿಂಗ್ ಟೋನ್ ಹಾಡುತ್ತೆ- 'ಹಲೋ ಒನ್, ಟೂ, ತ್ರೀ ಮೈಕ್ ಟೆಸ್ಟಿಂಗ್....ಎಲ್ಲ ಗಂಡಸರಿಗೆ ಗುಡ್ಡು ಈವ್ನಿಂಗ್....) ಸಾರಿ, ಸಾರಿ ಬಾಸ್ ಕಾಲ್ ಮಾಡ್ತಿದ್ದಾರೆ. ಒಂದೇ ನಿಮಿಷ.. ಬಂದೆ...

ಭಜರಂಗದಳದ ಒಂದು ನೂರು ಜನ ಮಲ್ಪೆಯಿಂದ ಬೈಕಲ್ಲಿ ಬಂದು 'ನಿನ್ನೆ ಸಾಬ್ರು ಹುಡುಗ್ರು ಪಾಕಿಸ್ತಾನ್ ಜಿಂದಾಬಾದ್ ಅಂದವ್ರೆ, ಇವ್ರನ್ನು ಸುಮ್ನೆ ಬಿಡಬಾರ್ದು' ಅಂತ ಕಾಲು ಕೆರೆದು, ಅಡ್ಡಬೆಂಗ್ರೆ ಮಸೀದಿ ಹತ್ತಿರದ ಮೂರ್ನಾಕು ಮನೆಗಳ ಮೇಲೆ ಕಲ್ಲು ತೂರಿದ್ರು... ಹೂಂ ಜಾವೇದನ ಮನೆಗೂ ಡ್ಯಾಮೇಜ್ ಮಾಡಿದ್ರು... ಮತ್ತೆ ಹುಸ್ಸೇನ್ ಎಸ್.ಪಿ.ಗೆ ಫೋನ್ ಮಾಡಿದ. ಮುಸ್ಲಿಮ್ ಒಕ್ಕೂಟ, ಕೋಮುಸೌಹಾರ್ದ ವೇದಿಕೆಯವರು ಎಸ್.ಪಿ. ಆಫೀಸಿಗೆ ಹೋಗಿ ವಿಚಾರ ಹಿಂಗಾಗಿದೆ ಅಂತ ಮನವಿ ಕೊಟ್ಟು ಬಂದ್ರು. ಎಸ್.ಪಿ. ಪೊಲೀಸ್ ಫೋರ್ಸ್ ಹಾಕ್ಸಿದ್ರು. ಅಷ್ಟಾದ್ಮೇಲೂ 20ರ ರಾತ್ರಿ ಕೋಡಿಬೆಂಗ್ರೆಯ ಜಮಾಲನ ಅಂಗಡಿಗೆ ಕಲ್ಲು ಹೊಡದವ್ರೆ... ಅವತ್ತೇ ರಾತ್ರಿ ಸಾಬ್ರು ಹುಡುಗ್ರು ತನ್ನ ಕಾರು ಡ್ಯಾಮೇಜ್ ಮಾಡವ್ರೆ ಅಂತ ಭಜರಂಗಿ ಹರ್ಷವರ್ಧ ಪೊಲೀಸ್ರಿಗೆ ದೂರು ಕೊಡಕೆ ಹೋಗಿದ್ದ ಬಾಸ್. ಅದಾದ್ಮೇಲೆ ಮರುದಿವ್ಸ ಕೆಮ್ಮಣ್ಣಲ್ಲಿ

ಒಂದು ಪದ್ಯ:

ಅಡ್ಡ ಬೆಂಗ್ರೆಯ ಭಜರಂಗಿ ಹುಡುಗರು


ನಮ್ಮ ಅನ್ನದಲ್ಲಿ ಕಲ್ಲು,
ಕಲ್ಲು ಕಲ್ಲು ರಾಶಿ ಮಾಡಿ
ಸಾಬರ ಮನೆ ಮೇಲೆ
ತೂರಿ ಬಂದೆ.

ನಮ್ಮ ಮನೆಯ ಮೂಲೆಯ
ಮಿಡಿನಾಗರ;
ಸಾಬರ ಮನದಲ್ಲಿ
ಹಾಕಿ ಕೊಂದೆ.

ಹೆಂಡತಿಯ ಸೊಂಟ ಕಾಣುವ
ಸೀರೆಯ ಶೀಲಕ್ಕೆ ಕನಲಿ,
ಬುರ್ಖಿ ಹಾಕಿದ ಹೆಂಗಸರ
ಕಂಡು ಬೆಂದೆ.

ಏನೂ ಮಾಡಿದರೂ
ಸುಖವಿಲ್ಲ
ಹಂಚಿದ ದ್ವೇಷದ ಕೆಂಡ
ಹೊಟ್ಟೆ ತುಂಬಾ ತಿಂದೆ.

ಪ್ರಜಾತಂತ್ರದ ಐದು ಕೈಗಳು



ಲಾಠಿ ಮತ್ತು ಬೂಟುಗಳೇ
ಕೋಳ, ನೇಣು ಮತ್ತು ಗುಂಡುಗಳೇ
ಜೈ ಭಾರತ ಜನನಿಯ ತನುಜಾತೆ
ಉನ್ನತ ಪ್ರಜಾತಂತ್ರದ ಮುದ್ದಿನ ಕೂಸುಗಳೇ
ವಂದೇಮಾತರಂ.

ಇಂದು ಪೋಸ್ಕೋ ವಿರೋಧಿ ಜನರ ಮೇಲೆ ಹೊರಟಿರಾ?
ಇಂದಿನ ಆಟ ಒರಿಸ್ಸಾದ ಆದಿವಾಸಿ ಜನರ ಬೆನ್ನಮೇಲೆಯಾ?
ಜೈ ಹಿಂದ್
ಹಿಂದೂಸ್ಥಾನದ ನೆಲದ ಮೇಲೆ 54,000 ಕೋಟಿ ಬಿತ್ತು
ನೆಲ ಧನ್ಯ
ನೆಲದ ಹೃದಯದ ಉಕ್ಕಿಕವಾಟಗಳಿಗೆ ತೂತು ಬಿತ್ತು
ಹೃದಯ ಧನ್ಯ
ನೆಲದ ಕುಡಿಗಳ ಬೆನ್ನು-ತಲೆಮೇಲೆ ಕೋಲಾಟ ಲಯ
ಕಾನೂನು ಧನ್ಯ

ಇಂದು ಅಫ್ಜಲ್ ಕೊರಳನ್ನು ಹಿಸುಕಿ ಹೊಸಕಿದಿರಾ?
ಕಾಶ್ಮೀರದಲ್ಲಿ- ದೆಲ್ಲಿಯಲ್ಲಿ ನಿನ್ನ
ಕಿರು ಸಹೋದರರು ನೃತ್ಯ ಮಾಡುತ್ತಿದ್ದಾರೆ!?
ಆಟಗಳೆಲ್ಲ ನಿಯಮಗಳಂತೆ ನಡೆಯುತಲ್ಲವೆ?
ದೇಶ ಶಾಂತವಾಗಿದೆ.
ಬೆಂಕಿಯ ನೀಳಕೇಶಗಳ ಮೇಲೆ
ಹಿಮದ ಹೂವು ಚೆಲ್ಲುತ್ತಿದೆ.

ಬಾಂಬೆ, ಹೈದರಾಬಾದ್, ಬೆಂಗಳೂರು, ಕೊಯ್ಯುಮತ್ತೂರು
ಪಾರ್ಲಿಮೆಂಟಿನ ಸಾಕುಮಕ್ಕಳೇ
ಬೆಳೆ ಇನ್ನೂ ಹುಲುಸಾಗಲಿದೆ.

ಭಾರತಾಂಬೆಯ ಮಕ್ಕಳನ್ನು
ಬೇರೆ ಬೇರೆ ಹಾದಿಗಳಲ್ಲಿ ಕಳಿಸುತ್ತಿದ್ದೀರಿ.
ಕೋವಿಯೊಂದಿಗೆ ಕಾಡಿಗೆ ನಡೆದರು.
ಭಿಕ್ಷಾಪಾತ್ರೆಯೊಂದಿಗೆ ಬೀದಿಗೆ-ಶಿಬಿರಗಳಿಗೆ ನಡೆದರು.


ಮಾತನಾಡುವ ಸ್ವಾತಂತ್ರ್ಯ
ಎಲ್ಲಿಯಾದರೂ ಓಡಾಡುವ ಸ್ವಾತಂತ್ರ್ಯ ರಕ್ಷಿಸಿಕೊಳ್ಳಿ! ನೀವು!
ಹಸಿದ ಹೊಟ್ಟೆಯ ಭಾವನೆಯನ್ನು ಜನ ಸ್ವತಂತ್ರವಾಗಿ
ಕಣ್ಣುಗಳ ಕೆಳಗೆ ಹರಿಬಿಡಲಿ.
ಬದುಕುವ ಹಕ್ಕಿದೆ ಮನೆಕಾಯಲಿ.
ಶೋಷಣೆ ವಿರುದ್ಧ ಹಕ್ಕಿದೆ ಒಲೆಮುಂದೆ ಗೊಣಗಾಡಲಿ.
ಅಸಮಾನತೆ ವಿರುದ್ಧ ಹಕ್ಕಿದೆ ಕನಸು ಕಾಣಲಿ.

ದೇಶದ ಮೂಲೆಗಳಲ್ಲೆಲ್ಲ
ಹಸಿದ ಹೊಟ್ಟೆಯ ಹಿಂದಿನ ಬೆನ್ನ ಮೇಲೆಲ್ಲ
ಸ್ವರವೆತ್ತಿದ ಕೊರಳಿನ ಸುತ್ತಲೆಲ್ಲ
ಎದೆಯೆತ್ತಿದ ಸ್ವಾಭಿಮಾನದ ಹೃದಯದೊಳಗೆಲ್ಲ
ಧ್ವನಿಯ ಬೀಜಬಿತ್ತಲು ನಡೆದಾಡುವ ಕಾಲುಗಳ ಮೇಲೆ
ಮುಷ್ಟಿಯೆತ್ತಿದ ಕೈಗಳ ಮೇಲೆಲ್ಲ,
ನೀವು ಹಾದುಹೋದಾಗ
ಪ್ರಜಾತಂತ್ರ ಧನ್ಯವಾಯಿತು.
ಸಂವಿಧಾನ ಮಾನ್ಯವಾಯಿತು.

ಲಾಠಿ ಬೂಟುಗಳೇ
ನೇಣು ಗುಂಡುಗಳೇ, ಅಣ್ಣ ತಮ್ಮಂದಿರೇ,
144ರ ಹಿಂದೆ-ಮುಂದೆ ನಡೆಯುತ್ತಿರಿ.
ನಾಳೆ ಎಲ್ಲಿ ಪಯಣ? ಶುಭಪಯಣದ ಹಾರೈಕೆಗಳು!
ಸಂವಿಧಾನ ಮತ್ತು ಭಗವದ್ಗೀತೆ ಜೊತೆಗಿರಲಿ.
ಅಶ್ವಮೇಧಯಾಗ ವಿಜಯಿಯಾಗಲಿ!

- ಅಪ್ಪು (ಬಿ.ಜಿ.ಕೆ.)

ಜನಸಾಹಿತ್ಯವೆಂಬ ಹೊಸ ಚಳವಳಿಯ ಮುನ್ನುಡಿ



ಸಾಮಾನ್ಯ ಜನ ಉಸಿರಾಡಲು ಕಷ್ಟವಾದಂತಹ ಯಾವುದೇ ಕಾಲದ ಹೊಟ್ಟೆಯೊಳಗಿಂದ ಪ್ರತಿರೋಧದ ಬೀಜವೊಂದು ಹೊಮ್ಮುತ್ತದೆ. ಇದು ಎಲ್ಲ ಕಾಲಕ್ಕೂ ಸಿದ್ದೇ. ನಮ್ಮ ಕಾಲವೂ ಅಂತಹ ಬಿಕ್ಕಟ್ಟುಗಳ ಮೈ ತೆರೆದಿದೆ. ಸಾವಿರಾರು ರೈತರು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕೋಮುವಾದದ ಉರಿ ಮೈಮನಸ್ಸು ಸುಡುವಷ್ಟು ಹೆಚ್ಚಾಗುತ್ತಿದೆ. ಹಳ್ಳಿಜನ ಬದುಕನ್ನು ಚೀಲಕ್ಕೆ ತುಂಬಿ ನಗರಕ್ಕೆ ಮುಖ ಮಾಡಿದ್ದಾರೆ. ಜನಪ್ರತಿನಿಧಿಗಳು ದುಡ್ಡು ಮಾಡುವಲ್ಲಿ, ಮೋಜುಮಸ್ತಿಯಲ್ಲಿ ಮೈ ಮರೆತಿದ್ದಾರೆ. ಇಂತಹ ಹೊತ್ತಲ್ಲಿ ಬರಹಗಾರರು ತಮ್ಮ ಧ್ವನಿಗೆ ಬೆಂಕಿಯ ತುಂಬಬೇಕಿದೆ.

ಆದರೆ ಬಹುಪಾಲು ಕನ್ನಡದ ಹಿರಿಕಿರಿ ಬರಹಗಾರರು ಕಾಲದ ಕ್ರೌರ್ಯವನ್ನು ನೋಡಿಯೂ ತಣ್ಣಗೆ ಕುಳಿತಿರುವುದು ಆತ್ಮಕಳವಾಗಿದೆ. ಹಾಗೆಯೆ ಎಲ್ಲವೂ ಮಾರಾಟದ ಸರಕಾಗಿರುವಾಗ ಸಾಹಿತ್ಯವನ್ನೂ ಸರಕಾಗಿಸಿ ಸಂಭ್ರಮಿಸುವ ಸಂಗತಿಗಳ ನಡೆ ಒಂದೆಡೆಯಿದೆ. ಇಂತಹ ಹೊತ್ತಲ್ಲಿ ಈ ಎಲ್ಲವನ್ನು ಒಟ್ಟಾಗಿಸಿಕೊಂಡು ಜನಸಾಮಾನ್ಯರನ್ನು ಶೋಷಿಸುವ ಶಕ್ತಿಗಳ ವಿರುದ್ಧದ ಧ್ವನಿಯನ್ನು ದೊಡ್ಡದು ಮಾಡಲು ಧಾರವಾಡದಲ್ಲಿ ಮಾರ್ಚ್ 23, 24 ರಂದು ಜನಸಾಹಿತ್ಯ ಸಮಾವೇಶ ನಡೆಯಿತು. ಇದು ಈ ಕಾಲದ ನಿರ್ಲಿಪ್ತತೆಗೆ ರೋಸಿಹೋಗಿದ್ದ ಎಲ್ಲಾ ಮನಸ್ಸುಗಳನ್ನು ಒಟ್ಟಿಗೆ ತರುವಲ್ಲಿ ಕಾಲವೇ ಆಯೋಜಿಸಿದ ಕೊಂಡಿಯಂತಿತ್ತು. ಈ ಸಮಾವೇಶವು ಕೆಲವು ಚಾರಿತ್ರಿಕ ಪ್ರಶ್ನೆಗಳನ್ನು ಎತ್ತಿದೆ.

ಚಳವಳಿಗಳಿಲ್ಲದೆ ಕನ್ನಡ ಸಾಹಿತ್ಯ ಸೊರಗುತ್ತಿದೆ, ಯಾವ ಸಾಮಾಜಿಕ ಬದ್ಧತೆ ಇಲ್ಲದೆ ಬರೆಯುವುದೇ ನಿಜವಾದ ಬರಹ, ಸಾಹಿತ್ಯದ ಸೃಷ್ಟಿಶೀಲ ಸಂಗತಿಗಳು ಮಾತ್ರ ಚರ್ಚೆಗೆ ಯೋಗ್ಯ, ಸಾಹಿತ್ಯದ ಓದು ಚರ್ಚೆ ಸಂವಾದಗಳು ಸಂಭ್ರಮಿಸುವಂತಹವು, ಈ ಸಂವಾದಗಳು ಕೂಡ ಜನರಿಗೆ ಟಿಕೆಟ್ ಯಾಕೆ ದೊರೆಯಬೇಕು? ಎನ್ನುವಂತಹ ಅರಿರೂಪದ ನಿಲುವುಗಳು ಸಾಹಿತ್ಯದ ಕೆಲ ವಲಯದಲ್ಲಿ ವ್ಯಕ್ತಿಯಾಗುತ್ತಿವೆ. ಈ ಕಾಲದಲ್ಲಿ ಇಂತಹ ನಿಲುವು ಕೂಡ ಜನವಿರೋಧಿ ಎನ್ನುವ ಎಚ್ಚರವನ್ನು ಜನಸಾಹಿತ್ಯ ಸಮಾವೇಶ ಮನಗಾಣಿಸಲು ಪ್ರಯತ್ನಿಸಿತು.

ಮುಖ್ಯವಾಗಿ ನಮ್ಮ ಕಾಲದ ಬಿಕ್ಕಟ್ಟುಗಳಿಗೂ, ಇದೇ ಕಾಲದಲ್ಲಿ ಬರಹ ಮಾಡುತ್ತಿರುವ ಹೊಸ ತಲೆಮಾರಿನ ಸಾಹಿತ್ಯದೊಳಗೆ ಕಾಣುತ್ತಿರುವ ಈ ಬಿಕ್ಕಟ್ಟಿನ ಚಹರೆಗಳಿಗೂ, ಈ ಚಹರೆಯಲ್ಲಿ ಕನ್ನಡ ಸಾಹಿತ್ಯ ಪರಂಪರೆಯ ಛಾಯೆ ಮತ್ತು ಹೊಸ ಚಲನೆ ಎರಡನ್ನೂ ಗುರುತಿಸುವ ಗಂಭೀರ ಪ್ರಯತ್ನದ ಭಾಗವಾಗಿ ಇಲ್ಲಿನ ಚರ್ಚೆ ಸಂವಾದಗಳು ರೂಪುಗೊಂಡವು.

ಕನ್ನಡದಲ್ಲಿ ಸಾಹಿತ್ಯದ ಹೊಸತಲೆಮಾರು ಭಿನ್ನವಾದ ಬರಹದಲ್ಲಿ ತೊಡಗಿದೆ. ಈ ಬರಹದೊಳಗೆ ಕನ್ನಡದ ಹಿಂದಿನ ಚಳವಳಿಗಳ ಆಶಯಗಳು ಇದ್ದರೂ ಈ ನೆಲೆಯನ್ನು ಮೀರುವ ಒಂದು ಸ್ವರೂಪ ಹರಳುಗಟ್ಟುತ್ತಿದೆ. ಈ ಸ್ವರೂಪ ಹೀಗೆ ಎಂದು ಗೆರೆಕೊರೆದು ಒಂದು ಸ್ಪಷ್ಟ ಚಿತ್ರವನ್ನು ತೋರಲಾಗದಷ್ಟು ಬಹುಸಂವೇದನೆಗಳು ಬೆರೆತಿವೆ. ಆದರೆ ಈ ಸಾಹಿತ್ಯದೊಳಗೆ ಕೆಲ ಸಮಾನ ಅಂಶಗಳಿರುವುದಂತೂ ನಿಜ.

ಎಲ್ಲವನ್ನೂ ಮಾರುಕಟ್ಟೆಯ ಸರಕನ್ನಾಗಿಸಿ, ಸಾಮಾನ್ಯ ಜನ ಉಸಿರು ದಿಮ್ಮಗಿಡಿದಿರುವ ಚಿತ್ರದೊಳಗಿನ ಬಿಕ್ಕಳಿಕೆಯ ಧ್ವನಿ ಅಡಗಿದ ರಚನೆಗಳಿವೆ, ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವಷ್ಟು ಸಂಪತ್ತಿನ ಕೇಂದ್ರೀಕರಣ ಮತ್ತು ಇದರ ಇಕ್ಕಳದಲ್ಲಿ ನಿಂತು ಮಾತು ಹೊರಡಿಸುವ ಜನಪ್ರತಿನಿಧಿಗಳ ಬಗ್ಗೆ ಆತಂಕದ ಛಾಯೆಗಳಿವೆ. ಮೂಲಭೂತವಾದ ತನ್ನೆಲ್ಲ ಬಾಹುಗಳನ್ನು ಬಲಪಡಿಸಿಕೊಂಡು ಕೋಮುವಾದದ ಕರಾಳ ಛಾಯೆಯನ್ನು ದಟ್ಟವಾಗಿಸುವ ಬಗ್ಗೆ ಒಳಗೊಳಗೇ ತಣ್ಣನೆ ಪ್ರತಿರೋಧವಿದೆ. ಹೊಸ ವೇಷದಲ್ಲಿ ಅಡಗಿ ತನ್ನ ಬಾಹುಗಳನ್ನು ಚಾಚುತ್ತಿರುವ ಜಾತಿಭೂತದ ಬಗ್ಗೆ ದಲಿತ ಕೆಳಜಾತಿಗಳ ಒಳಗೆ ಸಣ್ಣ ಕಿಡಿ ಅಡಗಿದಂತಿದೆ. ಲಿಂಗದ ನೆಲೆಯ ತಳಮಳ ಮುಸುಗುಡುವ ಹಾಗೆ ಬೂದಿಯೊಳಗಣ ಕೆಂಡದ ಬಿಸಿ ಹಬೆಯಾಡುವ ಚಹರೆ ಕಾಣುತ್ತಿದೆ.

ಈ ಎಲ್ಲಾ ಲಕ್ಷಣಗಳು ತುಂಬಾ ಢಾಳಾಗಿ ಒಡೆದು ತೋರದಿದ್ದರೂ ಅದರ ಸಣ್ಣ ಎಳೆಗಳು ಹೊಸತಲೆಮಾರಿನ ಸಾಹಿತ್ಯದೊಳಗೆ ಮೊಳೆಯುತ್ತಿರುವುದಂತೂ ನಿಚ್ಚಳವಾಗಿದೆ. ಇದರ ಸ್ವರೂಪಕ್ಕೆ ಒಂದು ಹೆಸರು ಕೊಡುವುದಾದರೆ ಅದನ್ನು 'ಜನಸಾಹಿತ್ಯ' ಎನ್ನಬಹುದು. ಯಾವಾಗಲೂ ಜನಸಾಹಿತ್ಯ ಇದ್ದೇ ಇದೆ. ಆದರೆ ಅದು ತನ್ನ ಕಾಲದ ಸಂಕಟಗಳ ಒಡಲೊಳಗಿಂದ ಬೇರೆ ಬೇರೆ ರೂಪದಲ್ಲಿ ಹೊಮ್ಮುತ್ತಿರುತ್ತದೆ. ಹೀಗೆ ಇಂದಿನ ಕಾರ್ಪೋರೇಟ್ ಜಗತ್ತಿನ ಅಪಾಯಗಳ ಹಿನ್ನೆಲೆಯಲ್ಲಿ ಇಂದು ಜನಸಾಹಿತ್ಯ ತನ್ನದೇ ಆದ ಸ್ವರೂಪವನ್ನು ಪಡೆಯಬೇಕಿದೆ. ಇಂತಹ ಜನಸಾಹಿತ್ಯವೆಂಬ ಬೀಜವನ್ನು ಈ ಕಾಲದ ನೆಲದಲ್ಲಿ ಬಿತ್ತಿ ಅದು ಮೊಳೆಯುವ ಬಗ್ಗೆ ವಿಶ್ವಾಸವನ್ನು ಕರ್ನಾಟಕ ಜನಸಾಹಿತ್ಯ ಸಮಾವೇಶ ಕಟ್ಟಿಕೊಟ್ಟಿದೆ.

ಮೂಲತಃ ಧಾರವಾಡದಲ್ಲಿ ನಡೆದ ಸಾಹಿತ್ಯ ಸಂಭ್ರಮವನ್ನು ತಾತ್ವಿಕವಾಗಿ ವಿರೋಧಿಸುವ ಒಂದು ದೊಡ್ಡ ಬಳಗ ಈ ಸಮಾವೇಶವನ್ನು ಆಯೋಜಿಸಿತ್ತು. ಆದರೆ ಇದು ಕೇವಲ ಸಂಭ್ರಮದ ವಿರುದ್ಧದ ಹುಸಿ ಆಚರಣೆಯಾಗದೆ, ಈ ಕಾಲದ ಒಳಗಿಂದ ಹುಟ್ಟಬಹುದಾಗಿದ್ದ ಎಚ್ಚರದ ಪ್ರಶ್ನೆಗಳನ್ನು ಹುಟ್ಟಿಸುವ ಕಡೆ ಚಲಿಸಿದ್ದು ದೊಡ್ಡ ಫಲಿತವಾಗಿದೆ. ಹಾಗಾಗಿ ಸಮಾನಾಸಕ್ತರೆಲ್ಲಾ ಒಟ್ಟಾಗಿ ಈ ಸಮಾವೇಶ ಮುಗಿದನಂತರ 'ಇದು ಈ ಕಾಲದ ಹೊಸ ಚಳವಳಿಗೆ ಮುನ್ನುಡಿಯಾಗಬೇಕಿದೆ, ಆ ನಿಟ್ಟಿನಲ್ಲಿ ಆಯೋಜಕರ ಜತೆ ನಮ್ಮ ಜವಾಬ್ದಾರಿಯೂ ಹೆಚ್ಚಿದೆ' ಎಂಬ ನಿಲುವಿಗೆ ಬರಲು ಸಾಧ್ಯವಾಯಿತು. ಈ ಕಾರಣಕ್ಕೆ ಇದೊಂದು ಚಾರಿತ್ರಿಕ ಸಮಾವೇಶವೇ ಸರಿ.

ಇಡೀ ಸಮಾವೇಶದಲ್ಲಿ ಕನ್ನಡದಲ್ಲಿ ಬರೆಯುತ್ತಿರುವ ಹೊಸಬರ ಸಾಹಿತ್ಯವನ್ನು ಕುರಿತು ಅವಲೋಕನ, ಸ್ವವಿಮರ್ಶೆ, ಮಿತಿಗಳ ಮೀರುವಿಕೆ, ಪರ್ಯಾಯಗಳ ಕಟ್ಟುವಿಕೆಯ ಬಗ್ಗೆ ಚರ್ಚೆ ನಡೆಯಿತು. ಇದು ಹಿರಿತಲೆಮಾರು ಕಿರಿತಲೆಮಾರನ್ನು ನೋಡುವ ನೋಟಕ್ರಮವನ್ನೂ ಒದಗಿಸಿತು. ಹೊಸ ತಲೆಮಾರಿನ ಬರಹಗಾರರು 'ನಾನು ನನ್ನ ಬರಹ' ಕುರಿತಂತೆ ಮಾತನಾಡಿ ಈ ಕಾಲದ ಬಿಕ್ಕಟ್ಟುಗಳು ಮತ್ತು ಸೃಜನಶೀಲತೆಯ ಸಂಕಟಗಳನ್ನು ಹೊರಹಾಕಿದರು. ಈ ಬಗೆಯ ಚರ್ಚೆ ಸಂವಾದಗಳು ಹೊಸಬರ ಸಾಹಿತ್ಯದ ಒಳಗಣ ರೂಪಗಳನ್ನು ಕಾಣುವ ಪ್ರಯತ್ನವಾಗಿತ್ತು.

ಪ್ರಾಸ್ತಾವಿಕವಾಗಿ ಎಂ.ಡಿ.ಒಕ್ಕುಂದ ಅವರು 'ಜಾಗತೀಕರಣ ಕೋಮುವಾದ ಕಾರ್ಪೋರೇಟ್ ಜಗತ್ತಿನ ವಿರುದ್ಧ ಇಂದು ಸಾಹಿತಿಗಳು ಹೇಗೆ ರಾಜಕೀಯಾರ್ಥಿಕ ಹೋರಾಟಗಳನ್ನು ರೂಪಿಸಬೇಕಾಗಿದೆ' ಎನ್ನುವ ಮಾತುಗಳನ್ನಾಡಿದರು. ಮಹಾರಾಷ್ಟ್ರದ ಲೇಖಕರಾದ ಲಕ್ಷ್ಮಣ್ ಗಾಯಕವಾಡ, ಲೇಖಕಿ ಭಾನು ಮುಷ್ತಾಕ್, ಜಿ.ರಾಮಕೃಷ್ಣ ಅವರು ಜಾಗತೀಕರಣ ಉಂಟುಮಾಡಿದ ಪಲ್ಲಟಗಳ ಬೇರೆ ಬೇರೆ ನೆಲೆಗಳು ಮತ್ತು ಬರಹಗಾರರ ಜವಾಬ್ದಾರಿಯನ್ನು ಕುರಿತು ಗಮನ ಸೆಳೆದರು. ದು.ಸರಸ್ವತಿ, ನಾಗೇಶ ಹೆಗಡೆ, ಬಂಜಗೆರೆ ಜಯಪ್ರಕಾಶ್, ಎಸ್.ಬಿ.ಜೋಗುರ, ಮುಜಾಫರ್ ಅಸ್ಸಾದಿ ವರ್ತಮಾನದ ಬಿಕ್ಕಟ್ಟನ್ನು ಬೇರೆ ಬೇರೆ ನೆಲೆಗಳಲ್ಲಿ ವಿವರಿಸಿಕೊಳ್ಳುವ ಪ್ರಯತ್ನಿಸಿದರು. ಕವಿಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್.ಜಿ.ಸಿದ್ದರಾಮಯ್ಯ ಸಾಹಿತ್ಯ ಲೋಕದ ರಾಜಕಾರಣ ಮತ್ತು ಮೇಲುಜಾತಿಯ ಶ್ರೇಷ್ಠತೆಯ ವ್ಯಸನದಲ್ಲಿ ಸಾಹಿತ್ಯದ ಕಲ್ಪನೆ ಬದಲಾದ ಬಗ್ಗೆ ನಿಷ್ಠುರ ಮಾತುಗಳನ್ನು ಆಡಿದರು.

ಉಳಿದಂತೆ ತಾರಿಣಿ ಶುಭದಾಯಿನಿ, ಹೆಚ್.ಎಸ್. ಅನುಪಮಾ, ಕೆ.ಪಿ.ಸುರೇಶ್, ಮಹಾಂತೇಶ್ ನವಲಕಲ್, ಚನ್ನಪ್ಪ ಅಂಗಡಿ, ಎಸ್. ಗಂಗಾಧರಯ್ಯ, ರಂಗನಾಥ ಕಂಟನಕುಂಟೆ, ಕೆ.ಫಣಿರಾಜ್, ಜಿ.ಪಿ. ಬಸವರಾಜ, ನಟರಾಜ ಬೂದಾಳ ಕನ್ನಡ ಸಾಹಿತ್ಯದ ಹೊಸ ತಲೆಮಾರಿನ ಸಾಹಿತ್ಯವನ್ನು ಅದರೆಲ್ಲಾ ಭಿನ್ನ ಚಹರೆಗಳನ್ನು ಗುರುತಿಸಲು ಪ್ರಯತ್ನಿಸಿದರು.

ಹೊಸ ಸಾಹಿತ್ಯ ಚಳವಳಿಯ ಸಾಧ್ಯತೆ ಕುರಿತಂತೆ 'ಎಲ್ಲಾ ಜನಪರ ಚಿಂತನೆಯ ಜತೆಗಾರರಾಗುತ್ತಲೇ ಚಳವಳಿಯ ಹೊಸ ಆಕಾರವೊಂದು ರೂಪುಗೊಳ್ಳಬೇಕಿದೆ. ಜನವಿರೋಧಿ ವ್ಯವಸ್ಥೆಯ ವಿರುದ್ಧ ಪರ್ಯಾಯದ ಆಲೋಚನೆಯನ್ನು ಚಳವಳಿಯಲ್ಲಿ ತರಬೇಕಿದೆ' ಎಂದು ಡಾ. ಸಿದ್ದನಗೌಡ ಪಾಟೀಲ್ ಮಾತನಾಡಿದರೆ, ಬಿ.ಎಂ.ಪುಟ್ಟಯ್ಯ ಚಳವಳಿಯನ್ನು ಪರೀಕ್ಷೆ ಮಾಡುವ ವಿಧಾನದ ಬಗ್ಗೆ ಗಮನ ಸೆಳೆದರು.


ಡಾ.ವಿನಯಾ ಹೊಸ ತಲೆಮಾರಿನ ಕಾವ್ಯ ಕಥೆಗಳನ್ನು ಉಲ್ಲೇಖಿಸುತ್ತಾ ಅದರ ಒಳಗಿಂದಲೇ ನಮ್ಮ ಕಾಲದ ವೈರುಧ್ಯಗಳನ್ನು ಗುರುತಿಸಿದರು. ರಹಮತ್ ತರೀಕೆರೆಯವರು 'ಹೊಸ ಬರಹಗಾರರನ್ನೊಳಗೊಂಡ ಹೊಸ ಚಳವಳಿ ಹುಟ್ಟಬೇಕಾಗಿದೆ. ಅದಕ್ಕೆ ಕಾಲವೂ ಕೂಡಿದೆ, ಈ ಜನಸಾಹಿತ್ಯ ಸಮಾವೇಶವೇ ಅಂತಹ ಮೊದಲ ಹೆಜ್ಜೆಯಾಗಲಿ, ಹಿರಿಯರನ್ನು ಗೊಬ್ಬರ ಮಾಡಿಕೊಂಡು ಹೊಸತಲೆಮಾರು ಚಿಗುರೊಡೆಯಬೇಕಿದೆ' ಎಂದು ಕರ್ನಾಟಕದ ವರ್ತಮಾನದ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಿಸಿದರು.

ಜನ್ನಿಯವರ ಹೋರಾಟದ ಹಾಡುಗಳು, ಕೇಸರಿ ಹರವು ಅವರ ನಗರ ಮತ್ತು ನದಿ ಕಣಿವೆ ಸಾಕ್ಷ್ಯಚಿತ್ರ ಈ ಸಮಾವೇಶಕ್ಕೆ ಒಂದು ಭಿನ್ನ ಆಯಾಮವನ್ನು ಒದಗಿಸಿತು. ಈ ಸಮಾವೇಶವನ್ನು ಆಯೋಜಿಸಿದ ಸಂಚಾಲಕರಾದ ಬಸವರಾಜ ಸೂಳಿಬಾವಿ, ಎಂ.ಡಿ.ಒಕ್ಕುಂದ, ಕೆ.ಆರ್.ದುರ್ಗಾದಾಸ್, ಶಂಕರ ಹಲಗತ್ತಿ, ಸಂಜೀವ ಕುಲಕರ್ಣಿ, ಜಗದೀಶ ಕೊಪ್ಪ, ಎಸ್.ಬಿ.ಜೋಗುರ, ಮಹಂತೇಶ ನವಲಕಲ್ ಮೊದಲಾದವರ ಬಗ್ಗೆ ಮೆಚ್ಚುಗೆ ವ್ಯಕ್ತವಾಯಿತು. ಕರ್ನಾಟಕ ಜನಸಾಹಿತ್ಯ ಸಮಾವೇಶ ಸಾಹಿತ್ಯ ವಲಯದಲ್ಲಿ ಹೊಸ ಸಂಚಲನವನ್ನಂತೂ ಮೂಡಿಸಿದೆ, ಇದರ ಮುಂಚಲನೆಯನ್ನು ಕಾದುನೋಡಬೇಕಾಗಿದೆ.


● ಅರುಣ್ ಜೋಳದಕೂಡ್ಲಿಗಿ

ವಿ.ಸೂ.: ಅನಿವಾರ್ಯ ಕಾರಣಗಳಿಂದಾಗಿ ಬಿ.ಚಂದ್ರೇಗೌಡರ 'ಬಯಲು ಸೀಮೆ ಕಟ್ಟೆಪುರಾಣ' ಅಂಕಣವು ಪ್ರಕಟವಾಗುತ್ತಿಲ್ಲ. ಮುಂದಿನ ಕೆಲವು ವಾರಗಳ ನಂತರ ಎಂದಿನಂತೆ ಪ್ರಕಟವಾಗುವುದು. ಓದುಗರು ಸಹಕರಿಸಿ
–ಸಂ.

ಸರ್ವೆಗೆ ಸಿಕ್ಕಿದ ವಲಯ



ಮುಂದುವರಿದ ದೇಶಗಳೀಗ ಖಚಿತ ಮಾಹಿತಿ, ಅಂಕಿಅಂಶಗಳನ್ನು ಎಷ್ಟು ಬೇಗ ಸಂಗ್ರಹಿಸಿಕೊಡಬಲ್ಲವೆಂದರೆ, ಅವರ ಮುಂದುವರಿಕೆ ನಿಂತಿರುವುದೇ ತಿಳಿವಳಿಕೆಯ ಮೇಲೆ. ಒಮ್ಮೆ ಒಬ್ಬ ದಂಪತಿಗಳು ಯಾವ ವಯಸ್ಸಿನಲ್ಲಿ ವಾರಗಳಿಗೆ ಎಷ್ಟು ಸಲ ಪ್ರೇಮಿಸುತ್ತಾರೆ ಎಂದು ಮಾಹಿತಿ ಸಂಗ್ರಹಿಸಿದರೆ, ಒಬ್ಬೊಬ್ಬ ಈಗಿನ ತರುಣ- ತರುಣಿಯರು ಎಷ್ಟನೇ ವಯಸ್ಸಿನಲ್ಲಿ ಲೈಂಗಿಕ ಅನುಭವ ಪಡೆಯುತ್ತಾರೆ ಎಂದು ಕಂಡುಕೊಂಡ. ಹಾಗೆಯೇ ಒಂದು ದೇಶದ ಜನ, ಅವರ ವೃತ್ತಿ, ನಿರುದ್ಯೋಗ, ನಿವೃತ್ತಿ ಎಲ್ಲದನ್ನು ತಿಳಿಯಬಲ್ಲರು; ಯಾವ ಕಾಯಿಲೆಗೆ ಯಾವ ಔಷಧಿ ಬೇಕು, ಔಷಧಿ ಇಲ್ಲದೇ 'ಪ್ಲಾಸಿಬೋ' ಎಂಬ ಹುಸಿ ಮಾತ್ರೆ ಕೊಟ್ಟು ಹೇಗೆ ಒಂದು ಕಾಯಿಲೆಯನ್ನು ಗುಣಪಡಿಸಬಹುದು ಎಂದು ಪ್ರಯೋಗ ನಡೆಸುತ್ತಾರೆ, ನೆನಪುಗಳು, ಮಿದುಳು ಮತ್ತು ಮನಸ್ಸು, ನಿದ್ರೆಯ ವಿವಿಧ ಮಟ್ಟಗಳು ಎಲ್ಲವನ್ನೂ ಅರ್ಥಮಾಡಿಕೊಳ್ಳಲು ವಿಷಯ ಸಂಗ್ರಹಣೆ ಮಾಡುತ್ತಾರೆ. ಹಾಗೆಯೇ ಎಲ್ಲ ವಿಚಾರಬದ್ಧ, ತರ್ಕಕ್ಕೊಳಪಟ್ಟ ವಿಷಯಗಳನ್ನೂ ಒಗ್ಗೂಡಿಸಿ ಕೆಲವು ತೀರ್ಮಾನಗಳಿಗೆ ಬರುತ್ತಾರೆ.



ಆದರೆ ಮನುಷ್ಯನ ವ್ಯಕ್ತಿತ್ವ ತುಂಬ ಜಟಿಲವಾದದ್ದು. ನಾನು ಬೇಕೆಂತಲೇ ಇಲ್ಲಿ ನೇರವಾಗಿ ಮನುಷ್ಯನ ಮಿದುಳಿಗೆ ಹೋಗದೆ, ಆತನ ವ್ಯಕ್ತಿತ್ವದ ಬಗ್ಗೆ ಹೇಳುತ್ತಿದ್ದೇನೆ. ಮನುಷ್ಯನ ಇಡೀ ದೇಹ complex ಆದದ್ದು. ಆತನ ಹಸ್ತ ನೋಡಿ. ಒಂದೊಂದು ಬೆರಳೂ ಒಂದೊಂದು ರೀತಿಯಲ್ಲಿ, ವಿವಿಧ ಕೋನದಲ್ಲಿ ಮಡಚಿಕೊಂಡರೆ ಮಾತ್ರ ಮುಷ್ಟಿಯಾಗುತ್ತದೆ; ವಸ್ತುಗಳನ್ನು ಹಿಡಿಯಲು ಸಾಧ್ಯವಾಗುತ್ತದೆ. ಬೆರಳು ಹಿಂದಕ್ಕೆ ಬಾಗಿ ಇನ್ನೊಂದು ರೀತಿಯಲ್ಲಿ ವಸ್ತುವನ್ನು ತೋರಲು, ಸಂಕೇತಿಸಲು, ಹಿಡಿಯಲು ಆಗುವುದಿಲ್ಲ. ಹಾಗೆಯೇ ಇಡೀ ದೇಹ ಜೀವಿಸುವ ಉದ್ದೇಶಕ್ಕೆ ಸರಿಯಾಗಿ ರೂಪುಗೊಂಡಿದೆ. ಇದರಲ್ಲಿ ಮನಸ್ಸು ಒಂದು ಭಾಗ ಮಾತ್ರ. ಗರ್ಭಿಣಿಗೆ ಬಯಕೆ ಆಗುವುದು, ಬ್ರಹ್ಮಚಾರಿಗೆ ವಿಚಿತ್ರ ತಳಮಳ ಆಗುವುದು, ವಿಧವೆಗೆ ಅನಿರೀಕ್ಷಿತ ರೀತಿಯಲ್ಲಿ ದುಗುಡ ಮುತ್ತಿಕೊಳ್ಳುವುದು... ಎಲ್ಲವೂ ಕುತೂಹಲಕರ. ಇದೆಲ್ಲವೂ ಮನಸ್ಸಿಗೆ ತಮ್ಮ ನಿವೇದನೆ ಒಪ್ಪಿಸುತ್ತವೆ ಎನ್ನುವುದು ನಿಜ; ಆದರೆ ಗರ್ಭಿಣಿಯ ಬಯಕೆ ಹೊಟ್ಟೆಬಾಕನ ಬಯಕೆಗಿಂತ ಭಿನ್ನವಾಗಿರುತ್ತದೆ. ಬಯಕೆ ಎನ್ನುವುದು ಗರ್ಭದಿಂದ ನಿಯಂತ್ರಿತವಾಗುತ್ತದೆ. ಗರ್ಭಿಣಿಗೆ ಅವಳದೇ ಆದ ಸಂಕೋಚ, ಭಯ, ಆಶೆ ಎಲ್ಲವೂ ಇರುತ್ತವೆ. ಹೊಸ ಜೀವವೊಂದನ್ನು ಹೊತ್ತವಳಿಗೆ ಸಾವು ಕೂಡ ಹತ್ತಿರವಿದ್ದಂತೆ ಭಾಸವಾಗುತ್ತದೆ.

ಮನುಷ್ಯ ಮಹಾ ಸಂಕೀರ್ಣ ಜೀವಿಯಾದ್ದರಿಂದ ನಮ್ಮ 'ಸರ್ವೆ', ಅಭಿಪ್ರಾಯ ಸಂಗ್ರಹಣೆ ಇತ್ಯಾದಿಗೆ ಇಲ್ಲಿ ಹೆಚ್ಚಿನ ಅವಕಾಶವಿರುವುದಿಲ್ಲ. ಪ್ರತಿಯೊಬ್ಬನ ಕಾತರವೂ ಒಂದೊಂದು ರೀತಿಯಲ್ಲಿ ವಿಶಿಷ್ಟವಾಗಿರುತ್ತದೆ. ಆದ್ದರಿಂದಲೇ ನೀವು ಮಿದುಳನ್ನು ಕತ್ತರಿಸಿದರೆ ಮನಸ್ಸು ಸಿಕ್ಕುವುದಿಲ್ಲ, ಮನಸ್ಸನ್ನು ವಿಶ್ಲೇಷಿಸಿದರೆ ಕನಸು ಸಿಕ್ಕುವುದಿಲ್ಲ, ಇಲ್ಲಿ ದೊರೆಯುವ ಜ್ಞಾನ ಅಥವಾ ತಿಳಿವಳಿಕೆ ಪ್ರಯೋಗಶಾಲೆಯ ವಸ್ತುವಲ್ಲ; ನಿಜಕ್ಕೂ ಇದು ಸ್ವಶೋಧನೆಯ ಪರಿಣಾಮ.


ನಾನು ನನ್ನದಲ್ಲದ ರಂಗದಲ್ಲಿ ನಿಂತು ಮಾತಾಡುತ್ತಿರುವುದಾಗಿ ನಿಮಗೆ ಅನ್ನಿಸಬಹುದು. ಈ ರಂಗದಲ್ಲಿ ಮಾತ್ರ ವಿಜ್ಞಾನಿ ತನ್ನ ದೌರ್ಬಲ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸ್ವಶೋಧನೆ ತುಂಬ ಕಷ್ಟ, ಯಾಕೆಂದರೆ ಇದಕ್ಕೆ ಆತ್ಮಗೌರವ, ಆತ್ಮರತಿ ಮತ್ತು ಆತ್ಮಭಂಜನೆ ಎಲ್ಲವೂ ಸೇರಿದ ಕಠೋರ ವ್ರತ ಬೇಕಾಗುತ್ತದೆ. ಕಾಫ್ಕಾ ತರಹದವರಲ್ಲಿ ಈ ಅಂಶ ಇತ್ತು, ಆತನಲ್ಲಿ ಇದು ಮಾತ್ರ ಇದ್ದು ಬರೆಯುವುದಕ್ಕೆ ಭಾಷೆ, ಬರೆಯಲು ಬೇಕಾದ ಕುಶಲತೆ ಇಲ್ಲದಿದ್ದರೆ ಆಗುತ್ತಿರಲಿಲ್ಲ, ಇದನ್ನೇ ಸರಳವಾಗಿ ಹೇಳಬಹುದಾದರೆ.... ನಮಗೆ ಶೇಕ್ಸ್‌ಪಿಯರ್ ಆಗುವ ತಂತ್ರ ಗೊತ್ತಿದ್ದರೆ ನಮ್ಮಲ್ಲನೇಕರು ಆಗಿಬಿಡುತ್ತಿದ್ದರು. ಹಾಗೆ ಆಗಲು ಸಾಧ್ಯವಿಲ್ಲ.

● ಫೆಬ್ರವರಿ 18, 1988

ಮಗೀನ ತೆಪ್ಪ ಹೊಟ್ಟೆಗಾಕ್ಕಳಿ

ಅಣಕ





• ಎಚ್.ಎಲ್.ಕೇಶವಮೂ

'ಆಗ ಆದಿನ್ನೂ ಅರೀದ ಮಗ. ಕಾಣದೆ ಮಾಡಿಬುಟ್ಟದೆ. ಏನೋ ಆಗೋದು ಆಗಿಹೋಗದೆ. ಆದರ ತೆಪ್ಪ ಹೊಟ್ಟೆಗಾಕ್ಕಳಿ' ಅಂತ ಅವಲತ್ತುಕೊಂಡಿದ್ದಾರೆ. ಯಾರು ಅಂತೀರಿ. ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ, ಕಾಂಗ್ರೆಸ್ ಪಕ್ಷದ ವಕ್ತಾರ ದಿಗ್ವಿಜಯ್ ಸಿಂಗ್‌ಜೀ ಅವರು. ಅವರು ಭಾರೀ ಬುದ್ಧಿವಂತರಂತೆ. ಅಂದಮೇಲೆ ನಿಜಾನೆ ಇರಬೇಕು. ಅದೇನು ತೆಪ್ಪ ಮಾಡಿತ್ತು ಈ ಮಗ ಅಂದ್ರೆ ಮಾಫಿಯಾ ದೊರೆ ದಾವೂದ್ ಇಬ್ರಾಹಿಂ ಇದಾನಲ್ಲ ಅದೆಂಗೋ ಅವನ ದೋಸ್ತ್ ಆಗಿತ್ತು ಇದು. ಈ ಇಬ್ರಾಹಿಮ್ಮೊ ಅವನ ಸ್ನೇಹಿತನೋ 'ಇವು ನಿನ್ತಾವ ಇಲ್ರಿ' ಅಂತ ಪಿಸ್ತೂಲುಗಿಸ್ತೂಲು ಅಂತವ್ನೆಲ್ಲ ಕೊಟ್ಟಿದ್ನಂತೆ. ಇವೇನು ಮಾಡತ್ತು ನನ್ನ ಅಂತ ಈ ಮಗ 'ಕಾರ್ ಗ್ಯಾರೇಜಿನಲ್ಲಿ ಮಡಗಿ' ಅಂತು. ಅವರು ಅಲ್ಲಿ ಮಡಗಿ ಮಾಯ ಆದ್ರು. ಈ ಮಗ ಅದ ಮರ್‍ತಂಗೇ ಇತ್ತಂತೆ. ಇದಾದ ಮಸಿ ದಿಸಕ್ಕೇ ಮುಂಬೈ ಸ್ಫೋಟ ಆಯ್ತಂತೆ. ಆ ಕೇಸಲಿ ಈ ಮಗ ತಗುಲಾಕ್ಕಂತಂತೆ. ಈ ಮಗ ಯಾರು ಅಂತೀರಿ. ಸರಿಯಾಗೇ ಹೇಳಿದಿರಿ. ಸಂಜಯ್ ದತ್. ಇದು ನಡೆದದ್ದು 1993ರಲ್ಲಿ, ಆಗ ಈ ಮಗೀನ ವಯಸ್ಸು ಎಷ್ಟು ಅಂತೀರಿ. ಕೇವಲ ಮೂವತ್ತಮೂರೇ ವರ್ಷ!

ಈ ಕೋರ್ಟ್ ಕೇಸು ಅಂದರೆ ಗೊತ್ತಲ್ಲ. ಒಂದು ಕೋರ್ಟು ಆದ ಮೇಲೆ ಇನ್ನೊಂದು, ಆಮೇಲೆ ಮತ್ತೊಂದು, ಮಗದೊಂದು. ಹಿಂಗಾಗಿ ಈ ಕೇಸು ಎಳೀತು ಎಳೀತು ಇಪ್ಪತ್ತು ವರ್ಷ ಎಳೀತು ನೋಡಿ. ಪಾಪ ಸಂಜಯ್ ದತ್ತು ಬಲೇ ಮಾನಸಿಕ ಹಿಂಸೆಗೆ ಗುರಿಯಾಯ್ತಂತೆ. ಯಾವಾಗ ಏನಾಗುತ್ತೋ, ಕೋರ್ಟು ಹಾಲಲ್ಲಿ ಹಾಕುತ್ತೋ, ನೀರಲ್ಲಿ ಹಾಕುತ್ತೋ ಅನ್ನೊ ಯೋಚನೇಲಿ ಊಟ, ನಿದ್ರೇನೂ ಸರಿಯಾಗಿ ಮಾಡುತ್ತಿರಲಿಲ್ಲವಂತೆ. ಒಟ್ನಲಿ ನರಕದ ಅನುಭವ ಇಲ್ಲೇ ಆಯ್ತಂತೆ ಆ ಮಗೀಗೆ. ಈಗ ಕೋರ್ಟು ಐದು ವರ್ಷ ಜೈಲಿಗೆ ತಳ್ಳದಂತೆ ಆ ಮಗಾವ. ಪಾಪ!

ಮೊದಲಿಂದಲೂ ಆ ಮಗಾವ ನೋಡ್ತಿದ್ದರಲ್ಲ ಅವರಿಗೆ ಇದು ಬಲೇ ನೋವು ತಂದದಂತೆ. ಅವರಪ್ಪ ಎಂತೋನು. ಕೇಂದ್ರದಲ್ಲಿ ಮಂತ್ರಿಯಾಗಿದ್ದೋನು. ಅವರವ್ವ ಎಂತೋಳು. ಫಿಲಂ ಆಕ್ಟರು. ಮದರ್ ಇಂಡಿಯಾ ಸಿನಿಮಾದಲ್ಲಿ ಪಾರ್ಟು ಮಾಡಿ ದೇಶಭಕ್ತ ಮೆರೆದೋಳು. ಅಂತೋರ ಹೊಟ್ಟೇಲಿ ಹುಟ್ಟಿದ ಮಗ ಇದು. ಇದೇನೂ ಕಡಿಮೆ ಇಲ್ಲ 'ಗಾಂಧಿಗಿರಿ' ಮಾಡಿ ಬದಲಾವಣೆ ಮಾಡೋಕೆ ಆಗುತ್ತೆ ಅಂತ ತೋರಿಸಿತ್ತು. ಇಂತಾ ಹೈದ ಉಗ್ರಗಾಮಿಯಾಗಿರಲು ಸಾಧ್ಯವೇ ಇಲ್ಲ, ಅದ ಜೈಲಿಗೆ ಹಾಕೋದು ಸುತರಾಂ ಸರಿ ಇಲ್ಲ, ಅದಕ್ಕೆ ಕ್ಷಮೆ ತೋರಿಸಿ ಅಂತ ದೇಶದ ದೊಡ್ಮನುಸ್ರೆಲ್ಲ ಹೇಳ್ತಾ ಅವ್ರಂತೆ. ಎಂತಹ ದೊಡ್ಮನುಸ್ರು ಅಂದ್ರೆ ಮಾತಿಗೆ ಹೇಳ್ತೀನಿ. ಭಾರತೀಯ ಪತ್ರಿಕಾಮಂಡಳಿ ಅಂತ ಅದಲ್ಲ, ಆದರ ಅಧ್ಯಕ್ಷರು ಅಂದ್ರೆ ಸಾಮಾನ್ಯ ಅಲ್ಲ, ಮಾರ್ಕಂಡೇಯ ಖಟ್ಜು ಅಂತ ಸುಪ್ರೀಂಕೋರ್ಟ್ ನ್ಯಾಯಾಧೀಶರಾಗಿದ್ದೋರು ಈಗ ಆ ಸೀಟಲಿ ಕುಂತವ್ರೆ. ಅವರೇ ಹಿಂಗೆ ಹೇಳವ್ರೆ ಅಂದ್ರೆ, ಇನ್ನೇನಿದ್ದತ್ತು ಅಲ್ವಾ. ಹಿಂಗಂದ್ರೆ ಕೆಲವರು ಸುತರಾಂ ಒಪ್ಪಲ್ಲ ಕಣ್ರೀ. 'ಅವರು ಹೇಳುತ್ತಿರೋದ್ರಲ್ಲಿ ಹೊಸದೇನೂ ಇಲ್ಲ. ಕೇಸು ನಡೀತಿದ್ದಾಗಲೇ ಇಂತಾವ್ನೆಲ್ಲ ಹೇಳಾಗದೆ. ಇಂತ ಮಾತಲ್ಲಿ ಉಪ್ಪು, ಹುಳಿ, ಖಾರ ಯಾವುದೂ ಇಲ್ಲ ಅಂತ ಜಡ್ಜ್ ಅದ ಮೂಲೆಗೆಸೆದೂ ಆಗಿದೆ' ಅಂತಾರೆ. 'ಹೋಗಲ್ರಪಾ, ದತ್ತು ಫೇಮಸ್ ಆಕ್ಟರ್ ಅಲ್ವಾ. ಅವರ ಮೇಲೆ ಅದೆಷ್ಟೋ ಕೋಟಿಯ ಪ್ರೊಡ್ಯೂಸರುಗಳು ಸುರ್ದವಂತೆ. ಅವರ ಕತೇನಾದ್ರೂ ಯೋಚಿಸಬೇಕಲ್ವ' ಅಂದ್ರೆ ಏನಂತವೆ ಗೊತ್ತ? 'ಮಾಫಿಯಾ ಬಡ್ಡಿ ಮಕ್ಕಳು ತಂದು ಸುರ್ದಿರ್‍ತಾವೆ. ನಷ್ಟ ಆಯ್ತದೆ ಅಂತಿದೀರಲ್ಲ ಲಾಭ ಬಂದಿದ್ರೆ ಅವರೇನು ಅದ ಬಡವರಿಗೆ ಹಂಚ್ತಿದ್ರಾ' ಅಂತ ಏನೇನೋ ಬೊಗಳ್ತಾ ಕುಂತ್ಕತವೆ. 'ಅವ್ರು ಹಾಳಾಗಲಿ ಕಣ್ರೀ. ಸಿನಿಮಾ ನಂಬಿ ಕೆಲಸ ಮಾಡ್ತಾ ಇರ್‍ತಾರಲ್ಲ, ಬಡಬಗ್ಗರು ಅವರ ಕತೆನಾದ್ರೂ ಮಸಿ ಯೋಚಿಸ್ರಿ' ಅಂದ್ರೆ 'ನೂರಾರು ಕಾರ್ಖಾನೆ ಮುಚ್ಚಿ ಸಾವಿರಾರು ಕಾರ್ಮಿಕರು ಬೀದಿ ಪಾಲಾದ್ರಲ್ಲಾ ಆಗೆಲ್ಲಿ ಹೋಗಿತ್ತು ಈ ಕಳಕಳಿ' ಅಂತೆಲ್ಲ ಏನೇನೋ ಕತೆ ವಸೀತವೆ. 'ಕಾನೂನು ಎಲ್ಲರಿಗೂ ಒಂದೇಯ. ಬಡವರಿಗೊಂದು ಶ್ರೀಮಂತರಿಗೊಂದು ಅಲ್ಲ' ಅಂತ ತಲೆಕೆಟ್ಟ ಮಾತಾಡ್ತವೆ. ಪಾಪ ಮುವ್ವತ್ತುಮೂರು ವರ್ಷದ (ಆಗ) ಮಗಾವ ಜೈಲಿಗೆ ಹಾಕಿದರೇ ಇವರಿಗೆ ತೃಪ್ತಿ ಅಂತ ಕಾಣ್ತದೆ! ಸದ್ಯ ಸರ್ಕಾರ ಅಂತ ಒಂದದೆ. ಧರ್ಮ ಕರ್ಮ ನೋಡುತ್ತೆ, ಶಿಕ್ಷೆಗೆ ಒಳಗಾದ ವ್ಯಕ್ತಿ ಕ್ಷಮೆ ಕೋರಿದರೆ ಪರಿಶೀಲಿಸಲಾಗುತ್ತೆ ಎಂದಿದೆ! ಅಂದರೆ ಸಂಜಯ್‌ದತ್ ಅಂದರ್ ಆಗಲ್ಲ ಬಾಹರ್‍ರೇ ಇರ್‍ತಾರೆ ಅಂದಹಾಗೆ ಕೇಳಿಸುತ್ತದೆ ಅಲ್ವಾ...!

ನಂಬಿ ಕೆಟ್ಟವರು

'ನಂಬಿಸಿ ಕುತ್ತಿಗೆ ಕೊಯ್ದರು.'

'ನಂಬಿಸಿ ಮೋಸ ಮಾಡಿದರು.'

ಇಂತಹ ಮಾತುಗಳಿಗೆ ಅರ್ಥ ಏನಾದರೂ ಇದೆಯ?

ನಂಬಿಕೆಗೂ ಮೋಸಕ್ಕೂ ಬಿಡಿಸಲಾಗದ ನಂಟು. ಮೊದಲು ನಂಬಿಸಬೇಕು. ನಂಬಿಕೆ ಬಂದನಂತರ ಮೋಸ ಮಾಡಬೇಕು. ನಂಬದೇ ಇದ್ದರೆ ಮೋಸ ಮಾಡುವುದು ಹೇಗೆ?

ಇಟಲಿಯ ನೌಕಾದಳದವರ ಕತೆಯನ್ನೇ ನೋಡಿ. ಅವರೋ ಹೇಳಿಕೇಳಿ ಬಿಳಿ ಚರ್ಮದೋರು. ಅವರ ಕಣ್ಣಿಗೆ ಕಪ್ಪು ಚರ್ಮದೋರೆಲ್ಲ ದರೋಡೆಕೋರರಂತೆ ಕಾಣಿಸುತ್ತಾರೋ ಏನೋ. ಕೇರಳದ ಮೀನುಗಾರರನ್ನು ನೋಡಿದಾಗ ಅವರಿಗೆ ಕಡಲ್ಗಳ್ಳರೇ ಬಂದರು ಎನ್ನಿಸಿತೇನೋ. ಆ ಕಳ್ಳರಿಂದ ಯಾವುದೇ ತೊಂದರೆಯಾಗದಿರಲಿ ಅಂತ ಗುಂಡು ಹಾರಿಸಿದರಂತೆ.

ಇಬ್ಬರು ಹಾರಿಸಿದ ಗುಂಡಿಗೆ ಇಬ್ಬರು ಕರಿಯರು ಬಲಿಯಾಗಿದ್ದರಂತೆ. ತಮ್ಮ ಗುರಿ ತಪ್ಪದ್ದಕ್ಕೆ ಹೆಮ್ಮೆ ಪಟ್ಟರಂತೆ. ಸಂತೋಷ ಸಂಭ್ರಮದಿಂದ ತಮ್ಮ ಸಾಧನೆಯನ್ನು ಆಚರಿಸುತ್ತಿದ್ದರಂತೆ. ಕಡಲ್ಗಳ್ಳರ ಈ ಬೇಟೆ ಭಾರತದವರಿಗೆ ಅಮಾಯಕ ಮೀನುಗಾರರ ಕೊಲೆಯಾಗಿ ಕಂಡಿತಂತೆ. ಇಬ್ಬರು ಗುರಿಕಾರರನ್ನೂ ಬಂಧಿಸಿದರಂತೆ. ನಮ್ಮ ಸರಹದ್ದಿನಲ್ಲಿ ಹಡಗು ನಿಲ್ಲಿಸಿಕೊಂಡು ಏನು ಮಾಡುವುದು? ಸುಮ್ಮನೆ ನಿಲ್ಲಿಸಬೇಕಾಯ್ತದೆ. ನಮಗೆ ಲಾಭ ಇಲ್ಲ, ಹಡಗಿನ ಮಾಲೀಕರಿಗೆ ನಷ್ಟ. ಇದು ಆಗಬಾರದು ಅಂತ ಉದಾರ ಮನಸ್ಸಿನಿಂದ ಹಡಗು ಇಟಲಿಗೆ ಹೋಗಲು ಅವಕಾಶ ಕಲ್ಪಿಸಿದರಂತೆ.

ಭಾರತ ಭಲೇ ಹುಶಾರಿ ದೇಶ ಅಲ್ವ. ಹಡಗನ್ನು ಕಳಿಸಿದರೂ ಗುರಿಕಾರರನ್ನ ಇಲ್ಲೇ ಇಟ್ಟುಕೊಂಡಿದ್ದರಂತೆ. ಬಡ ಮೀನುಗಾರರನ್ನು ವಿನಾಕಾರಣ ಸಾಯಿಸಿದ ಈ ಕೊಲೆಗಡುಕರಿಗೆ ಶಿಕ್ಷೆ ಆಗಲೇ ಬೇಕು ಅಂತ ವಿಶೇಷ ನ್ಯಾಯಾಲಯ ಸ್ಥಾಪನೆಗೂ ಒಪ್ಪಿಗೆ ಪಡೆದಿತ್ತಂತೆ ಸರ್ಕಾರ. ಎಷ್ಟೇ ಆಗಲಿ ಬಡವರ ಸರ್ಕಾರ ಅದು!

ಇನ್ನೇನು ವಿಚಾರಣೆ ಪ್ರಾರಂಭ ಆಗಿಯೇಹೋಯಿತು ಅನ್ನುವಷ್ಟರಲ್ಲಿ ಕ್ರಿಸ್‌ಮಸ್ ಹಬ್ಬ ಬಂತಂತೆ. ಆರೋಪಿಗಳು 'ನಮಗೆ ವರ್ಷಕ್ಕೆ ಇದೊಂದೇ ಹಬ್ಬ ಇರೋದು. ಮನೆಗೆ ಹೋಗಿ ಹೆಂಡತಿಮಕ್ಕಳ ಜೊತೆ ಹಬ್ಬ ಆಚರಿಸಿ ಬರ್‍ತೀವಿ' ಅಂತ ಕೇರಳದ ಹೈಕೋರ್ಟಿನ ಅನುಮತಿ ಬೇಡಿದರಂತೆ. ನ್ಯಾಯಾಧೀಶರೂ ಮನುಷ್ಯರೇ ಅಲ್ಲವಾ. ಭಾರತೀಯರಿಗೆ ನೂರಾರು ಹಬ್ಬಹರಿದಿನಗಳು ಅಂತ ಇವೆ. ಈ ಪಾಪಿ ಮುಂಡೇವಕ್ಕೆ ಆ ಭಾಗ್ಯವೂ ಇಲ್ಲ, ಮಾಡೋ ಒಂದು ಹಬ್ಬವನ್ನಾದರೂ ಮನೆಮಂದಿಯೊಂದಿಗೆ ಸಂತೋಷದಿಂದ ಆಚರಿಸಲಿ ಅಂತ ಅನ್ನಿಸಿತೋ ಏನೋ. 'ಹೋಗಿ ಬನ್ನಿ. ಆದ್ರೆ ಹಬ್ಬ ಮುಗಿದ ತಕ್ಷಣ ಹಿಂತಿರುಗಬೇಕು' ಅನ್ನೋ ಕಂಡೀಷನ್ ಹಾಕಿದ್ರಂತೆ. ಅದಕ್ಕೆ ಇವರೂ ಒಪ್ಪಿಕೊಂಡರಂತೆ.



ಕೋರ್ಟಿಗೆ ಕೊಟ್ಟಿದ್ದ ಮಾತಲ್ಲವಾ. ಹಂಗೇ ನಡೆದುಕೊಂಡರಂತೆ. 'ಭೇಷ್ ಇವರು ಸರಿ. ನಮ್ಮ ಮಾತಿಗೆ ಬೆಲೆ ಕೊಟ್ಟು ಬಂದವ್ರೆ. ಈ ಇನಮ್ಮುಗಳನ್ನು ನಂಬಬಹುದು' ಅಂತೆಲ್ಲ ಕೋರ್ಟಿಗೂ ಅನ್ನಿಸಿರಬೇಕು.

ಹೀಗೇ ಸ್ವಲ್ಪ ದಿವಸ ಕಳೆಯಿತಂತೆ. ಇಟ[...] ಸಾರ್ವತ್ರಿಕ ಚುನಾವಣೆ ದಿವಸ ಬಂದಿತಂತೆ. ಮತ ಹಾ[...] ಇರೋದು ಪಾಪ ಅಲ್ವಾ. ಇವರು ಇಲ್ಲಿದ್ದರಲ್ಲಾ. ಹಿಂ[...] 'ಓಟಾಕಿ ಬಂದು ಬಿಡ್ತೀವಿ ಅಂತ ಕೋರ್ಟನ್ನು [...] ಕೇಳಿಕೊಂಡರಂತೆ. ಹಿಂದಿನ ಅನುಭವ ಇತ್ತಲ್ಲ, ಇ[...] ಮೋಸ ಮಾಡೋ ಪೈಕಿ ಅಲ್ಲ ಅಂದು ಕೊಂಡಿರಬೇ[...] ಕೋರ್ಟು. ಧಾರಾಳವಾಗಿ ಹೋಗಿಬನ್ನಿ ಅಂತ[...] ಹೆಂಗಾದರೂ ಇರಲಿ ಅಂತಾವ ಓಟು ಮಾಡಿ ಇಂ[...] ದಿವಸ ಬಂದುಬಿಡ್ತೀವಿ ಅಂತಾನೂ ಕೋ[...] ಬರೆಸಿಕೊಂಡಿತಂತೆ.


ಓಟು ಮಾಡೋಕೆ ಅಂತ ಇಟಲಿಗೋಗಿದ್ರಲ್ಲ, ಮ[...] ಬರೋದಕ್ಕೆ ಮನಸ್ಸೇ ಬರ್‍ಲಿಲ್ಲವಂತೆ. ಹೆಂಗಿದ್ರೂ ಭಾ[...] ಆಳ್ತಿರೋದು ಸೋನಿಯಾ ಮೇಡಂ ಅಲ್ವಾ ಅಂದಮೇ[...] ನಮ್ಮೋರೆ ಆದಂಗಾಯ್ತಲ್ಲ ಎಂದುಕೊಂಡರೋ [...] ಕತೆಯೋ. ಯಾವುಯಾವುದೋ ಕಾನೂನು ಹೇಳ್ತಾ ನ[...] ಮೇಲೆ ವಿಚಾರಣೆ ನಡೆಸೋ ಅಧಿಕಾರಾನೂ ನಿಮ[...] ನಾವು ಬರೋಲ್ಲ ಅಂದುಬುಟ್ರಂತೆ!

ಭಾರತ ಸರ್ಕಾರ, ನ್ಯಾಯಾಲಯಗ[...] ಪೀಕಲಾಟಕ್ಕಿಟ್ಟುಕೊಂಡಿತಂತೆ. ಈ ಮುಂಡೇಮಕ್ಕಳು ನಂ[...] ಕೈ ಕೊಟ್ಟವರಲ್ಲಾ ಇವರಿಗೆ ಸರಿಯಾಗಿ ಬುದ್ಧಿ ಕಲಿಸಬೇ[...] ಅಂತಾವ ಇಲ್ಲಿ ಇಟಲಿಯ ರಾಯಭಾರಿ ಇದ್ದನಲ್ಲ ಅವ[...] ಭಾರತ ಬಿಟ್ಟು ಹೊರಗೆ ಹೋಗಕೂಡದು ಅಂತ ದಿಗ್ಬಂ[...] ಹಾಕಿದೊ.

ಭಾರತ ದಿಗ್ಬಂಧನ ಹೇರಿತ್ತು, ಆ[...] ಒಳಗೊಳಗೆ ಇಟಲಿ ಸರ್ಕಾರ ಸೆ[...] ಹೊಡೆದು ನಿಂತರೆ, ಏನು ಗತಿ ಎ[...] ತಿಕೇರೂ ಇತ್ತಂತೆ. ಇದರ ಸುಳಿ[...] ಇಟಲಿಯವರಿಗೆ ಸಿಕ್ಕಿತೋ ಅಥವ ಒಂದ[...] ಗಂಡುಕೊಳ್ಳೋಣ ಎಂದೆ[...] 'ಅವರಿಬ್ಬರನ್ನು ಕಳುಹಿಸಿರಿ. ನೀವು ನ[...] ಒಂದು ಮಾತು ನಡೆಸಿಕೊಡಬೇ[...] ಅಂದಿತಂತೆ. ಭಾರತ ಸರ್ಕಾರ 'ಅದೇ[...] ಹೇಳ್ರಪಾ. ನಮ್ ಕೈಲಿ ಆಗೋದಾ[...] ಮಾಡ್ತೀವಿ' ಅಂತಂತೆ. 'ಅದೇನ್ ಅ[...] ಭಾರೀದು ಅಲ್ಲ, ಅವರಿಬ್ಬರೂ ನಿಮ್ಮ ದೇ[...] ಕಾಲಿಡ್ತಿದ್ದಂಗೆ ಬಂಧಿಸಬೇಡಿ. ಕೇಸು ನಡೀ[...] ಬ್ಯಾಡ ಅನ್ನೋದಿಲ್ಲ, ಆದರೆ ಅವರ[...] ಮರಣದಂಡನೆ ವಿಧಿಸಬಾರದು' ಅಂತ ಕೇಳ್ಕಂಡ್ರಂತೆ. [...] ಕಳ್ಕಾದಿಲ್ಲ ಅಂತ ಕುಂತ್ಕಂಡ್ರೆ ಏನಪ್ಪ ಗತಿ ಅನ್[...] ಚಿಂತೇಲಿದ್ದವರಿಗೆ ಈ ಮಾತ ಕೇಳಿ ಹಾಲುಅ[...] ಉಂಡಗಾಯ್ತಂತೆ. ಖುಷೀಲಿ 'ಓಕೆ' ಅಂತಂತೆ!

ರಾಜತಾಂತ್ರಿಕ ಸಂಬಂಧ ಉಳಿಸಿಕೊಳ್ಳಬೇಕು ಅಂದ[...] ಇಂತಹ ತಪ್ಪುಗಳು ಅನಿವಾರ್ಯವೋ ಏನೋ...!

ಅಂಬೇಡ್ಕರ್ ಮೂರ್ತಿ ಭಂಜಕರಾಗಿದ್ದರು



'ಲಂಕೇಶ್' ವಾರ ಪತ್ರಿಕೆಯ ಏಪ್ರಿಲ್ 3, 2013 ರ ಸಂಚಿಕೆಯ ಪುಟ 2 ರಲ್ಲಿ ಪ್ರಕಟವಾಗಿರುವ 'ಅಂಬೇಡ್ಕರ್ ವಾಸ್ತು' ಎಂಬ ಶೀರ್ಷಿಕೆಯಡಿ ಪ್ರಕಟವಾದ ಲೇಖನಕ್ಕೆ ನಮ್ಮ ಅನಿಸಿಕೆ.

ಡಾ. ಎಚ್.ವಿ. ವಾಸು ಅವರ ಲೇಖನ ನಿಜಕ್ಕೂ ಅರ್ಥಗರ್ಭಿತ ಮತ್ತು ವಿಚಾರಪೂರ್ಣ. ಅವರ ಲೇಖನವನ್ನು ನಾವು ಸ್ವಾಗತಿಸುತ್ತೇವೆ. ದಿನಾಂಕ 16.3. 2013 ರಂದು ಬೆಳಗ್ಗೆ ಸುಮಾರು 11.00 ಗಂಟೆ ಸಮಯದಲ್ಲಿ ವಿಕಾಸಸೌಧದ ಎರಡನೇ ಮಹಡಿಯಲ್ಲಿ ರಾಜ್ಯದ ಸಮಾಜ ಕಲ್ಯಾಣ ಸಚಿವರಾದ ನಾರಾಯಣಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಪ್ರತಿಮೆ ಸ್ಥಳಾಂತರದ ಬಗ್ಗೆ ಸುದೀರ್ಘ ಚರ್ಚೆ ನಡೆಯಿತು. ಆ ಸಭೆಯಲ್ಲಿ ಸರ್ಕಾರದ ಪರ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಡಿ.ಪಿ.ಎ.ಆರ್. ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು, ಬಿ.ಎಂ.ಆರ್.ಸಿ.ಎಲ್ ವ್ಯವಸ್ಥಾಪಕ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು, ಬಿಎಂಆರ್‌ಸಿಎಲ್ ಕಾನೂನು ಅಧಿಕಾರಿ ಮತ್ತು ಒಂಭತ್ತು ದಲಿತ ಸಂಘಟನೆಗಳ ಮುಖಂಡರು ಭಾಗವಹಿಸಿದ್ದರು. ಪತ್ರಿಕಾ ವರದಿಗಾರರಾಗಲೀ ಅಥವಾ ಟಿ.ವಿ. ಮಾಧ್ಯಮದವರಾಗಲೀ ಭಾಗವಹಿಸಿರಲಿಲ್ಲ, ಅವರಿಗೆ ಆಹ್ವಾನವೇ ಹೋಗಿರಲಿಲ್ಲ.

ಹೀಗಿರುವಾಗ ದಿನಾಂಕ 20.3.2013 ರ ಪ್ರಜಾವಾಣಿ ಪತ್ರಿಕೆಯಲ್ಲಿ "ಪ್ರತಿಮೆ ಸ್ಥಳಾಂತರಕ್ಕೂ ವಾಸ್ತು ವ್ಯಾಮೋಹ" ಎಂಬ ಸುದ್ದಿ ಪ್ರಕಟವಾಯಿತು. ಕೆಲವು ದಲಿತ ಪ್ರತಿನಿಧಿಗಳು ಈ ವಾಸ್ತು ವಿಷಯವನ್ನು ಪ್ರಸ್ತಾಪಿಸಿದರು ಎಂಬುದು ಪ್ರಜಾವಾಣಿಯ ಆರೋಪ. ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳನ್ನು ಬಿಟ್ಟರೆ ಬೇರೆ ಯಾವ ಪತ್ರಿಕೆಯಲ್ಲೂ ಈ ವಾಸ್ತು ವಿಷಯ ಪ್ರಕಟವಾಗಲಿಲ್ಲ, ವಾಸ್ತು ವಿಷಯವನ್ನು ಪ್ರಸ್ತಾಪಿಸಿದ ದಲಿತ ಪ್ರತಿನಿಧಿಗಳಾರು ಎಂದು ಪ್ರಜಾವಾಣಿಯಲ್ಲಿ ಪ್ರಕಟವಾಗಲಿಲ್ಲ, ನಾವು ದಿನಾಂಕ 22.3.2013 ರಂದು ಪ್ರಜಾವಾಣಿಯ ಸಂಪಾದಕರಿಗೆ ಸ್ಪಷ್ಟನೆ ನೀಡಿ ಪತ್ರ ಬರೆದು ವಾಸ್ತು ವಿಷಯವನ್ನು ಅಲ್ಲಗಳೆದವು ಹಾಗೂ ನಮ್ಮ ಸ್ಪಷ್ಟನೆಯನ್ನು ಪ್ರಜಾವಾಣಿಯಲ್ಲಿ ಪ್ರಕಟಿಸಬೇಕೆಂದು ಕೋರಿಕೊಂಡೆವು. ಆದರೆ ಪ್ರಜಾವಾಣಿ ನಮ್ಮ ಅನಿಸಿಕೆಯನ್ನು ಇದುವರೆಗೂ ಪ್ರಕಟಿಸಲಿಲ್ಲ.

ನಾವೀಗ 21ನೇ ಶತಮಾನದಲ್ಲಿದ್ದೇವೆ. ವಾಸ್ತು, ಜ್ಯೋತಿಷ್ಯ, ಹೋಮ, ಹವನ, ಯಜ್ಞ, ಯಾಗಾದಿಗಳಲ್ಲಿ ನಮಗೆ ನಂಬಿಕೆ ಇಲ್ಲ, ಹಿಂದೂ ಸಂಘ ಪರಿವಾರಗಳ ಭ್ರಷ್ಟಾಚಾರ, ಕೋಮುವಾದ ಮತ್ತು ಜಾತೀಯತೆಯನ್ನು ಟೀಕಿಸಿ, ಸತ್ಯಸಂಗತಿಗಳನ್ನು ಪ್ರಕಟಿಸುವ ಏಕೈಕ ಪತ್ರಿಕೆಯೆಂದರೆ "ಗೌರಿ ಲಂಕೇಶ್ ಪತ್ರಿಕೆ" ಮಾತ್ರ ಎಂದರೆ ಅತಿಶಯೋಕ್ತಿಯಾಗಲಾರದು. ನಿಮಗೆ ಬಾಬಾ ಸಾಹೇಬರು ಮತ್ತಷ್ಟು ಶಕ್ತಿ ನೀಡಲಿ ಎಂದು ಹಾರೈಸುತ್ತೇವೆ.

- ಅಣ್ಣಯ್ಯ, ರಾಜ್ಯಾಧ್ಯಕ್ಷರು, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಬೆಂಗಳೂರು

ಅಂಬೇಡ್ಕರ್ ಅವರ ಮೂರ್ತೀಕರಣ ಅಗತ್ಯವಿತ್ತೇನೋ. ಆದರೆ ಅವರ ದೈವೀಕರಣ ಅಕ್ಷಮ್ಯ ಅಪರಾಧ. ಏಕೆಂದರೆ ಬಾಬಾ ಸಾಹೇಬರೇ ಸ್ವತಃ ಮೂರ್ತಿ ಭಂಜಕ ಮತ್ತು ಅಲೌಕಿಕತೆಯನ್ನು ವಿರೋಧಿಸುತ್ತಿದ್ದರು. ದಲಿತರಿಗೆ ಬ್ರಾಹ್ಮಣಶಾಹಿಯ ಮೌಢ್ಯದ ಬಗ್ಗೆ ಎಚ್ಚರಿಕೆ ಇದೆ. ಆದರೆ ಕೋಮುವಾದದ ಹಿಂದಿರುವ ಬ್ರಾಹ್ಮಣಶಾಹಿಯ ಬಿಂಬ ಕಾಣದಾಗಿದೆ. ಅದಕ್ಕೆ ಕಾರಣ ಈ ನೆಲದ ದಲಿತ ನಾಯಕರು, ಸಂಘಟನೆ ಮತ್ತು ಪ್ರಗತಿಪರರು. ಏಕೆಂದರೆ ಆದಿವಾಸಿ, ದಲಿತರ ಕಣ್ಣಿಗೆ ಮಣ್ಣೆರಚಿ ಅವರನ್ನು ಬ್ರಾಹ್ಮಣಶಾ[...] ತೆಕ್ಕೆಗೆ ತೆಗೆದುಕೊಳ್ಳಲು ಬಿಟ್ಟಿರುವವರು ಈ ಮೇಲಿನವ[...] ಇದಕ್ಕೆ ಉದಾಹರಣೆ ಮಡೆ ಸ್ನಾನ.

ಪ್ರಗತಿಪರರು ಮತ್ತು ದಲಿತ ಸಂಘಟನೆಗಳ ಕಾರ್ಯಕ್ಷೇ[...] ಹಳ್ಳಿಗಳ ಕಡೆಗೆ ಹೊರಳಬೇಕಾಗಿದೆ.





- ವಿಕಾಸ್ ಆರ್ ಮೌರ್ಯ, ಬೆಂಗಳೂ[...]



ಬಿಜೆಪಿಯ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿ ಕಳೆದ ಸೋ[...] ವಾರ ತಮ್ಮ ಮೊಟ್ಟಮೊದಲ ಭಾಷಣದಲ್ಲೇ 'ಗಾಂಧೀಜಿಯ[...] ಮೂರು ಮಂಗಗಳು ಮೂರು ಕೆಟ್ಟ ವಿಷಯಗಳ[...] ಪ್ರತಿನಿಧಿಸುತ್ತವೆ' ಎಂಬ ತಪ್ಪು ವ್ಯಾಖ್ಯಾನ ನೀಡಿದ್ದಾರೆ.

ನಿಜವಾಗಿ ಗಾಂಧೀಜಿಯ ಮೂರು ಮಂಗಗ[...] ಕೆಟ್ಟದ್ದನ್ನು ಮಾಡಬಾರದೆಂದು 'ಸದುಪದೇಶ' ಮಾಡುತ್ತವೆಯೆ[...] ಹೊರತು ಕೆಟ್ಟದ್ದನ್ನು ಪ್ರತಿನಿಧಿಸುತ್ತಿಲ್ಲ. ಗಾಂಧೀಜಿಯ[...] ಮಂಗಗಳಲ್ಲಿ ಒಂದಕ್ಕೆ ಕಣ್ಣಿಲ್ಲ, ಇನ್ನೊಂದಕ್ಕೆ ಕಿವಿಯಿಲ[...] ಮತ್ತೊಂದಕ್ಕೆ ಮಾತು ಬರಲ್ಲ - ಇದು ನಮ್ಮ ಕುರುಡ[...] ನ್ಯಾಯಾಂಗ, ಕಿವುಡ ಸರಕಾರ ಮತ್ತು ಮೂಕ ಪ್ರಧಾನಿಗಳನ್[...] ಪ್ರತಿನಿಧಿಸುತ್ತವೆ ಎಂದು ಹೇಳಿ ಜೋಷಿಯವರು ತಮ[...] ಅಜ್ಞಾನವನ್ನು ಪ್ರದರ್ಶಿಸಿದ್ದಾರೆ. ನಿಜವಾಗಿ ಗಾಂಧೀಜಿಯ[...] ಬುದ್ಧಿವಂತ ಮಂಗಗಳು - ಕೆಟ್ಟದ್ದನ್ನು ನೋಡಬಾರದು[...] ಕೆಟ್ಟದ್ದನ್ನು ಕೇಳಬಾರದು ಮತ್ತು ಕೆಟ್ಟದ್ದನ್ನು ಮಾತನಾಡಬಾರದು[...] ಎಂಬ ಸಂದೇಶ ಸಾರುವುದಕ್ಕಾಗಿ ತಮ್ಮ ಕಣ್ಣು-ಕಿವಿ-ಬಾಯಿ[...] ಮುಚ್ಚಿಕೊಂಡಿವೆಯೇ ಹೊರತು ಅವು ಕುರುಡ-ಕಿವುಡ[...] -ಮೂಕ ಮಂಗಗಳಲ್ಲ.

ಈಗಿನ ಮಹಿಳೆಯರ ಪರಿಸ್ಥಿತಿಯನ್ನು ಗಾಂಧೀ[...] ನೋಡಿದ್ದರೆ ಅವರು ನಾಲ್ಕನೆಯ ಮಂಗವನ[...] ಜೋಡಿಸುತ್ತಿದ್ದರು ಎಂದೆನಿಸುತ್ತದೆ. ಅದೇ ತನ್ನ ಕೈಗಳಿಂ[...]



ಟಿಕೆಟ್‌ಗಾಗಿ ಸಿನಿಮಾ ನಟರ ಫೈಟ್

ಸಾಮಾನ್ಯವಾಗಿ ಸಿನಿಮಾದವರ ಕಾಲ್‌ಶೀಟ್‌ಗಾಗಿ ...ವರ ಮನೆ ಬಾಗಿಲಿಗೆ ನಿರ್ಮಾಪಕರು ತಡಕಾಡುವುದು ...ಮಾಮೂಲಿ. ಆದರೆ ಚುನಾವಣೆ ಬಂದಾಗ ಇದೇ ಸಿನಿಮಾ ...ರೆಯರು ರಾಜಕಾರಣಿಗಳ ಕಾಲ್‌ಶೀಟ್‌ಗಾಗಿ ಅವರ ...ಮನೆ ಬಾಗಿಲಲ್ಲೇ ನಿಂತಿರುತ್ತಾರೆ.

ಈ ಬಾರಿಯ ಅಸೆಂಬ್ಲಿ ಚುನಾವಣೆಯಲ್ಲಿ ಹಿಂದೆಂದೂ ...ಣದಷ್ಟು ಸಂಖ್ಯೆಯಲ್ಲಿ ನಟನಟಿಯರು ಚುನಾವಣಾ ...ಣಕ್ಕೆ ಧುಮುಕುವ ಸಾಧ್ಯತೆ ಇದೆ. ಅಂದರೆ ಬರುವ ...ನಗಳಲ್ಲಿ ಚುನಾವಣಾ ಪ್ರಚಾರದಲ್ಲಿ ಸಿನಿಮಾದವರ ...ಾಗವಹಿಸುವಿಕೆಯಿಂದ ರಂಗು ಪಡೆಯುತ್ತದೆ ಎಂದು ...ಗಲೇ ಭವಿಷ್ಯ ನುಡಿಯಬಹುದು.

ಕಾಂಗ್ರೆಸ್‌ನ ರೆಬಲ್‌ಸ್ಟಾರ್ ಅಂಬರೀಶ್, ಸಿನಿಮಾ ...ೋಕದ ಇನ್ಸ್‌ಪೆಕ್ಟರ್ ಬಿ.ಸಿ. ಪಾಟೀಲ್, ಮಾಜಿ ಸಂಸದ ...ಕುಮಾರ್ ಹಾಗೂ ಉಮಾಶ್ರೀ ಇವರಿಗೆಲ್ಲ ಟಿಕೆಟ್ ...ುವ ಸಾಧ್ಯತೆಗಳಿವೆ. ಇವರೆಲ್ಲ ರಾಜಕೀಯದಲ್ಲೂ ಒಂದು ...ತಿಯಲ್ಲಿ ಹಳೆ ಹುಲಿಗಳೇ. ಆದರೆ ಬಿಜೆಪಿಯಲ್ಲಿರುವ ...ನಟಿಯರು ಯಾಕೋ ಈ ಬಾರಿ ಚುನಾವಣಾರಂಗದಲ್ಲಿ ...ರ್ಧಿಸುವ ಮನಸ್ಸು ಮಾಡುತ್ತಿಲ್ಲ. ಮಾಜಿ ಶಾಸಕ ...ುಖ್ಯಮಂತ್ರಿ ಚಂದ್ರು, ಶ್ರೀನಾಥ್ ಮೊದಲಾದವರು ...ರ್ಥಿಯ ಬದಲಿಗೆ ಪ್ರಚಾರ ಮಾಡುವ ಉತ್ಸಾಹವನ್ನಷ್ಟೆ ...ೋರುತ್ತಿದ್ದಾರೆ. ಹಾಗೆಯೇ ರಾಮಕೃಷ್ಣ ಹೆಗಡೆಯವರ ...ಟ್ಟದ ಶಿಷ್ಯರಾಗಿದ್ದ ಅನಂತ್‌ನಾಗ್ ಮತ್ತು ...ಎನ್.ಸೀತಾರಾಂ ಎಂಬ ಬುದ್ಧಿಜೀವಿಗಳು ಮತ್ತು ನಟರು ...ಾನವಾಗಿರುವ ಸಾಧ್ಯತೆ ಹೆಚ್ಚು.

ಈ ಹಿಂದೆ ಎರಡು ಮೂರು ದಶಕಗಳ ಕಾಲ ...ಮಾದಲ್ಲಿ ನಟಿಸಿದ ನಂತರ ತಮ್ಮ ವೃತ್ತಿಜೀವನದ ...ುಸ್ಸಂಜೆಯಲ್ಲಿ ತಾರೆಯರು ರಾಜಕೀಯಕ್ಕೆ ಧುಮುಕು ...ತ್ತಿದ್ದರು. ಆದರೆ ಈಗ ಪರಿಸ್ಥಿತಿ ಅದಕ್ಕೆ ತದ್ವಿರುದ್ಧವಾಗಿದೆ. ...ಂದೆರಡು ಸಿನಿಮಾಗಳಲ್ಲಿ ನಟಿಸಿರುವ ಕಲಾವಿದರೂ ...ಜಕೀಯ ಮಹತ್ವಾಕಾಂಕ್ಷೆಯನ್ನು ಹೊಂದಿದ್ದು ಸಿನಿಮಾ ...ಂದ ರಾಜಕೀಯದ ಕಡೆಗೆ ದಾಪುಗಾಲು ಹಾಕುತ್ತಿದ್ದಾರೆ. ...ದಲಾಗಿರುವ ರಾಜಕೀಯ ಸಂದರ್ಭದಲ್ಲಿ ರಾಜಕೀಯ ...ಕ್ಷಗಳೂ ಸಿನಿಮಾದವರಿಗೆ ಟಿಕೆಟ್ ನೀಡುವುದು ಬಹುತೇಕ ...ನಿವಾರ್ಯವೂ ಆಗಿದೆ.

ಕಾಂಗ್ರೆಸ್ ಕಲಾವಿದರ ಜೋಶ್

ಉದಾಹರಣೆಗೆ ನೂರು ವರ್ಷಗಳಿಗಿಂತಲೂ ಉದ್ದನೆ ...ತಿಹಾಸವಿರುವ ಕಾಂಗ್ರೆಸ್ ಪಕ್ಷವನ್ನೇ ತೆಗೆದುಕೊಳ್ಳಿ. ಕನ್ನಡ ...ತ್ರರಂಗದ ನಂ.1 ನಾಯಕಿ ರಮ್ಯಾ ಕಾಂಗ್ರೆಸ್ ಪಕ್ಷವನ್ನು ...ೇರಿ ಒಂದು ವರ್ಷ ಸಂದುಹೋಗಿದೆ. ಕಳೆದ ವರ್ಷ ...ುವ ಕಾಂಗ್ರೆಸ್ ಅಧ್ಯಕ್ಷ ಪದವಿಗೆ ಸ್ಪರ್ಧಿಸಲು ಆಸಕ್ತಿ ತೋರಿಸಿದ್ದ ರಮ್ಯಾಗೆ ಹೈಕಮಾಂಡ್ ಕೊನೆಕ್ಷಣದಲ್ಲಿ ನೋ ಎಂದು ಹೇಳಿತ್ತು. ಈಗ ಆಕೆ "ವಿಧಾನ ಸಭೆಗೆ ಸ್ಪರ್ಧಿಸಲು ನನ್ನ ಬದಲಿಗೆ ನನ್ನ ತಾಯಿಗೆ ಟಿಕೆಟ್ ಕೊಡಿ" ಎಂದು ಹೈಕಮಾಂಡನ್ನು ಕೇಳಿದ್ದಾರೆ. ಅದೇ ರೀತಿ "ನನ್ನ ತಾಯಿಗೂ ಟಿಕೆಟ್ ಕೊಡಿ" ಎಂದು ಚಾಲೆಂಜಿಂಗ್ ಸ್ಟಾರ್ ದರ್ಶನ್ ಕೂಡ ಕಾಂಗ್ರೆಸ್ ಹೈಕಮಾಂಡನ್ನು ಕೇಳಿಕೊಂಡಿದ್ದಾರೆ. ಈ ತಾರೆಗಳ ತಾಯಂದಿರಿಗೆ ಟಿಕೆಟ್ ಸಿಕ್ಕರೆ ಒಂದು ರೀತಿಯಲ್ಲಿ ಸ್ವತಃ ತಾರೆಯರೇ ಸ್ಪರ್ಧಿಸಿ ದಂತಾಗುತ್ತದೆ. ಏಕೆಂದರೆ ರಮ್ಯಾಳ ತಾಯಿ ನಿಂತರೆ ರಮ್ಯಾ ಚುನಾವಣೆಯಲ್ಲಿ ತನ್ನ ಅಮ್ಮನ ಪರವಾಗಿ ಓಡಾಡಿಕೊಂಡು ಪ್ರಚಾರ ಮಾಡಬೇಕಾಗುತ್ತದೆ. ಹಾಗೆಯೇ ದರ್ಶನ್ ಕೂಡ.

"ಮುಂದಿನ ಬಾರಿ ನನಗೆ ಕಾಂಗ್ರೆಸ್ ಟಿಕೆಟ್ ಸಿಕ್ಕೇ ಸಿಗುತ್ತದೆ" ಎಂದು ಹಿರಿಯ ಮತ್ತು ಪ್ರತಿಭಾವಂತ ನಟಿ ಉಮಾಶ್ರೀಯವರು ಕಳೆದ ಆರು ವರ್ಷಗಳಿಂದ ಬಾಗಲಕೋಟೆ ಜಿಲ್ಲೆಯ ತೇರದಾಳ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಬಂದಿದ್ದಾರೆ. ಆದರೆ ಈಗ ತೇರದಾಳ ಕ್ಷೇತ್ರದ ಮೇಲೆ ಮೊನ್ನೆ ತಾನೆ ಕಾಂಗ್ರೆಸ್ ಪಕ್ಷವನ್ನು ಸೇರಿದ ಮಾಜಿ ಪೊಲೀಸ್ ಅಧಿಕಾರಿ ಶಂಕರ್ ಬಿದರಿಯವರ ಕಣ್ಣು ಬಿದ್ದಿರುವುದರಿಂದ ಉಮಾಶ್ರೀಯವರ ಭವಿಷ್ಯ ದೋಲಾಯಮಾನ ಪರಿಸ್ಥಿತಿಯಲ್ಲಿದೆ.

ಕಾಂಗ್ರೆಸ್‌ನಲ್ಲಿ ಸುದ್ದಿಯಲ್ಲಿರುವ ಮತ್ತೊಬ್ಬ ನಾಯಕಿಯೆಂದರೆ ಭಾವನಾ. ಮೊನ್ನೆ ಮೊನ್ನೆಯಷ್ಟೆ ಕಾಂಗ್ರೆಸ್ ಪಕ್ಷವನ್ನು ಸೇರಿದ ಭಾವನಾ ದಾವಣಗೆರೆ ಅಥವಾ ಕರಾವಳಿ ಪ್ರದೇಶದ ಯಾವುದಾದರೊಂದು ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತವನ್ನು








ಹೈಕಮಾಂಡಿಗೆ ತಿಳಿಸಿದ್ದಾರೆ.

ಕಳೆದ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದ ಬಿ.ಸಿ.ಪಾಟೀಲ್ ಅವರಿಗೆ ಈ ಬಾರಿ ಟಿಕೆಟ್ ಸಿಗುವುದು ಅಂತಹ ಕಷ್ಟದ ಕೆಲಸವೇನಲ್ಲ. ಆದರೆ ಹೋದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಗೆದ್ದು ಆನಂತರ ಚೆಡ್ಡಿಗಳ ಆಪರೇಷನ್ ಕಮಲಕ್ಕೆ ತುತ್ತಾಗಿ ಬಿಜೆಪಿಗೆ ಹಾರಿಹೋಗಿದ್ದ, ಕೆಲ ಕಾಲ ಮಂತ್ರಿಯಾಗಿಯೂ ಮಜಾ ಉಡಾಯಿಸಿದ ಸಿ.ಪಿ.ಯೋಗೇಶ್ವರ್ ಈಗ ಮತ್ತೆ ಕಾಂಗ್ರೆಸ್ ಬಾಗಿಲಲ್ಲಿ ನಿಂತಿದ್ದಾರೆ. ಆದರೆ ಅವರಿಗೆ ಕಾಂಗ್ರೆಸ್ ಹೈಕಮಾಂಡ್ ಟಿಕೆಟ್ ಕೊಡುವುದು ಅನುಮಾನ. ಹಾಗೆಯೇ ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ನಿರ್ದೇಶಕ ಮಹೇಂದರ್ ಈಗ ತಮ್ಮ ಅಭಿಮಾನಿಗಳ ಜೊತೆಗೆ ಕಾಂಗ್ರೆಸ್ ಸೇರಿದ್ದಾರಾದರೂ ಅವರಿಗೂ ಟಿಕೆಟ್ ಸಿಗುವುದು ಡೌಟೇ.

ಬಿಜೆಪಿ ಥಿಯೇಟರ್ ಖಾಲಿ

ಆಡಳಿತಾರೂಢ ಬಿಜೆಪಿ ಪಕ್ಷದಲ್ಲೂ ಕೆಲವು ಸಿನಿಮಾ ತಾರೆಯರು ಟಿಕೇಟ್‌ಗಾಗಿ ಪೈಪೋಟಿ ನಡೆಸುತ್ತಿದ್ದಾರೆ. ಗೃಹ ಸಚಿವ ಆಶೋಕ್ ಅವರ ಪಟ್ಟದ ಶಿಷ್ಯನಾದ ಜಗ್ಗೇಶ್ ಈಗ ವಿಧಾನ ಪರಿಷತ್ ಸದಸ್ಯ. ಅವರೂ ಕೂಡ ಕಳೆದ ಬಾರಿ ಕಾಂಗ್ರೆಸ್‌ನಿಂದ ಗೆದ್ದಿದ್ದರೂ 'ಕೈ'ಗೆ ಕೈಕೊಟ್ಟು ಚೆಡ್ಡಿಗಳ ಪಕ್ಷ ಸೇರಿದ್ದರು. ಆದರೆ ಮತದಾರರ ಕೆಂಗಣ್ಣಿಗೆ ಗುರಿಯಾಗಿ ಉಪ ಚುನಾವಣೆಯಲ್ಲಿ ಸ್ಪರ್ಧಿಸುವ ಬದಲಾಗಿ ಜಗ್ಗೇಶ್ ಹಿಂಬಾಗಿಲಿನಿಂದ ವಿಧಾನಪರಿಷತ್ತನ್ನು ಪ್ರವೇಶಿಸಿದ್ದರು. ಈಗ ಮತದಾರರನ್ನು ಮತ್ತೆ ಎದುರಿಸುವ ಧೈರ್ಯವನ್ನು ಮಾಡಿರುವ ಜಗ್ಗೇಶ್ ಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಹೊರಟಿರುವುದು ಕುತೂಹಲಕಾರಿಯಾಗಿದೆ.

ಬಿಜೆಪಿ ಪಕ್ಷದ ಮುಖ್ಯ ತಾರಾ ಆಕರ್ಷಣೆಯೆಂದರೆ ನಟಿ ತಾರಾ. ಆದರೆ ಆಕೆ ಇತ್ತೀಚೆಗಷ್ಟೇ ಮಗುವಿಗೆ ಜನ್ಮ ನೀಡಿರುವುದರಿಂದ ಆಕೆ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಅಷ್ಟೇನು ಆಸಕ್ತಿ ತೋರಿಸುತ್ತಿಲ್ಲ. ಮೇಲಾಗಿ ಆಕೆ ಈಗಾಗಲೇ ವಿಧಾನ ಪರಿಷತ್ ಸದಸ್ಯೆ ಆಗಿರುವುದರಿಂದ ಜಾಣತನದಿಂದ ಚುನಾವಣೆಗೆ ಸ್ಪರ್ಧಿಸದಿರುವ ತೀರ್ಮಾನಕ್ಕೆ ಬಂದಿದ್ದಾರೆ.

ಕೆಜೆಪಿ ಟುಸ್ ಪಟಾಕಿ

ಬಿಜೆಪಿಯಿಂದ ಹೊರಬಂದು ಹೊಸ ಪಕ್ಷ ಸ್ಥಾಪಿಸಿರುವ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರ ಕರ್ನಾಟಕ ಜನತಾ ಪಕ್ಷವನ್ನೂ ಸಿನಿಮಾ ಜಗತ್ತಿನ ಹಲವು ತಾರೆಯರು ಸೇರಿಕೊಂಡಿದ್ದಾರೆ. ಸದ್ಯಕ್ಕೆ ಈ ಪಕ್ಷದಲ್ಲಿ ಅತ್ಯಂತ ಆಸಕ್ತಿಯಿಂದ ಓಡಾಡುತ್ತಿರುವ ನಟಿ ಎಂದರೆ ನೂರು ಚಿತ್ರಗಳ ಕಲಾವಿದೆ ಶ್ರುತಿ. ಲಿಂಗಾಯತ ಜನಾಂಗದವರಾದ ಗುಬ್ಬಿ ವೀರಣ್ಣನವರ ಮೊಮ್ಮಗಳಾದ ಶ್ರುತಿಯನ್ನು ಯಾವುದಾದರೂ ಒಳ್ಳೆಯ ಕ್ಷೇತ್ರದಿಂದ ನಿಲ್ಲಿಸಲು ಯಡಿಯೂರಪ್ಪನವರು ಚಿಂತಿಸುತ್ತಿದ್ದಾರೆ. ಅವರು ಯಾವ ಕ್ಷೇತ್ರ ಕೊಟ್ಟರೂ ಪಕ್ಷದ ಶಿಸ್ತಿನ ಸಿಪಾಯಿಯಂತೆ ತಾನು ಸ್ಪರ್ಧಿಸಲು ಸಿದ್ಧ ಎನ್ನುತ್ತಾರೆ ಶ್ರುತಿ.

ಈಗಾಗಲೇ ಕೆಜೆಪಿ ಪಡೆದಿರುವ ಕಲಾವಿದ ಸಂಗೀತ ನಿರ್ದೇಶಕ ಮತ್ತು ಗೀತ ರಚನಕಾರ ನಾಗೇಂದ್ರ ಪ್ರಸಾದ್. ಇವರು ದೊಡ್ಡಬಳ್ಳಾಪುರ ಕ್ಷೇತ್ರದಿಂದ ಮಾಜಿ ಸಚಿವ ಜಾಲಪ್ಪನವರ ಮಗನನ್ನು ಎದುರಿಸಲು ರೆಡಿಯಾಗಿದ್ದಾರೆ. ಯಡಿಯೂರಪ್ಪನವರ ಬಲಗೈ ಭಂಟ ಎಂದೇ ಗುರುತಿಸಲ್ಪಡುವ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷ ವಿಜಯಕುಮಾರ್ ಜಯನಗರ ಕ್ಷೇತ್ರದಿಂದ ಸ್ಪರ್ಧಿಸಲು ತೆರೆಮರೆಯಲ್ಲಿ ಪ್ರಯತ್ನಿಸುತ್ತಿದ್ದಾರೆ. ಕಲಾವಿದರ ಸಂಘದಲ್ಲಿ ಅತ್ಯಂತ ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ದೊಡ್ಡಣ್ಣ ಕೂಡ ಕೆಜೆಪಿ ಪಕ್ಷದಿಂದ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಕಳೆದ ಬಾರಿಯ ಚುನಾವಣೆಯಲ್ಲಿ ಇದೇ ದೊಡ್ಡಣ್ಣ ಹೆಂಡದ ದೊರೆ ವಿಜಯ್ ಮಲ್ಯನ ಸಂಯುಕ್ತ ಜನತಾ ದಳದಿಂದ ಸ್ಪರ್ಧಿಸಿ ಇಡಗಂಟನ್ನು ಕಳೆದುಕೊಂಡಿದ್ದರು. ಇವರಲ್ಲದೆ ಅನೇಕ ನಾಯಕ ನಾಯಕಿಯರು ಯದ್ದಿ ಸುತ್ತ ಟಿಕೆಟ್‌ಗಾಗಿ ಗಿರಕಿ ಹೊಡೆಯುತ್ತಿದ್ದಾರೆ.

ರಾಮುಲು ರಕ್ಷಿತಾ-ಪೂಜಾ ಪಾಟಲು

ಶ್ರೀರಾಮುಲುವಿನ ಬಿಎಸ್‌ಆರ್ ಪಕ್ಷದಲ್ಲಿ ನಟಿಯರಾದ ರಕ್ಷಿತಾ ಮತ್ತು ಪೂಜಾ ಗಾಂಧಿ ಚಿಕಮ್ ಧಮಕ್ ಎಂದು ಕಂಗೊಳಿಸುತ್ತಿದ್ದಾರೆ. ಆ ಪಕ್ಷದಲ್ಲಿ ರಕ್ಷಿತಾ ಉಪಾಧ್ಯಕ್ಷೆಯಾಗಿದ್ದರೆ ಪೂಜಾ ಮಹಿಳಾ ವಿಭಾಗದ ಅಧ್ಯಕ್ಷೆ. ಈಗ ರಕ್ಷಿತಾ ಗದಗ್ ಜಿಲ್ಲೆಯ ನರಗುಂದ ಕ್ಷೇತ್ರದಿಂದ ಸ್ಪರ್ಧಿಸಲು ತಯಾರಿ ನಡೆಸುತ್ತಿದ್ದಾರೆ.

ಕೇವಲ ಆರು ತಿಂಗಳಲ್ಲಿ ಮೂರು ಪಕ್ಷಗಳನ್ನು ಬದಲಾಯಿಸಿರುವ ಪೂಜಾ ಗಾಂಧಿ ರಾಯಚೂರು ನಗರ ಪ್ರದೇಶದಿಂದ ಸ್ಪರ್ಧಿಸಲು ಸಜ್ಜಾಗಿದ್ದಾರೆ. ಆಕೆ ಈ ಕ್ಷೇತ್ರವನ್ನು ಆಯ್ಕೆ ಮಾಡಿಕೊಳ್ಳಲು ಕಾರಣ ಆಕೆ ಈ ಹಿಂದೆ ಏಡ್ಸ್ ನಿರಾಶ್ರಿತರ ಪರವಾಗಿ ಅಲ್ಲಿ ಕೆಲಸ ಮಾಡಿದ್ದಂತೆ. ಅಂತೂಇಂತೂ ಮುಂಗಾರು ಮಳೆಯ ಈ ಹುಡುಗಿ ರಾಯಚೂರು ಎಂಬ ಬಿಸಿಲ ನಾಡಿನಲ್ಲಿ ತನ್ನ ರಾಜಕೀಯ ಅದೃಷ್ಟವನ್ನು ಪರೀಕ್ಷಿಸಲು ಹೊರಟಿದ್ದಾಳೆ.

ಮೊನ್ನೆ ಮೊನ್ನೆ ಯಡಿಯೂರಪ್ಪನವರಿಗೆ ಟಾಟಾ ಹೇಳಿ ಶ್ರೀರಾಮುಲು ಜೊತೆ ಹಸ್ತಲಾಘವ ಮಾಡಿರುವ ಸಂಗೀತ ನಿರ್ದೇಶಕ ಮದನ್ ಮಲ್ಲು ಮತ್ತು ಅವರ ಮಗ ಮಯೂರ್ ಪಟೇಲ್ ಕೂಡ ಚುನಾವಣೆಯಲ್ಲಿ ಸ್ಪರ್ಧಿಸಲು ಉತ್ಸುಕರಾಗಿದ್ದಾರೆ. ಮಗ, ಮಯೂರ್ ಮಹದೇವಪುರ ಕ್ಷೇತ್ರದಿಂದಲೂ, ತಂದೆ ಮದನ್ ಟಿ.ನರಸೀಪುರದಿಂದಲೂ ಸ್ಪರ್ಧಿಸಲಿದ್ದಾರಂತೆ. ಹೀಗೆ ಸಿನಿಮಾರಂಗದ ಅಪ್ಪ ಮತ್ತು ಮಗ ಚುನಾವಣೆಯಲ್ಲಿ ಸ್ಪರ್ಧಿಸುತ್ತಿರುವುದು ಸಿನಿಮಾ ಲೋಕದ ಮಟ್ಟಿಗೆ ಒಂದು ಹೊಸ ಅನುಭವ.

ಜೆಡಿಎಸ್-ಸಿನಿಮಾ ಅವಲಂಬನೆ ಇಲ್ಲ

ಮೂಲತಃ ಸಿನಿಮಾದವರೇ ಆದ ಕುಮಾರಸ್ವಾಮಿಯವರಿಗೆ ಚಿತ್ರರಂಗದವರ ಶಕ್ತಿ ಮತ್ತು ದೌರ್ಬಲ್ಯ ಎರಡೂ ಗೊತ್ತು. ನಟನಟಿಯರಿಂದಾಗಿ ಒಂದೇ ಒಂದು ಮತವೂ ಹೆಚ್ಚುವರಿಯಾಗಿ ಸಿಗುವುದಿಲ್ಲ ಎಂದು ಅರಿತಿರುವ ಕುಮಾರಸ್ವಾಮಿ ತಮ್ಮ ಪಕ್ಷಕ್ಕೆ ಸಿನಿಮಾದವರನ್ನು ಹೆಚ್ಚಾಗಿ ಆಕರ್ಷಿಸಿಲ್ಲ. ಸದ್ಯಕ್ಕೆ ಜನತಾದಳದಲ್ಲಿರುವ ಹಿರಿಯ ಕಲಾವಿದ ಎಂದರೆ ಅದು ನಿರ್ದೇಶಕ ಎಸ್. ನಾರಾಯಣ್. ನಾಣಿ ಅವರು ಪದ್ಮನಾಭನಗರ ಕ್ಷೇತ್ರದಿಂದ ಹಾಲಿ ಗೃಹ ಸಚಿವ ಅಶೋಕ್ ವಿರುದ್ಧ ಸ್ಪರ್ಧಿಸುತ್ತಾರೆ ಎಂದು ಈ ಹಿಂದೆ ಸುದ್ದಿ ಆಗಿತ್ತು. ಆದರೆ ಈಗ ಅವರು ತಮ್ಮ ಹುಟ್ಟೂರಾದ ಶಿವಮೊಗ್ಗದಿಂದ ಸ್ಪರ್ಧಿಸುವ ಲಕ್ಷಣಗಳು ಕಾಣಿಸುತ್ತಿವೆ.

ಹಾಗೆಯೇ ಜನತಾದಳದಲ್ಲಿ ಓಡಾಡುತ್ತಿರುವ ಕಿರುತೆರೆಯ ನಟಿ ಮಾಳವಿಕಾ ಅವಿನಾಶ್‌ಗೆ ಕುಮಾರಸ್ವಾಮಿ ಯಾವುದಾದರೊಂದು ಕ್ಷೇತ್ರವನ್ನು ದಯಪಾಲಿಸುವ ಸಾಧ್ಯತೆಯಿದೆ.

ಮಾಜಿ ಮುಖ್ಯಮಂತ್ರಿ ಎಸ್.ಬಂಗಾರಪ್ಪನವರ ಪುತ್ರ ಮಧು ಬಂಗಾರಪ್ಪ ಸೊರಬ ಕ್ಷೇತ್ರದಿಂದ ದಳದ ಟಿಕೆಟ್‌ನಲ್ಲಿ ಸ್ಪರ್ಧಿಸುವುದು ಗ್ಯಾರಂಟಿಯಾಗಿದೆ. ಆದರೆ ಇವರನ್ನು ಸಿನಿಮಾದವರು ಎಂದು ಕರೆಯುವುದಕ್ಕಿಂತ ರಾಜಕೀಯ ಕುಟುಂಬದವರು ಎಂದು ಹೇಳಿದರೆ ಹೆಚ್ಚು ಸೂಕ್ತವೇನೋ? ಅದೇ ಮಾತು ಕಾಂಗ್ರೆಸ್ ಪಕ್ಷದಿಂದ ಅದೇ ಸೊರಬ ಕ್ಷೇತ್ರದಿಂದ ಸ್ಪರ್ಧಿಸಲಿರುವ ಮಾಜಿ ಸಚಿವ ಕುಮಾರ ಬಂಗಾರಪ್ಪ ಅವರಿಗೂ ಅನ್ವಯವಾಗುತ್ತದೆ. ಅಂತೂ ಸೊರಬ ಇಬ್ಬರು ಸಹೋದರರ ನಡುವಿನ ಸವಾಲಿನ ಪ್ರದೇಶವಾಗಲಿದೆ.

ಈಗ ನಿರ್ಮಾಪಕರ ಸಂಘದ ಅಧ್ಯಕ್ಷರೂ ಮತ್ತು ಬೆಂಗಳೂರಿನ ನಗರಸಭೆಯ ಕಾರ್ಪೊರೇಟರೂ ಆಗಿರುವ ಮುನಿರತ್ನಂ ನಾಯ್ಡು ಕಾಂಗೈ ಟಿಕೆಟ್‌ಗಾಗಿ ತಮ್ಮ ಗಾಡ್‌ಫಾದರ್ ಬಿ.ಕೆ. ಹರಿಪ್ರಸಾದ್ ಮುಖಾಂತರ ಭಗೀರಥ ಪ್ರಯತ್ನ ನಡೆಸುತ್ತಿದ್ದಾರೆ. ಅವರಿಗೆ ಟಿಕೆಟ್ ಸಿಗುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ.

ಅತೃಪ್ತ ಆತ್ಮದಂತೆ ಎಲ್ಲಾ ಪಕ್ಷದ ನಾಯಕರ ಜೊತೆ ಓಡಾಡುತ್ತಿರುವ ನಿರ್ಮಾಪಕ ಕೆ.ಮಂಜು ಕೂಡ ಟಿಕೆಟ್‌ಗಾಗಿ ಹರಸಾಹಸ ಮಾಡುತ್ತಿದ್ದಾರೆ. ಅವರಿಗೆ ಯಾವ ಪಕ್ಷ ಯಾವ ಕ್ಷೇತ್ರದ ಟಿಕೆಟ್ ಕೊಡುತ್ತದೋ ಬಲ್ಲವರಿಲ್ಲ.

ಸಿನಿಮಾದವರು ಇಷ್ಟೊಂದು ಸಂಖ್ಯೆಯಲ್ಲಿ ಟಿಕೆಟ್‌ಗೆ ಪರದಾಡುತ್ತಿರುವುದನ್ನು ನೋಡಿ ಅವರೆಲ್ಲರಲ್ಲಿ ರಾಜಕೀಯ ಪ್ರಜ್ಞೆ ಅಥವಾ ಸಾಮಾಜಿಕ ಕಳಕಳಿ ಮೂಡಿದೆ ಎಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪು. ಯಾಕೆಂದರೆ ಈಗ ತಾರೆಯರಲ್ಲೂ ಎಲ್ಲಿಲ್ಲದ ಅಧಿಕಾರದಾಹ ಬಂದಿದೆ. ಅವರ ಈ ರಾಜಕೀಯ ಆಸಕ್ತಿ ಖಂಡಿತವಾಗಿಯೂ ಕ್ಷಣಿಕವಾದದ್ದು. ಹೀಗಾಗಿ ಈ ಬಾರಿಯ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಬಹುತೇಕ ನಟನಟಿಯರು ಸೋಲಿನ ರುಚಿ ಕಾಣುತ್ತಾರೆಯೇ ವಿನಃ ಅವರೆಲ್ಲರೂ ಗೆದ್ದು ವಿಧಾನಸೌಧದ ಮೆಟ್ಟಿಲೇರುವ ಸಾಧ್ಯತೆ ಕಡಿಮೆ.

● ಶೆಣೈ

...ಕ್ಷ ತೊಡೆಯ ನಡುವಿನ ಭಾಗವನ್ನು ಮುಚ್ಚಿಕೊಂಡಿರುವ ...ಂಗ. ಇದು ಕೆಟ್ಟದ್ದನ್ನು ಮಾಡಬಾರದು- ವಿಶೇಷತಃ ...ಂಗಸರ ಮೇಲೆ ಅತ್ಯಾಚಾರ ಮಾಡಕೂಡದು ಎಂಬ ...ದೇಶ ಸಾರುವ ಮಂಗ!

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

...ಉಡುಪಿ ದೇವಸ್ಥಾನಗಳ ಕಥೆ ಏನು?

ದಕ್ಷಿಣ ಕನ್ನಡ ಜಿಲ್ಲೆಯ ಶೈವ ದೇವಸ್ಥಾನವಾದ ...ಬ್ರಹ್ಮಣ್ಯ ಕ್ಷೇತ್ರವನ್ನು ಮಾಧ್ವರು ವಶಪಡಿಸಿಕೊಂಡ ಬಗ್ಗೆ ...ದಾಗ ಇಂತಹ ಇನ್ನೂ ಅನೇಕ ಆಕ್ರಮಣಗಳು, ...ಕ್ರಮಗಳು ನಡೆದಿರಬಹುದೆನಿಸುತ್ತದೆ. ಉದಾಹರಣೆಗೆ ...ಡುಪಿಯ ಕತೆಯನ್ನೇ ನೋಡಿ. ಉಡುಪಿಯಲ್ಲಿ ಕೃಷ್ಣ ...ವಸ್ಥಾನದ ಮುಂದೆ ಎರಡು ದೇವಸ್ಥಾನಗಳಿವೆ. ಒಂದು ...ದ್ರಮೌಳೀಶ್ವರ ದೇವಸ್ಥಾನ ಮತ್ತೊಂದು ಅನಂತೇಶ್ವರ ...ವಸ್ಥಾನ. ಹಿಂದೆ ಇವೆರಡೂ ಚಂದ್ರನಾಥ ಬಸದಿ, ...ನಂತನಾಥ ಬಸದಿ ಹೆಸರುಗಳಿದ್ದ ಜೈನ ಆರಾಧನಾಲಯ ...ಾಗಿದ್ದವು ಎಂದು ಹೇಳುವುದನ್ನು ಕೇಳಿದ್ದೇನೆ. ಜೈನ ...ದಿಯ ಕೆಲವು ಕುರುಹುಗಳು ಈಗಲೂ ಅಲ್ಲಿ ಉಳಿದಿವೆ ...ಂತೆ. ಬಹುಶಃ ಅವೆಲ್ಲವನ್ನೂ ಆಮೂಲಾಗ್ರ ...ಾಡಿಸಲೋ ಎಂಬಂತೆ ಈ ಎರಡೂ ದೇವಸ್ಥಾನಗಳ ...ೀರ್ಣೋದ್ಧಾರ ಸದ್ಯದಲ್ಲೇ ನಡೆಯಲಿದೆಯಂತೆ. ...ಷ್ಠಮಂಗಲ ಪ್ರಶ್ನೆ ನಡೆದಿದೆಯಂತೆ. ಅದು ಮಾಧ್ವರ ...ಚ್ಛಾನುಸಾರವಾಗಿಯೇ ಸೂಚನೆ ನೀಡುವುದು ಯಾರಿಗೂ ...ಹಿಸಬಹುದಾಗಿದೆ.

ಅವೆರಡೂ ಬಸದಿಗಳಾಗಿದ್ದರೂ ಅಲ್ಲಿ ಮಾಧ್ವರ ಪ್ರವೇಶ ...ಗಾಯಿತು? ಬಹುಶಃ ಶಂಕರಾಚಾರ್ಯರ ...ನುಯಾಯಿಗಳು ಬಸದಿಗಳನ್ನು ವಶಪಡಿಸಿ ಶಿವ ಮತ್ತು ಸುಬ್ರಹ್ಮಣ್ಯರನ್ನು ಅಲ್ಲಿ ಸ್ಥಾಪಿಸಿದ್ದಿರಬಹುದು. ಮುಂದೆ ಶೈವರನ್ನು ಅಲ್ಲಿಂದೋಡಿಸಿ ಮಾಧ್ವರು ಅದನ್ನು ಸ್ವಾಧೀನಪಡಿಸಿರಬಹುದು. ಆ ಪ್ರದೇಶದಲ್ಲಿರುವ ದೇವಸ್ಥಾನ ಮತ್ತು ಮಠಗಳ ಸ್ಥಾನವನ್ನು ನೋಡಿದಾಗಲೇ ನಡೆದಿರುವ ಸಂಗತಿಯನ್ನು ಊಹಿಸಲು ಸಾಧ್ಯವಿದೆ.

ಈ ಎರಡೂ ದೇವಸ್ಥಾನಗಳು ರಥಬೀದಿ ಎಂಬ ಪ್ರದೇಶದ ಮಧ್ಯಭಾಗದಲ್ಲಿದ್ದು, ಕೃಷ್ಣ ದೇವಸ್ಥಾನ ಒಂದು ಬದಿಯಲ್ಲಿದೆ. ದೇವಸ್ಥಾನಗಳಲ್ಲಿ ಭಕ್ತರು ದೊಡ್ಡ ಪ್ರಮಾಣದಲ್ಲಿ ಕಾಣಿಕೆ ಸುರಿಯುವುದನ್ನು ಕಂಡ ಮಠದವರು, ತಮ್ಮ ಮಠದಲ್ಲಿರುವ ಕೃಷ್ಣನನ್ನು ಪೂಜಿಸಲು, ಕಾಣಿಕೆ ಪಡೆಯಲು ಹೆಚ್ಚಿನ ಪ್ರಚಾರ ನೀಡುತ್ತಾ, ದೇವಸ್ಥಾನಗಳಿಗಿಂತ ಮಠದ ಕೃಷ್ಣನಿಗೆ ಹೆಚ್ಚು ಮಹತ್ವ ಬರುವಂತೆ ಮಾಡಿದರು.

ಹೀಗೆ ಶಿವ ಮತ್ತು ಸುಬ್ರಹ್ಮಣ್ಯ ದೇವಸ್ಥಾನವನ್ನು ಗೌಣವಾಗಿಸುವುದರಲ್ಲಿ ಯಶಸ್ವಿಯಾದ ಮಾಧ್ವರು ಇದೀಗ ಜೀರ್ಣೋದ್ಧಾರದ ಹೆಸರಿನಲ್ಲಿ, ಜೈನರ ಕಾಲದ ಸಕಲ ಕುರುಹುಗಳನ್ನು ನಾಶಪಡಿಸುವುದರಲ್ಲಿ ಸಂಶಯವಿಲ್ಲ. ವಸ್ತುನಿಷ್ಠ ಅಧ್ಯಯನ ಮಾಡಿರುವ ವಿದ್ವಾಂಸರು ಅನಂತೇಶ್ವರ ಮತ್ತು ಚಂದ್ರಮೌಳೀಶ್ವರ ದೇವಸ್ಥಾನಗಳ ಇತಿಹಾಸವನ್ನು ನಿರೂಪಿಸಿದರೆ ಒಳ್ಳೆಯದಿತ್ತು.

- ಶಂಕರ ಪೂಜಾರಿ, ಮೂಲ್ಕಿ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ ನುಡಿ ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ಪ್ರತಿಕ್ರಿಯೆಗಳನ್ನು 9980331427 ನಂಬರ್‌ಗೂ ಚಿಕ್ಕದಾಗಿ ಮತ್ತು ಚೊಕ್ಕದಾಗಿ ಕಳುಹಿಸಬಹುದು.

ರಮ್ಯಾ ಆ ತರಹದ ಹುಡುಗಿ ಅಲ್ಲ



ವಿಜಯಪ್ರಸಾದ್ ನಿರ್ದೇಶನದ 'ನೀರುದೋಸೆ' ಚಿತ್ರ ಆರಂಭದಿಂದಲೂ ಸುದ್ದಿ ಮಾಡುತ್ತಲೇ ಇದೆ.

ಮೊದಲ ಬಾರಿಗೆ ಜಗ್ಗೇಶ್ ಜೊತೆ ರಮ್ಯಾ ನಾಯಕಿಯಾಗಿ ನಟಿಸುತ್ತಿದ್ದಾರೆ, ಆನಂತರ ನಟಿಸುತ್ತಿಲ್ಲ, ಮತ್ತೆ ನಟಿಸಲು ರಮ್ಯಾ ಒಪ್ಪಿಕೊಂಡಿದ್ದಾಳೆ... ಹೀಗೆ ರಮ್ಯಾಳಿಂದಾಗಿ ಈ ಸಿನಿಮಾದ ಚಿತ್ರೀಕರಣ ಪ್ರಾರಂಭವಾಗುವ ಮೊದಲೇ ಹಲವಾರು ಬಾರಿ ಸುದ್ದಿ ಮಾಡಿತ್ತು.

ಈಗ ಅದೇ ಚಿತ್ರದ ಬಗ್ಗೆ ಮತ್ತೊಂದು ಸುದ್ದಿ ಕೇಳಿಬರುತ್ತಿದೆ. ಅದೇನೆಂದರೆ 'ನೀರುದೋಸೆ' ಚಿತ್ರದಲ್ಲಿ ದ್ವಿತೀಯ ನಾಯಕಿಯಾಗಿ ನಟಿಸಬೇಕಿದ್ದ ಭಾವನಾ ಈಗ ಆ ಯೋಜನೆಯಿಂದ ಹೊರಬಂದಿದ್ದಾರೆ ಎಂದೂ, ಅದಕ್ಕೆ ಕಾರಣ ರಮ್ಯಾ ಎಂಬ ಸುದ್ದಿ.

ಮೊನ್ನೆ ಘೋಷಣೆಯಾದ ರಾಜ್ಯಪ್ರಶಸ್ತಿ ಸಂದರ್ಭದಲ್ಲಿ ಅತ್ಯುತ್ತಮ ನಾಯಕಿ ಪ್ರಶಸ್ತಿಗಾಗಿ ರಮ್ಯಾ ಮತ್ತು ಭಾವನಾ ನಡುವೆ ತೀವ್ರವಾದ ಪೈಪೋಟಿ ನಡೆದಿತ್ತಂತೆ. ಕೊನೆಗೆ ಒಂದು ಮತದ ಅಂತರದಲ್ಲಿ ಭಾವನಾ ಪ್ರಶಸ್ತಿಯನ್ನು ಗೆದ್ದುಕೊಂಡರಂತೆ. ಹೀಗಾಗಿ ಭಾವನಾ ಮೇಲೆ ರಮ್ಯಾಗೆ ಸಿಟ್ಟಂತೆ. ಅದಕ್ಕೇ ಆಕೆ ನಿರ್ದೇಶಕ ವಿಜಯಪ್ರಸಾದ್ ಮುಖಾಂತರ ಭಾವನಾಳಿಗೆ ಕೊಕ್ ಕೊಟ್ಟಿದ್ದಾರೆ ಎಂಬುದು ಸುದ್ದಿಯ ವಿಸ್ತೃತ ರೂಪ.

ಆದರೆ ರಮ್ಯಾಳನ್ನು ಅತ್ಯಂತ ಹತ್ತಿರದಿಂದ ಬಲ್ಲವರಿಗೆ ಗೊತ್ತು ಆಕೆ ಯಾವತ್ತೂ ಈ ತರಹದ ಡರ್ಟಿ ಪಾಲಿಟಿಕ್ಸ್ ಮಾಡುವ ಹುಡುಗಿ ಅಲ್ಲವೇ ಅಲ್ಲ ಎಂದು.

ಇದಕ್ಕೆ ವಿರುದ್ಧವಾಗಿ ಭಾವನಾ ಆ ಚಿತ್ರದಿಂದ ಹೊರಹೋಗಲು ಇನ್ನೊಂದು ಕಾರಣವೂ ಗಾಳಿಸುದ್ದಿಯಾಗಿ ಗಾಂಧಿನಗರದಲ್ಲಿ ಹಬ್ಬಿದೆ. ಅದರ ಪ್ರಕಾರ, ಈ ಚಿತ್ರದಲ್ಲಿ ಭಾವನಾಳ ಪಾತ್ರ ಪ್ರಮುಖವಾದದ್ದು, ಆದರೂ ನಿರ್ಮಾಪಕರು ದೊಡ್ಡ ಮೊತ್ತ ಸಂಭಾವನೆ ನೀಡುವ ಮೊದಲು ಸಣ್ಣ ಮೊತ್ತವನ್ನು ನೀಡಲು ಮುಂದಾಗಿದ್ದರು. ಆದರೆ ಭಾವನಾ 'ನನಗಿಂತ ಸಣ್ಣ ಪಾತ್ರ ಮಾಡುವ ರಮ್ಯಾಳಿಗೆ ದುಬಾರಿ ಸಂಭಾವನೆ ನೀಡುವ ನಿರ್ಮಾಪಕರು ನನಗೆ ಯಾಕೆ ಕೊಡಲು ಒಪ್ಪುತ್ತಿಲ್ಲ' ಎಂದು ಆರೋಪಿಸಿ 'ನೀರುದೋಸೆ' ಚಿತ್ರಕ್ಕೆ ಗುಡ್‌ಬೈ ಹೇಳಿದ್ದಾಳೆ...

ಇದೆಲ್ಲ ಎಷ್ಟು ನಿಜವೋ ಗೊತ್ತಿಲ್ಲ, ಆದರೆ ಈಗ ಭಾವನಾ ಈ ಚಿತ್ರದಲ್ಲಿ ನಟಿಸುತ್ತಿಲ್ಲ ಎಂಬುದಂತೂ ಸ್ಪಷ್ಟ. ಈಗ ಭಾವನಾಳ ಸ್ಥಾನಕ್ಕೆ ಹಿರೋಯಿನ್ ಸುಮನ್ ರಂಗನಾಥ್ ಬಂದಿದ್ದಾರೆ. ವಿಜಯಪ್ರಸಾದ್ ಅವರ ಚೊಚ್ಚಲ ನಿರ್ದೇಶನ 'ಸಿದ್ಲಿಂಗು' ಚಿತ್ರದಲ್ಲಿ ನಟಿಸಿದ್ದ ರಮ್ಯಾ ಮತ್ತು ಸುಮನ್ ರಂಗನಾಥ್ ಈಗ 'ನೀರು ದೋಸೆ'ಯಲ್ಲಿ ಮತ್ತೊಮ್ಮೆ ಜೊತೆಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಎಂಬುದೇ ವಿಶೇಷ.




'ಸ್ಮೋಕ್' ಮಾಡಿದ ರಮ್ಯಾ

'ನೀರುದೋಸೆ' ಚಿತ್ರದಲ್ಲಿ ರಮ್ಯಾ ಪ್ರಥಮ ಬಾರಿಗೆ ವೇಶ್ಯೆ ಕಂ ಕ್ಲಬ್ ಡ್ಯಾನ್ಸರ್ ಪಾತ್ರದಲ್ಲಿ ನಟಿಸುತ್ತಿರುವುದು ನಿಮಗೆಲ್ಲ ಗೊತ್ತೇ ಇದೆ. ಈ ಚಿತ್ರಕ್ಕಾಗಿ ನಡೆದ ಮೊದಲ ದಿನದ ಚಿತ್ರೀಕರಣದ ಸಂದರ್ಭದಲ್ಲಿ ನಟಿ ರಮ್ಯಾ ಸಿಗರೇಟ್ ಸೇದಿರುವ ದೃಶ್ಯವನ್ನು ವಿಜಯಪ್ರಸಾದ್ ಅವರು ಚಿತ್ರೀಕರಿಸಿದರಂತೆ. ರಮ್ಯಾ ನಿರಾಯಾಸವಾಗಿ ಸಿಗರೇಟ್ ಸೇದುವುದನ್ನು ನೋಡಿ ಯೂನಿಟ್ ಹುಡುಗರಿಗೆಲ್ಲ ಆಶ್ಚರ್ಯವಾಯಿತಂತೆ.

ಈ ಅಪರೂಪದ ದೃಶ್ಯವನ್ನು ಸೆರೆಹಿಡಿಯಲು ಛಾಯಾಗ್ರಾಹಕರು, ಟಿ.ವಿ. ಚಾನೆಲ್‌ನವರು ಅಲ್ಲಿಗೆ ಬಂದಿದ್ದರೂ ರಮ್ಯಾ ಅದಕ್ಕೆ ಅವಕಾಶ ನೀಡದಿದ್ದದರಿಂದ ಎಲ್ಲರಿಗೂ ನಿರಾಸೆ ಆಯಿತಂತೆ. ಹೀಗಾಗಿ ರಮ್ಯಾ ಸಿಗರೇಟ್ ಸೇದುವುದನ್ನು ನೋಡಲು 'ನೀರುದೋಸೆ' ಬಿಡುಗಡೆಯಾಗುವತನಕ ಅವರ ಅಭಿಮಾನಿಗಳು ಕಾಯಲೇಬೇಕು.



'ವೀರ' ನಾಯಕಿ ಮಾಲಾಶ್ರೀ



ಮಾಲಾಶ್ರೀಯವರು ನಾಯಕ ಮತ್ತು ನಾಯಕಿಯಾಗಿ ನಟಿಸಿರುವ 'ವೀರ' ಚಿತ್ರ ಮುಂದಿನ ವಾರ ಬಿಡುಗಡೆಯಾಗಲಿದೆ. ಮಾಲಾಶ್ರೀಯವರ ಚಿತ್ರದಲ್ಲಿ ಸಾಮಾನ್ಯವಾಗಿ ನಾಯಕ ಇರುವುದಿಲ್ಲ, ಒಂದು ವೇಳೆ ಇದ್ದರೂ ನಾಯಕನಿಗೆ ಪ್ರಾಮುಖ್ಯತೆಯಿರುವುದಿಲ್ಲ, ಹೀಗಾಗಿ ಮಾಲಾಶ್ರೀ ನಟಿಸುವ ಚಿತ್ರಗಳಲ್ಲಿ ಆಕೆಯೇ ನಾಯಕ ಮತ್ತು ನಾಯಕಿ ಎಂಬ ಮಾತು ಚಾಲ್ತಿಯಲ್ಲಿದೆ.

ಎಂದಿನಂತೆ ಈ ಚಿತ್ರವನ್ನೂ ಮಾಲಾಶ್ರೀ ಅವರ ಮುದ್ದಿನ ಗಂಡ ರಾಮು ನಿರ್ಮಿಸಿದ್ದಾರೆ: 'ಕೋಟಿ ಖ್ಯಾತಿಯ ರಾಮು' ಎಂದೇ ಗಾಂಧಿನಗರದಲ್ಲಿ ಪ್ರಖ್ಯಾತಿ ಪಡೆದಿರುವ ಇವರು ಈ ಚಿತ್ರಕ್ಕಾಗಿ ಕಳೆದೆರಡು ವರ್ಷಗಳಿಂದ ಕೋಟಿ ಕೋಟಿ ಸುರಿಯುತ್ತಲೇ ಇದ್ದಾರೆ. ಈ ಚಿತ್ರದ ವಿಶೇಷತೆಯೆಂದರೆ ಇದರ ಶೇ.80 ರಷ್ಟು ಭಾಗ ವಿದೇಶದಲ್ಲಿ ಚಿತ್ರೀಕರಣಗೊಂಡಿರುವುದು.

ಅಂದಹಾಗೆ, ಈ ಚಿತ್ರದ ಮತ್ತೊಂದು ವಿಶೇಷತೆಯೆಂದರೆ ಸುಮಾರು 10 ವರ್ಷ
ನಂತರ ಮಾಲಾಶ್ರೀ ಮತ್ತೆ ಸೀರೆ ಉಟ್ಟುಕೊಂಡು ಹಾಡೊಂದರಲ್ಲಿ ಕಾಣಿಸಿಕೊಂಡಿರುವ
ಮಾಲಾಶ್ರೀ ಅವರೇ ಹೇಳುವ ಪ್ರಕಾರ ಶಿವರಾಜ್‌ಕುಮಾರ್ ಜೊತೆ 'ಗಡಿ
ಅಳಿಯ' ಎಂಬ ಚಿತ್ರದಲ್ಲಿ ಸೀರೆಯುಟ್ಟ ನಂತರ ಅವರು ಸೀರೆ
ನೋಡೇ ಇರಲಿಲ್ಲವಂತೆ.

ಐಟಂ ಅಲ್ಲ ಸ್ಪೆಷಲ್ ಅಂ

ರಮ್ಯಾ, ರಾಗಿಣಿ, ಐಂದ್ರಿತಾ ರೈ, ಪೂಜಾ ಗಾಂಧಿ ಮೊ
ನಟಿಯರು ಐಟಂ ಸಾಂಗ್‌ಗಳಲ್ಲಿ ವಿಜೃಂಭಿಸಿದ ನಂತರ
ಯುವ ನಾಯಕಿ ಹರ್ಷಿತಾ ಪೂಣಚ್ಚ ಕೂಡ ಮೈಚಳಿ
ಐಟಂ ಸಾಂಗ್‌ವೊಂದಕ್ಕೆ ಖುಷಿಯಾಗಿ ಕುಣಿದಿದ್ದಾಳೆ.



'ಕೇಸ್ ನಂ.18/9' ಎಂಬ ಚಿತ್ರ ತಮಿಳಿನ '
ಎನ್18/9' ಎಂಬ ಚಿತ್ರದ ರೀಮೇಕ್. ಇದರಲ್ಲಿ ನಿರ
ನಾಯಕನಾಗಿ ನಟಿಸುತ್ತಿದ್ದಾರೆ. ಈ ನಿರಂಜನ್ ಬೇರೆ ಯ
ಅಲ್ಲ, ಒಂದು ಕಾಲದಲ್ಲಿ ಉಪ್ಪಿಯ ಥಿಂಕ್‌ಟಾ
ಭಾಗವಾಗಿದ್ದವರು. ಆದರೆ ಉಪ್ಪಿ ಬರೆದು ನ
'ಕಠಾರಿವೀರ ಸುರಸುಂದರಾಂಗಿ' ಚಿತ್ರ ಬಿಡುಗಡೆ
ಸಂದರ್ಭದಲ್ಲಿ ಇದರ ಕಥೆ ತನ್ನದು ಎಂದು ತನ್ನ
ಉಪ್ಪಿ ವಿರುದ್ಧ ಹೈಕೋರ್ಟ್ ಮೆಟ್ಟಿಲೇರಿದ್ದರು ನಿರಂ

ವಾಸ್ತವವಾಗಿ ಆರಂಭದಲ್ಲಿ 'ಕೇಸ್ ನಂ.18/9' ಚಿ
ಐಟಂ ಸಾಂಗ್ ಇರಲೇ ಇಲ್ಲ, ಆದರೆ ಯಾವಾಗ ಹ
ಪೂಣಚ್ಚ ಐಟಂ ಸಾಂಗ್ ಮಾಡಲು ಒಪ್ಪಿಕೊಂಡಳೋ
ಕೂಡಲೇ ಆಕೆಗಾಗಿ ಒಂದು ವಿಶೇಷ ನಂಬರ್‌ನ್ನು
ಮಾಡಿ ಚಿತ್ರೀಕರಿಸಲಾಯಿತು.

ಇತ್ತೀಚಿಗೆ 'ಐಟಂ ಸಾಂಗ್' ಎಂದು ಕರೆ
ಬದಲು 'ಸ್ಪೆಷಲ್ ಸಾಂಗ್' ಎಂದು ಕರೆಯುವ
ಪರಿಪಾಠ ಆರಂಭವಾಗಿದೆ. ಹರ್ಷಿತಾ ಕೂಡ ಹಾ
ಹೇಳಿದಳು. "ಇದು ಐಟಂ ಸಾಂಗ್ ಅಲ್ಲ,
ಸಾಂಗ್. ನನ್ನೊಳಗೆ ಒಬ್ಬಳು ಉತ್ತಮ ನೃತ್ಯ
ಯಿದ್ದಳು. ಅದನ್ನು ಸಿನಿಮಾ ಜಗತ್ತಿಗೆ ತೋರಿ
ಅವಕಾಶಕ್ಕಾಗಿ ನಾನು ಕಾಯುತ್ತಿದ್ದೆ. ಆ ಕಾರಣ
ಈ ನೃತ್ಯವನ್ನು ಒಪ್ಪಿಕೊಂಡೆ. ಅಷ್ಟೇ ಅಲ್ಲ, ಸಖ
ನೃತ್ಯ ಮಾಡಿದ್ದೇನೆ" ಎಂದು ಹರ್ಷಿತಾ ಯಾ
ಮುಲಾಜಿಲ್ಲದೆ ತನ್ನ ನೃತ್ಯದ ಬಗ್ಗೆ ಮಾಧ್ಯಮ
ಮುಂದೆ ಕೊಚ್ಚಿಕೊಂಡಿದ್ದಾಳೆ.

• ಶ್ರೆ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail...